ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 9 | ಫೆಬ್ರವರಿ 26–ಮಾರ್ಚ್ 4, 2018 | ಪುಟ 16 | ರೂ. 10/-

web: www.janashakthi.co.in
e-mail : js_weekly@yahoo.com

ಅಗಲಿದ ರೈತ ಚೇತನ

ಕೆ.ಎಸ್.ಪುಟ್ಟಣ್ಣಯ್ಯ







ಆಶ್ವಾಸನೆ ಈಡೇರಿಸದ ಬಜೆಟ್ ವಿರುದ್ಧ ರೈತ-ಕಾರ್ಮಿಕರ ಆಕ್ರೋಶ

ಅಪಾಯಕಾರಿ ಮಟ್ಟ ಮುಟ್ಟಿದ ಚಮಚಾ ಬಂಡವಾಳಶಾಹಿ



ಕ-ಮಿಶನ್, ವಿಐಪಿ-ಸಂಸ್ಕೃತಿ ಆಧಾರ್ ಮತ್ತು ಚುನಾವಣೆ





ರಾಜಸ್ತಾನದಲ್ಲಿ ಮತ್ತೆ ಕಿಸಾನ್ ಮಹಾಪಡಾವ್



ವಿದ್ಯುತ್ ಗುತ್ತಿಗೆ ಕಾರ್ಮಿಕರ ಅನಿರ್ದಿಷ್ಟ ಧರಣಿ

ಪಿಣರಾಯಿ ಮಂಗಳೂರು ಭೇಟಿಗೆ ವರುಷ

ಚಮಚಾ ಬಂಡವಾಳಶಾಹಿ ಆತಂಕಕಾರಿ ಮಟ್ಟಕ್ಕೇರಿದೆ ಜೆಪಿಸಿ ರಚಿಸಿ–ಹಣಕಾಸು ಮಂತ್ರಿಗಳು ಉತ್ತರ ಕೊಡಲಿ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಈ ಬಿಜೆಪಿ ಸರಕಾರ ಮತ್ತು ಪ್ರಧಾನ ಮಂತ್ರಿಗಳ ಅಡಿಯಲ್ಲಿ ಚಮಚಾ ಬಂಡವಾಳಶಾಹಿ ಆತಂಕಕಾರಿ ಮಟ್ಟಕ್ಕೆ ಏರಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆತಂಕ ವ್ಯಕ್ತಪಡಿಸಿದೆ.

ಒಬ್ಬರಾದ ಮೇಲೆ ಒಬ್ಬರಂತೆ ಜನತೆಯ ಹಣವನ್ನು ವಂಚಿಸಿದ ಮತ್ತು ವ್ಯವಸ್ಥೆಯನ್ನು ದುರುಪಯೋಗ ಪಡಿಸಿಕೊಳ್ಳುವ ಕೈಚಳಕ ತೋರಿರುವ ಆರಿಸಿದ ಕಾರ್ಪೊರೇಟ್‌ಗಳು ನಾಡಿನ ಕಾನೂನನ್ನು ಎದುರಿಸುವ ಮೊದಲೇ ದೇಶ ಬಿಟ್ಟು ಹೋಗಲು ಅವಕಾಶ ನೀಡಲಾಗುತ್ತಿದೆ. ಇದರಲ್ಲಿ ಇತ್ತೀಚಿನವರು ನೀರವ್ ಮೋದಿ.

ಈ ವ್ಯಕ್ತಿಯನ್ನು ಆತನ ಅಪರಾಧಕ್ಕೆ ಒಂದು ಎಫ್‌ಐಆರ್ ಬರಲಿದ್ದಾಗ ಹೊರಹೋಗಲು ಮತ್ತು ಆಮೇಲೆ ದಾವೊಸ್ ವಿಶ್ವ ಆರ್ಥಿಕ ಶೃಂಗದಲ್ಲಿ ಪ್ರಧಾನಿಗಳೊಂದಿಗೆ ಒಂದು ಫೋಟೋಗೆ ಹಾಜರಾಗಲು ಬಿಟ್ಟದ್ದು ಹೇಗೆ ಎಂಬ ಪ್ರಶ್ನೆಗೆ ಸರಕಾರ ಉತ್ತರ ನೀಡಲು ನಿರಾಕರಿಸುತ್ತಿದೆ. ಈ ಕೇಸನ್ನು ಆಮೂಲಾಗ್ರವಾಗಿ ತನಿಖೆ ಮಾಡಬೇಕಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಈ ಹಿಂದೆ ಹಣಕಾಸು ಮೋಸಗಳು ನಡೆದಾಗ, ಹರ್ಷದ್ ಮೆಹ್ತ ಅಥವ ಕೇತನ್ ಪಾರಿಖ್ ಪ್ರಕರಣಗಳಲ್ಲಿ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಗಳನ್ನು ರಚಿಸಲಾಗಿತ್ತು. ಆಗಿನ ಹಣಕಾಸು ಮಂತ್ರಿಗಳು ಈ ಸಮಿತಿಗಳ ಮುಂದೆ ಹಾಜರಾಗಿದ್ದರು ಮತ್ತು ಸರಿಪಡಿಕೆ ಕ್ರಮಗಳನ್ನು ತಂದಿದ್ದರು. ಪ್ರಸಕ್ತ ಕೇಸಿನಲ್ಲೂ ಒಂದು ಜೆಪಿಸಿಯನ್ನು ರಚಿಸಬೇಕು ಮತ್ತು ಪ್ರಸಕ್ತ ಹಣಕಾಸು ಮಂತ್ರಿಗಳು ಎಲ್ಲ ಸಂಬಂಧಿತ ಪ್ರಶ್ನೆಗಳಿಗೆ ಉತ್ತರಿಸುವಂತೆ ಮಾಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಅಲ್ಲದೆ ಸಂಸತ್ತಿನಲ್ಲಿ ನೀಡಿರುವ ಹೇಳಿಕೆಯಲ್ಲಿ 2 ಕೋಟಿ ರೂ.ಗಳಷ್ಟು ಸುಸ್ತಿಯಾದ ಬ್ಯಾಂಕ್ ಸಾಲಗಳಿಗೆ ವಿನಾಯ್ತಿ ಕೊಡಲಾಗಿದೆ. ಯಾವ ಉದ್ಯಮಿಗಳ ಎಷ್ಟು ಸಾಲ ಬಾಕಿಗಳನ್ನು ಮಾಫಿ ಮಾಡಲಾಗಿದೆ ಎಂಬುದರ ಮಾಹಿತಿಯನ್ನು ಪ್ರಧಾನ ಮಂತ್ರಿಗಳು ಕೊಡಬೇಕು ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಪ್ರಧಾನಿಗಳು ತನ್ನ ವಿದೇಶಿ ಭೇಟಿಗಳ ಸಮಯದಲ್ಲಿ ದೇಶದ ಖಜಾನೆಯ ಖರ್ಚಿನಲ್ಲಿ ತನ್ನೊಂದಿಗೆ ಪಯಣಿಸುವ ಉದ್ಯಮಿಗಳ ಪಟ್ಟಿಯನ್ನೂ ಕೊಡಬೇಕು. ಈ ಹೆಸರುಗಳನ್ನು ಮುಚ್ಚಿಟ್ಟಿರುವುದು ಆಳುವ ಪಕ್ಷಕ್ಕೆ ನಿಕಟರಾಗಿರುವ ಆರಿಸಿದ ವ್ಯಕ್ತಿಗಳಿಗೆ ಪ್ರಯೋಜನ ಒದಗಿಸುವ ಚಮಚಾ ಬಂಡವಾಳಶಾಹಿ ಎಷ್ಟರ ಮಟ್ಟಿಗೆ ಆಚರಣೆಯಲ್ಲಿದೆ ಎಂಬುದನ್ನು ತೋರಿಸುತ್ತದೆ. ಇದು ಸಂಪೂರ್ಣ ನಿಂದನೀಯ, ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಈ ಮೇಲಿನ ಬೇಡಿಕೆಗಳ ಮೇಲೆ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಘಟಕಗಳಿಗೆ ಕರೆ ನೀಡಿದೆ.

ಕಲ್ಲಿದ್ದಲು ಖಾಸಗೀಕರಣ ನಿರ್ಧಾರ–ಇಂಧನ ಭದ್ರತೆಯನ್ನು ಬುಡಮೇಲು ಮಾಡುವ ಅಪಾಯಕಾರಿ ಕ್ರಮ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಕಲ್ಲಿದ್ದಲು ಗಣಗಾರಿಕೆಯನ್ನು ಭಾರತೀಯ ಮತ್ತು ವಿದೇಶಿ ಖಾಸಗಿಯವರಿಗೆ ತೆರೆದು ಕೊಡಲು ನಿರ್ಧರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಇದು ನರೇಂದ್ರ ಮೋದಿ ಸರಕಾರ ನವ–ಉದಾರವಾದಿ ಧೋರಣೆಗಳನ್ನು ಆಕ್ರಮಣಕಾರೀ ರೀತಿಯಲ್ಲಿ ಅನುಸರಿಸುತ್ತಿರುವುದರ ಭಾಗ ಎಂದು ಅದು ಹೇಳಿದೆ.

ಇದುವರೆಗೆ ಖಾಸಗಿ ವಲಯಕ್ಕೆ ಯಾವ ಉದ್ದಿಮೆಗಾಗಿ ಕಲ್ಲಿದ್ದಲು ಬ್ಲಾಕುಗಳನ್ನು ನೀಡಲಾಗಿತ್ತೋ ಆ ಉದ್ದಿಮೆಯ ಬಳಕೆಗಾಗಿ ಮಾತ್ರ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗಿತ್ತು. ಇಂತಹ ಗಣಿಗಾರಿಕೆಯಿಂದ ಬಂದ ಹೆಚ್ಚುವರಿ ಕಲ್ಲಿದ್ದಲನ್ನು ಕೋಲ್‌ಇಂಡಿಯ ಲಿ.(ಸಿಐಎಲ್)ಗೆ ಅಧಿಸೂಚಿತ ಬೆಲೆಗಳಲ್ಲಿ ಮಾರಬೇಕಿತ್ತು.

ಕಲ್ಲಿದ್ದಲು ಗಣಿಗಾರಿಕೆಯನ್ನು ಖಾಸಗೀಕರಿಸುವ ಮೋದಿ ಸರಕಾರದ ನಿರ್ಧಾರ ದೇಶದ ಇಂಧನ ಭದ್ರತೆಯನ್ನು ಬುಡಮೇಲು ಮಾಡುತ್ತದೆ ಮತ್ತು ಕಲ್ಲದ್ದಲು ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸುರಕ್ಷಿತತೆ ಮತ್ತು ಭದ್ರತೆಗೆ ಸಂಚಕಾರ ತರುತ್ತದೆ. ಈ ಅಪಾಯಕಾರಿ ನಡೆಗೆ ಕಾರ್ಮಿಕ ಸಂಘಗಳು ನಿರಂತರವಾಗಿ ವಿರೋಧದ ದನಿ ಎತ್ತಿಕೊಂಡು ಬಂದಿದ್ದಾರೆ.

ಮೋದಿ ಸರಕಾರದ ಈ ನಡೆಯನ್ನು ವಿರೋಧಿಸಬೇಕು ಮತ್ತು ಅದನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಕರೆ ನೀಡಿದೆ.

ರಾಷ್ಟ್ರೀಯ ಆರ್ಥಿಕಕ್ಕೆ ಮತ್ತು ಜನಸಾಮಾನ್ಯರಿಗೆ ಮಾರಕವಾದ ಕ್ರಮ–ಸಿಐಟಿಯು ಖಂಡನೆ

ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆಯಾದ ಸಿಐಟಿಯು ಕೇಂದ್ರ ಸಂಪುಟದ ಈ ನಿರ್ಧಾರವನ್ನು ಬಲವಾಗಿ ಖಂಡಿಸಿದೆ. 2016ರಲ್ಲಿ ಮೋದಿ ಸರಕಾರ ಕಲ್ಲಿದ್ದಲು ಗಣಿಗಳು (ವಿಶೇಷ ಅಂಶಗಳು) ಮಸೂದೆಯ ಮೂಲಕ 1973ರ ಕಲ್ಲಿದ್ದಲು ಗಣಿ ರಾಷ್ಟ್ರೀಕರಣ ಕಾಯ್ದೆಯಲ್ಲಿ ತಿದ್ದುಪಡಿ ತಂದಿತು. ಅದನ್ನು ಎಲ್ಲ ಕಾರ್ಮಿಕ ಸಂಘಟನೆಗಳು ಬಲವಾಗಿ ವಿರೋಧಿಸಿದ್ದವು. ಈಗ ಅದರ ಮುಂದುವರಿಕೆಯಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದಿರುವ ಸಿಐಟಿಯು ಇದೊಂದು ವಿನಾಶಕಾರಿ ನಡೆ, ರಾಷ್ಟ್ರೀಯ ಆರ್ಥಿಕ ಮತ್ತು ಜನಸಾಮಾನ್ಯರ ಹಿತಗಳಿಗೆ ಮಾರಕವಾಗಿದೆ ಎಂದು ಖಂಡಿಸಿದೆ.

ಕಲ್ಲಿದ್ದಲು ಗಣಿಗಳ ರಾಷ್ಟ್ರೀಕರಣದ ನಾಲ್ಕು ದಶಕಗಳ ಸಾಧನೆಯನ್ನು ಈ ಕ್ರಮ ಇಲ್ಲವಾಗಿಸುತ್ತದೆ. ರಾಷ್ಟ್ರೀಕೃತ ಕಲ್ಲಿದ್ದಲು ಗಣಿಗಳು ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಮತ್ತು ಕೈಗಾರಿಕಾ ಅಭಿವೃದ್ಧಿಯಲ್ಲಿ ಅಪಾರ ಕೊಡುಗೆ ನೀಡಿವೆ. ಈಗ ಅದನ್ನು ದೇಶಿ–ವಿದೇಶಿ ಖಾಸಗಿಯವರು ಅಡೆ–ತಡೆಯಿಲ್ಲದೆ, ಬೆಲೆಗಳ ಮೇಲೆ ಯಾವ ಹತೋಟಿಯೂ ಇಲ್ಲದೆ ಎಲ್ಲಿ ಬೇಕೆಂದಲ್ಲಿ ದುರುಪಯೋಗ ಪಡಿಸಿಕೊಳ್ಳಲು ತೆರೆದು ಕೊಡಲಾಗುತ್ತಿದೆ. ಇದು ಕಲ್ಲಿದ್ದಲು ಉತ್ಪಾದನೆಯ ಮೇಲೆ ಮತ್ತು ಖಾಸಗಿ ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸುರಕ್ಷಿತತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದಿರುವ ಸಿಐಟಿಯು, ದೇಶದ ಕಾರ್ಮಿಕ ಆಂದೋಲನ, ವಿಶೇಷವಾಗಿ ಕಲ್ಲಿದ್ದಲು ಉದ್ದಿಮೆಯಲ್ಲಿನ ಸಂಘಗಳು ನಿರ್ಧಾರಕ್ಕೆ ವಿರೋಧವನ್ನು ಕಟ್ಟಿ ಬೆಳೆಸಬೇಕು ಎಂದು ಕರೆ ನೀಡಿದೆ.

ರಾಜಸ್ಥಾನದ ರೈತರ ಅನಿರ್ದಿಷ್ಟ ಮಹಾಪಡಾವ್ ವಿಫಲಗೊಳಿಸಲು ರೈತ ಮುಖಂಡರ ಬಂಧನ– ಎಐಕೆಸ್ ಖಂಡನೆ



ಕಳೆದ ವರ್ಷ ಸಪ್ಟಂಬರ್‌ನಲ್ಲಿ ಇಡೀ ದೇಶದ ಗಮನ ಸೆಳೆದ ರಾಜಸ್ಥಾನದ ರೈತರ 13 ದಿನಗಳ ಐತಿಹಾಸಿಕ ಹೋರಾಟಕ್ಕೆ ತಲೆಬಾಗಬೇಕಾಗಿ ಬಂದ ಇಲ್ಲಿಯ ಬಿಜೆಪಿ ಸರಕಾರ, ರೈತರ ಸಾಲ ಮನ್ನಾ, ಬೆಳೆಗಳಿಗೆ ಫಲದಾಯಕ ಬೆಲೆ, ಧಾನ್ಯ ಖರೀದಿ, ಬಡರೈತರಿಗೆ ಪೆನ್ಶನ್ ಮುಂತಾದ ಮುಖ್ಯ ಬೇಡಿಕೆಗಳನ್ನು ಈಡೇರಿಸುವುದಾಗಿ ಒಪ್ಪಿತ್ತು. ಆದರೆ ಕಳೆದ ಆರು ತಿಂಗಳಲ್ಲಿ ಇವನ್ನು ಜಾರಿ ಮಾಡಲು ಯಾವ ಕ್ರಮಗಳನ್ನೂ ಕೈಗೊಳ್ಳದೆ ಹಿಂದೇಟು ಹಾಕುತ್ತಿದೆ. ಇದರಿಂದ ಆಕ್ರೋಶಗೊಂಡ ರೈತರು ಫೆಬ್ರುವರಿ 22ರಿಂದ ರಾಜಧಾನಿ ಜಯಪುರದಲ್ಲಿ ಅನಿರ್ದಿಷ್ಟ ಕಾಲದ ಮಹಾಪಡಾವ್ ನಡೆಸಲು ಎಐಕೆಸ್‌ನ ರಾಜ್ಯ ಘಟಕದ ನೇತೃತ್ವದಲ್ಲಿ ನಿರ್ಧರಿಸಿದರು. ರಾಜ್ಯಾದ್ಯಂತ ವ್ಯಾಪಕ ಪ್ರಚಾರದ ನಂತರ ಲಕ್ಷಾಂತರ ರೈತರು ರಾಜಧಾನಿಗೆ ಬಂದೆರಗುತ್ತಾರೆ ಎಂಬ ಭೀತಿಯಿಂದ ಬಿಜೆಪಿ ಸರಕಾರ ಸಪ್ಟಂಬರ್ ಚಳುವಳಿಗೆ ನೇತೃತ್ವ ನೀಡಿದ್ದ ಎಐಕೆಸ್ ಉಪಾಧ್ಯಕ್ಷ ಆಮ್ರ ರಾಮ್, ಹಿರಿಯ ರೈತ ಮುಖಂಡ ಹೇತ್ರಾಮ್ ಬೇನಿವಾಲ್, ಶಿವಪತ್ ಮೇಘ್ವಾಲ್ ಮುಂತಾದ ಹಲವು ಮುಖಂಡರನ್ನು ಮತ್ತು ಸಕ್ರಿಯ ಕಾರ್ಯಕರ್ತರನ್ನು ಬಂಧಿಸಿತು. ಅಲ್ಲದೆ ರಾಜ್ಯ ವಿವಿಧೆಡೆಗಳಿಂದ ಮಹಾಪಡಾವ್‌ಗೆ ಹೊರಟಿದ್ದ ರೈತರನ್ನು ಅಲ್ಲಲ್ಲೇ ತಡೆಯಲು ಬಿಜೆಪಿ ಮತ್ತು ಆರೆಸ್ಸೆಸ್ ಮಂದಿ ತಡೆದಿದ್ದಾರೆ. ಇದರ ವಿರುದ್ಧ ರಾಜ್ಯವ್ಯಾಪಿಯಾಗಿ ಪ್ರತಿಭಟನೆಗಳು ಎದ್ದು ಬಂದಿವೆ,

ವಚನಭಂಗ ಮಾಡಿದ್ದಲ್ಲದೆ, ರೈತರ ಪ್ರತಿಭಟನೆಯ ಹಕ್ಕನ್ನು ದಮನ ಮಾಡುತ್ತಿರುವ ಕ್ರಮ ಇದು ಎಂದು ಅಖಿಲ ಭಾರತ ಕಿಸಾನ್ ಸಭಾ ಬಲವಾಗಿ ಖಂಡಿಸಿದೆ. ಬಿಜೆಪಿ ಸರಕಾರ ರೈತರ ಚಳುವಳಿಯಿಂದ ಭಯಗ್ರಸ್ತಗೊಂಡಿದೆ ಎಂಬುದನ್ನು ಇದು ಬಹಿರಂಗಗೊಳಿಸಿದೆ, ಆದರೆ ಇಂತಹ ದಮನಚಕ್ರಕ್ಕೆ ರೈತರು ಹೆದರುವುದಿಲ್ಲ, ಏಕೆಂದರೆ ಎಐಕೆಎಸ್ ಹೋರಾಟಗಳಲ್ಲಿ ಗಟ್ಟಿಗೊಂಡಿರುವ

ಪುಟ 14 ನೋಡಿ

ಜನರಿಂದ ದೂರವಾಗಿರುವ ಸರಕಾರದ ಹತಾಶೆಯ ಪ್ರದರ್ಶನ ರೈತರ ದಮನಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ವಸುಂಧರ ರಾಜೇ ಸರಕಾರದ ವಿಶ್ವಾಸ ಘಾತದ ವಿರುದ್ಧ ಪ್ರತಿಭಟಿಸುತ್ತಿರುವ ರೈತರ ಮೇಲೆ ದಮನಚಕ್ರ ಹರಿಯ ಬಿಟ್ಟಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ನೂರಾರು ರೈತ ಮುಖಂಡರನ್ನು, ಕಾರ್ಯಕರ್ತರನ್ನು ಬಂಧಿಸಿ ಅವರ ಮೇಲೆ ಸುಳ್ಳು ಕೇಸುಗಳನ್ನು ಹಾಕಲಾಗುತ್ತಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿರುವ ಆಮ್ರರಾಮ್, ಮಾಜಿ ಶಾಸಕರಾದ ಪೇಮ ರಾಮ್, ಪವನ್ ದುಗ್ಗಲ್ ಅವರನ್ನೂ ಬಂಧಿಸಲಾಗಿದೆ.

ಪ್ರತಿಭಟನೆಯ ಕನಿಷ್ಟ ಪ್ರಜಾಪ್ರಭುತ್ವ ಹಕ್ಕನ್ನೂ ನಿರಾಕರಿಸುವ ರಾಜೇ ಸರಕಾರ ಮತ್ತೊಮ್ಮೆ ತನ್ನ ಸರ್ವಾಧಿಕಾರಶಾಹಿ ಸ್ವರೂಪವನ್ನು ಪ್ರಕಟಗೊಳಿಸಿದೆ. ಜನಗಳಿಂದ ದೂರವಾಗಿರುವ ಒಂದು ಸರಕಾರದ ಹತಾಶೆಯನ್ನು ಇದು ತೋರಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಎಲ್ಲ ಬಂಧಿತರನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ಸುಳ್ಳು ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು, ಕಿಸಾನ್ ಸಭಾದ ನ್ಯಾಯಯುತ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು ಎಂದು ಆಗ್ರಹಿಸಿದೆ.

ಐಕ್ಯ ಹೋರಾಟಗಳ ಸಮಯದಲ್ಲಿ ಒಂದು ದೊಡ್ಡ ನಷ್ಟ

ಕೆ.ಎಸ್.ಪುಟ್ಟಣಯ್ಯನವರಿಗೆ ಎಐಕೆಎಸ್ ಶ್ರದ್ಧಾಂಜಲಿ

ಕರ್ನಾಟಕ ರಾಜ್ಯ ರೈತ ಸಂಘದ ಹಿರಿಯ ಮುಖಂಡರಾದ ಕೆ.ಎಸ್.ಪುಟ್ಟಣ್ಣಯ್ಯ ಫೆಬ್ರುವರಿ 18 ರಂದು ತೀವ್ರ ಹೃದಯಾಘಾತದಿಂದ ನಿಧನರಾಗಿರುವುದಕ್ಕೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ. ಕರ್ನಾಟಕ ವಿಧಾನಸಭೆಯ ಸದಸ್ಯರಾಗಿಯೂ ಬೀದಿಗಳಲ್ಲಿ ನಡೆಯುವ ಹೋರಾಟಗಳಲ್ಲಿಯೂ ಅವರು ರೈತಾಪಿ ಜನಗಳ ಹಿತಾಸಕ್ತಿಗಳಿಗೆ ದನಿ ನೀಡುತ್ತಿದ್ದರು ಎಂದು ಶ್ರದ್ಧಾಂಜಲಿ ಅರ್ಪಿಸಿರುವ ಎಐಕೆಎಸ್ ರೈತಾಪಿಗಳ ಸಂಘಟನೆಗಳ ನಡುವೆ ಸೌಹಾರ್ದತೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಅವರು ಐಕ್ಯತೆ ಕಟ್ಟುವಲ್ಲಿ ಒಂದು ಮಹತ್ವದ ಪಾತ್ರ ವಹಿಸಿದ್ದರು ಎಂದಿದೆ.

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ನಡೆಸಿದ ಕಿಸಾನ್ ಮುಕ್ತಿ ಯಾತ್ರಾ ಮತ್ತು ಕಿಸಾನ್ ಸಂಸದ್‌ನಲ್ಲಿ ಅವರು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ರೈತ–ವಿರೋಧಿ ನೀತಿಗಳ ವಿರುದ್ಧ ರೈತರನ್ನು ಸಕ್ರಿಯವಾಗಿ ಅಣಿನೆರೆಸಿದರು. ಕಿಸಾನ್ ಮುಕ್ತಿ ಯಾತ್ರೆಗೆ ಪಾಂಡವಪುರದಲ್ಲಿ ಒಂದು ಬೃಹತ್ ಸ್ವಾಗತ ಸಭೆಯನ್ನು ಸಂಘಟಿಸಿದರು. ಕಿಸಾನ್ ಸಂಸದ್‌ನಲ್ಲಿ ಮಂಡಿಸಿದ ಎರಡು ಮಸೂದೆಗಳ ಬಗ್ಗೆ ಸಮಾಲೋಚನೆಗೆ ಫೆಬ್ರವರಿ 19 ರಂದು ಫೆಬ್ರವರಿ 19 ರಂದು ಬೆಂಗಳೂರಿನಲ್ಲಿ ನಡೆಯಲಿದ್ದ ಸಭೆಯಲ್ಲಿ ಅವರು ಭಾಗವಹಿಸುವವರಿದ್ದರು.

ಕಬ್ಬು, ರೇಶ್ಮೆ ಮತ್ತು ನೀರಾವರಿಯಂತಹ ಪ್ರಶ್ನೆಗಳ ಮೇಲೆ, ಭೂಮಿ ಹಕ್ಕುಗಳ ಕುರಿತಾಗಿಯೂ ಅವರು ಎಐಕೆಎಸ್‌ಗೆ ಸಂಯೋಜಿತವಾಗಿರುವ ಕರ್ನಾಟಕ ಪ್ರಾಂತ ರೈತ ಸಂಘದೊಂದಿಗೆ ನಿಕಟವಾಗಿ ಕೆಲಸ ಮಾಡಿದ್ದರು. ಅವರದ್ದು ರಾಜ್ಯಾದ್ಯಂತ ವ್ಯಾಪಕವಾಗಿ ಗೌರವ ಗಳಿಸಿದ್ದ ಒಂದು ಮಹತ್ವದ ದನಿಯಾಗಿತ್ತು ಎಂದಿರುವ ಎಐಕೆಸ್ ಅವರ ಕುಟುಂಬಕ್ಕೆ, ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಮತ್ತು ಅವರೊಂದಿಗೆ ಕೆಲಸ ಮಾಡಿರುವವರಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಮಿಶನ್–ಕಮಿಶನ್, ವಿಐಪಿ–ಸಂಸ್ಕೃತಿ, ಆಧಾರ್ ಮತ್ತು ಚುನಾವಣೆ

ಸಂಪಾದಕೀಯ

ಕರ್ನಾಟಕ ವಿಧಾನಸಭೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ಚುನಾವಣಾ ಪ್ರಚಾರದ ಬಿಸಿಯೇರಿದೆ. ಪ್ರಮುಖ ಪಕ್ಷಗಳಾದ ಕಾಂಗ್ರೆಸ್–ಬಿಜೆಪಿ–ಜೆಡಿ(ಎಸ್) ಗಳು ತಮ್ಮ ಹಿಂದಿನ ಸಾಧನೆ, ಮುಂದಿನ ಕಾರ್ಯಕ್ರಮಗಳ ಬಗ್ಗೆ, ಜನರ ಸಮಸ್ಯೆಗಳು ಹಾಗೂ ಅವುಗಳಿಗೆ ತಮ್ಮ ಪರಿಹಾರಗಳ ಬಗ್ಗೆ ಪ್ರಚಾರ–ಪೈಪೋಟಿಯಲ್ಲಿ ತೊಡಗುತ್ತಿಲ್ಲ. ಬದಲಾಗಿ ಯಾವುದೇ ಘಟನೆ ಪ್ರಕರಣ ನಡೆದರೂ ಅದನ್ನು ತಮ್ಮ ಎದುರಾಳಿಗಳ ವಿರುದ್ಧ ಕೆಸರು ಎರಚಾಟದಲ್ಲಿ ಬಳಸಲು, ಬೇಜವಾಬ್ದಾರಿ ಆಧಾರರಹಿತ ಆಪಾದನೆಗಳನ್ನು ಮಾಡಲು, ಕೆಟ್ಟ ಭಾಷೆ ಬಳಸಲು ಯಾವ ಕೀಳು ಮಟ್ಟಕ್ಕೆ ಹೋಗಲೂ ಹೇಸುತ್ತಿಲ್ಲ. ಇದರಲ್ಲಿ ಸ್ವತಃ ಪ್ರಧಾನಿ ಮತ್ತು ಬಿಜೆಪಿ ರಾಷ್ಟ್ರಾಧ್ಯಕ್ಷರೇ ಮೇಲ್ಪಂಕ್ತಿ (ಕೀಳ್ಪಂಕ್ತಿ?) ಹಾಕಿ ಕೊಡುತ್ತಿದ್ದಾರೆಂಬುದು ಕಳವಳಕಾರಿ ವಿಷಯ. ಅದು ಚುನಾವಣೆ ಹತ್ತಿರ ಬಂದಂತೆ ಇನ್ನಷ್ಟು ತೀಕ್ಷ್ಣತೆಯಿಂದ ಮುಂದುವರೆದಿದೆ. ಅವರ ಜತೆ ಇದರಲ್ಲಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸಿನ ಹಿರಿಯ ನಾಯಕರೂ 'ಪೈಪೋಟಿ'ಯಲ್ಲಿ ತೊಡಗಿದ್ದಾರೆ.

ಪ್ರಧಾನಿ ಮೋದಿ ಮತ್ತು ಬಿಜೆಪಿ ರಾಷ್ಟ್ರಾಧ್ಯಕ್ಷರೇ ಪದೇ ಪದೇ ಎತ್ತುತ್ತಿರುವ ಭ್ರಷ್ಟಾಚಾರದ ವಿಷಯ ಇಂದಿನ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತ ವಿಷಯವಾದರೂ, ಅದು 'ಪರ್ಸೆಂಟೇಜ್, 'ಕಮಿಶನ್–ಮಿಶನ್' ವಿವಾದ'ಗಳಲ್ಲಿ ಹಾಗೂ 'ನೀವೇನು ಕಡಿಮೆ' ಆಪಾದನೆಗಳ ಕೊಚ್ಚೆಯಲ್ಲಿ ಸಿಕ್ಕು ಹಾಕಿಕೊಂಡಿದೆ. ಕರ್ನಾಟಕದಲ್ಲೂ ಕೇಂದ್ರದಲ್ಲೂ ಹೆಚ್ಚಿನ ಸರಕಾರಿ ಸಾರ್ವಜನಿಕ ಕಾಮಗಾರಿಗಳಲ್ಲಿ ಯೋಜನೆಗಳಲ್ಲಿ 'ಪರ್ಸೆಂಟೇಜ್ ವ್ಯವಹಾರ' ನಡೆಯುತ್ತದೆ ಎಂಬುದು ಸಾರ್ವಜನಿಕ ಗುಟ್ಟು. ಅದರಲ್ಲಿ ಮಂತ್ರಿಗಳು, ಶಾಸಕರು, ಅಧಿಕಾರಿಗಳು, ಕಾರ್ಪೊರೇಟರ್ ಮುಂತಾದ ಸ್ಥಳೀಯ ಸಂಸ್ಥೆಗಳ ಸದಸ್ಯರಿಗೆ ಪಾಲೂ ಇರುತ್ತದೆ ಎಂಬುದೂ ಗುಟ್ಟಲ್ಲ. ಭ್ರಷ್ಟಾಚಾರದ ನಿರ್ದಿಷ್ಟ ಪ್ರಕರಣಗಳನ್ನು ಬಯಲು ಮಾಡುವುದು, ಅದನ್ನು ಹೋಗಲಾಡಿಸಲು ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಚುನಾವಣಾ ಸಮಯದಲ್ಲಿ ಚರ್ಚೆ ಆಗಬೇಕಾದ ವಿಷಯ. ಆದರೆ ಅವುಗಳಲ್ಲಿ ಈ ಯಾವ ಪಕ್ಷಗಳಿಗೂ ಆಸಕ್ತಿ ಇಲ್ಲ. 'ಲೋಕಪಾಲ/ ಲೋಕಾಯುಕ್ತ ವ್ಯವಸ್ಥೆ ತರಲೇ ಇಲ್ಲ' ಮತ್ತು 'ಲೋಕಾಯುಕ್ತ ವ್ಯವಸ್ಥೆ ಕಿತ್ತು ಹಾಕಿದಿರಿ' – ಎಂಬ ಆಪಾದನೆಗಳ ಪೈಪೋಟಿ ನಡೆದಿದೆ. ನೀರವ್ ಮೋದಿ ಪ್ರಕರಣದ ಹಿನ್ನೆಲೆಯಲ್ಲಿ ನವ–ಉದಾರವಾದಿ ಆರ್ಥಿಕತೆಯ ಅನಿವಾರ್ಯ ಭಾಗವಾದ, ಹಣಕಾಸು ಮತ್ತು ಪ್ರಭುತ್ವ ಸಂಸ್ಥೆಗಳ ಶಾಮೀಲಿನಲ್ಲಿ ನಡೆಯುವ ಭಾರಿ ಹಗರಣಗಳು, ಭಾರೀ ಉದ್ಯಮಿಗಳ ವಸೂಲಿ ಮಾಡ(ಲಾಗ)ದ ಸಾಲಗಳ ಬಗ್ಗೆ ಚರ್ಚೆ ನಡೆಯುತ್ತಿಲ್ಲ. ಚುನಾವಣೆಯಲ್ಲಿ ಒಟ್ಟಾರೆ ರಾಜಕಾರಣದಲ್ಲಿ ಭ್ರಷ್ಟಾಚಾರವನ್ನು ಹೋಗಲಾಡಿಸುವ ಚುನಾವಣಾ ಸುಧಾರಣೆಗಳು ಹಾಗೂ ಇತರ ಕ್ರಮಗಳ ಬಗ್ಗೆ ಚರ್ಚೆ ನಡೆಯುವಂತೆ ಮಾಡುವುದು ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಪಕ್ಷಗಳ ಕರ್ತವ್ಯ.

ಅದೇ ರೀತಿ ಸಾಮಾನ್ಯ ಕಾನೂನು–ಸುವ್ಯವಸ್ಥೆ (ಅಥವಾ ಅದರ ಅಭಾವ) ಮತ್ತು ಸಮಾಜದ ಪ್ರತಿಷ್ಠಿತರು ಪ್ರಭುತ್ವದಲ್ಲಿ ತಮ್ಮ ಪ್ರಭಾವ ದುರ್ಬಳಕೆ ಮಾಡುವ 'ವಿಐಪಿ–ಸಂಸ್ಕೃತಿ'ಯನ್ನು ವಿರೋಧಿಸುವುದು ಚುನಾವಣಾ ವಿಷಯವಾಗಬೇಕಾದ್ದು. ಆದರೆ ಒಂದು ಕಡೆ ತಾವೇ ಕ್ಷುಲ್ಲಕ ಮತ್ತು ಹುಸಿ ಸಮಸ್ಯೆಗಳ ಬಗ್ಗೆ 'ನಗರ/ಜಿಲ್ಲೆ/ರಾಜ್ಯಕ್ಕೆ ಬೆಂಕಿ ಕೊಡುವ' ಮಾತನಾಡುತ್ತಾ ಹಾಗೂ ಕೆಲವೊಮ್ಮೆ ನಿಜವಾಗಿಯೂ ಬೆಂಕಿ ಕೊಟ್ಟು ದಾಂಧಲೆ ಎಬ್ಬಿಸುವ; ಇನ್ನೊಂದು ಕಡೆ 'ಕಾನೂನು–ಸುವ್ಯವಸ್ಥೆ ಮುರಿದು ಬಿದ್ದಿದೆ', 'ಸರಕಾರ ರಾಜೀನಾಮೆ ಕೊಡಬೇಕು ಇಲ್ಲವೆ ಅದನ್ನು ವಜಾ ಮಾಡಬೇಕು' ಎಂದು ಕೂಗಾಡುವ ಬಿಜೆಪಿಯ 'ಡೆಡ್ ಬಾಡಿ ಪಾಲಿಟಿಕ್ಸ್'ನ ಡಬ್ಬಲ್–ಗೇಮ್ ಮುಂದುವರೆದಿದೆ. ಕಾಂಗ್ರೆಸ್ ನಾಯಕರು (ಅಥವಾ ಅವರ ಮಕ್ಕಳು/ಬೆಂಬಲಿಗರು) ಚುನಾವಣಾ ಸ್ಪೆಶಲ್ ಶೋ ಎಂಬಂತೆ 'ವಿಐಪಿ–ಸಂಸ್ಕೃತಿ'ಯ ಎರಡು ಅಸಹ್ಯ ಪ್ರದರ್ಶನವನ್ನು ಕೊಟ್ಟು ಬಿಜೆಪಿಯ ಪ್ರಚಾರಕ್ಕೆ ದಾಳವಾಗುತ್ತಿದ್ದಾರೆ. ವಿವಾದಿತ ಜಮೀನಿಗೆ ಖಾತೆ ಮಾಡಿಕೊಡದ ಕಾರಣಕ್ಕೆ ಹೊರಮಾವು ಬಿಬಿಎಂಪಿ ಕಚೇರಿಗೆ ನುಗ್ಗಿ ದಾಂಧಲೆ ನಡೆಸಿರುವ ಕಾಂಗ್ರೆಸಿನ ಕೆ.ಆರ್.ಪುರಂ ಬ್ಲಾಕ್ ಮಾಜಿ ಅಧ್ಯಕ್ಷ ನಾರಾಯಣಸ್ವಾಮಿ, ದಾಖಲೆಗಳ ಮೇಲೆ ಪೆಟ್ರೋಲ್ ಎರಚಿ ಬೆಂಕಿ ಹಚ್ಚಲು ಯತ್ನಿಸಿದ್ದಾರೆ. ಕೆ.ಆರ್.ಪುರ ಶಾಸಕ ಬೈರತಿ ಬಸವರಾಜು ಅವರ ಆಪ್ತರಾಗಿರುವ ನಾರಾಯಣಸ್ವಾಮಿ, ಫೆ.16ರ ಬೆಳಿಗ್ಗೆ ಕಚೇರಿಗೆ ನುಗ್ಗಿ ಗಲಾಟೆ ಮಾಡಿದ್ದರು. ಈ ಸಂಬಂಧ ಪಾಲಿಕೆಯ ಪ್ರಭಾರ ಕಂದಾಯ ಅಧಿಕಾರಿ ಸತೀಶ್ ಕುಮಾರ್ ರಾಮಮೂರ್ತಿನಗರ ಠಾಣೆಗೆ ಮಂಗಳವಾರ ದೂರು ಕೊಟ್ಟಿದ್ದಾರೆ. ಆ ಮೇಲೆ ನಾರಾಯಣಸ್ವಾಮಿ ತಲೆಮರೆಸಿಕೊಂಡಿದ್ದರು. ಕಾಂಗ್ರೆಸ್ ಶಾಸಕ ಎನ್.ಎ. ಹ್ಯಾರಿಸ್ ಪುತ್ರ ಮೊಹಮದ್ ನಲಪಾಡ್ ಬೆಂಗಳೂರಿನ 'ಫರ್ಜಿ ಕೆಫೆ'ಯಲ್ಲಿ ಕ್ಷುಲ್ಲಕ ಕಾರಣಕ್ಕೆ ವಿದ್ವತ್ ಎಂಬ ಯುವಕನ ಕತೆ ಜಗಳವಾಡಿ ಆತನ ಮೇಲೆ ಕೆಫೆಯಲ್ಲೂ ಮತ್ತು ನಂತರ ಆಸ್ಪತ್ರೆಯಲ್ಲೂ ತೀವ್ರ ಹಲ್ಲೆ ನಡೆಸಿದ. ಆ ಮೇಲೆ ಕೆಲವು ದಿನಗಳ ಕಾಲ ತಲೆಮರೆಸಿಕೊಂಡ. ಈ ಎರಡೂ ಪ್ರಕರಣಗಳಲ್ಲಿ ಪೋಲಿಸ್ ರಾಜಕೀಯ ಪ್ರಭಾವದಿಂದಾಗಿ ಕೇಸು ದಾಖಲು ಮಾಡುವುದರಲ್ಲಿ ವಿಳಂಬ ಮಾಡಿದ್ದು ಮತ್ತು ಬಂಧಿಸದೆ ಹೋದದ್ದು, ಹಲವು ದಿನಗಳ ನಂತರ 'ರಾಜಕೀಯ ಒತ್ತಡ' ತೀವ್ರವಾದಾಗಲಷ್ಟೇ ಆಪಾದಿತರೇ ಸ್ವತಃ ಶರಣಾಗತರಾದದ್ದು 'ವಿಐಪಿ–ಸಂಸ್ಕೃತಿ'ಯ ಅಸಹ್ಯ ಪ್ರದರ್ಶನವಾಗಿತ್ತು.

ಕರಾವಳಿ ಚುನಾವಣಾ ಪ್ರಚಾರದಲ್ಲಿದ್ದ ಅಮಿತ್ ಶಾ ಇದನ್ನು ಬಳಸುವುದರಲ್ಲಿ ಹಿಂದೆ ಬೀಳಲಿಲ್ಲ. ಅದರಲ್ಲಿ ಸ್ವಲ್ಪ ಮಟ್ಟಿಗೆ ಎಡವಿದರೂ ಕೂಡಾ. ಬೆಳಿಗ್ಗೆ ಒಂದು ಸಭೆಯಲ್ಲಿ ಹಲ್ಲೆಗೊಳಗಾದ ವಿದ್ವತ್ ಬಿಜೆಪಿ ಕಾರ್ಯಕರ್ತ ಎಂದು ಹೇಳಿ, ಸಂಜೆ ತಾನು ಸುಳ್ಳು ಹೇಳಿದ್ದಾಗಿ ಒಪ್ಪಿಕೊಂಡರು. ಆದರೆ ಈ ರೀತಿ ಸುಳ್ಳು ಹೇಳಿದ್ದರಿಂದಲೇ ಸರಕಾರ ಅಪರಾಧಿಯನ್ನು ಬಂಧಿಸಿತು ಎಂದು ಬೆನ್ನು ತಟ್ಟಿಕೊಂಡರು! ಅಷ್ಟೇ ಅಲ್ಲ, ಇತ್ತೀಚೆಗೆ ಸಾಕಷ್ಟು ಶಾಂತವಾಗಿದ್ದ ಕರಾವಳಿ 'ಶಾ ಇಫೆಕ್ಟ್'ನಿಂದ ಗಲಭೆಗೆ ಗುರಿಯಾಯಿತು. ಪಣಂಬೂರು ಪೊಲೀಸ್ ಠಾಣೆ ವ್ಯಾಪ್ತಿಯ ಬೆಂಗರೆಯಲ್ಲಿ ಫೆ. 20ರ ತಡರಾತ್ರಿ ಘರ್ಷಣೆ ನಡೆಯಿತು. ಉಡುಪಿಯಲ್ಲಿ ಬಿಜೆಪಿ ವತಿಯಿಂದ ಆಯೋಜಿಸಿದ್ದ ಮೀನುಗಾರರ ಸಮಾವೇಶಕ್ಕೆ ತೋಟ ಬೆಂಗರೆಯ ಬಿಜೆಪಿ ಕಾರ್ಯಕರ್ತರು ಹೋಗಿ ತಡರಾತ್ರಿ ವಾಪಸ್ ಬರುತ್ತಿದ್ದಾಗ ಕಸಬಾ ಬೆಂಗರೆ ಬಳಿ ಘೋಷಣೆ ಕೂಗಿದ್ದೇ ಘಟನೆಗೆ ಕಾರಣ ಎಂದು ಹೇಳಲಾಗಿದೆ.

ಆದರೆ 'ವಿಐಪಿ–ಸಂಸ್ಕೃತಿ' ಈ ಎರಡು ವ್ಯಕ್ತಿಗಳಿಗೆ ಅಥವಾ ಕರ್ನಾಟಕಕ್ಕೆ ಅಥವಾ ಕಾಂಗ್ರೆಸಿಗೆ ಸೀಮಿತವಾದದ್ದು ಏನಲ್ಲ. ಬಿಜೆಪಿಯ ರಾಷ್ಟ್ರ/ರಾಜ್ಯ ನಾಯಕರೂ ಶಾಸಕರು–ಸಂಸದರು ಸ್ವತಃ ಕಾನೂನು ಮುರಿದು (ಕೇಸು ಅಥವಾ ಬೈಲ್ ಇದ್ದೋ ಇಲ್ಲದೆಯೋ) ರಾಜಾರೋಷಾಗಿ ಓಡಾಡುತ್ತಾರೆ. ಬಿಜೆಪಿ ನಾಯಕರ ವಿಶಿಷ್ಟತೆ ಏನೆಂದರೆ ಅವರು ಅಧಿಕಾರದಲ್ಲಿರದ ಪ್ರದೇಶಗಳಲ್ಲೂ ತಮ್ಮ 'ವಿಐಪಿ–ಸಂಸ್ಕೃತಿ'ಯನ್ನು ಅವರು ಚಲಾಯಿಸುತ್ತಾರೆ! ಕಲ್ಲಡ್ಕ ಪ್ರಭಾಕರ ಭಟ್ ಮತ್ತು ಅನಂತ ಕುಮಾರ ಹೆಗಡೆ ಇದಕ್ಕೆ ಒಳ್ಳೆಯ ಉದಾಹರಣೆ.

ಈ ನಡುವೆ ಕಾಂಗ್ರೆಸ್ ಮಂಡಿಸಿದ ಬಜೆಟಿನಲ್ಲಿ ರೈತ–ಕಾರ್ಮಿಕರಿಗೆ, ಕೃಷಿ ಕೂಲಿಕಾರರಿಗೆ, ದಲಿತರಿಗೆ ಕೊಟ್ಟಿದ್ದ ಆಶ್ವಾಸನೆಗಳನ್ನು ಈಡೇರಿಸದೆ, ಮಾಡಿದ ಮೋಸ ಬಯಲಿಗೆಳೆಯುವುದಕ್ಕೆ ಬಿಜೆಪಿ–ಜೆಡಿ(ಎಸ್)ಗಳಿಗೆ ವ್ಯವಧಾನವಾಗಲಿ ಆಸಕ್ತಿಯಾಗಲಿ ಇರಲಿಲ್ಲ. ಇದೇ ಅಧಿವೇಶನದಲ್ಲಿ ಒಂದು ಜನ–ವಿರೋಧಿ ಅಪಾಯಕಾರಿ ಮಸೂದೆಯನ್ನು ಸರಕಾರ ಪಾಸು ಮಾಡಿಸಿಕೊಂಡಿತು. ರಾಜ್ಯ ಸರ್ಕಾರದ ವಿವಿಧ ಸೇವೆ, ಅನುದಾನ, ಸಹಾಯಧನ, ಕೂಲಿ ಪಡೆಯಲು ಆಧಾರ್ ಕಡ್ಡಾಯಗೊಳಿಸುವ ಸಲುವಾಗಿ ತಂದಿರುವ 'ಕರ್ನಾಟಕ ಆಧಾರ್ ಮಸೂದೆ 2018'ಕ್ಕೆ ವಿಧಾನಸಭೆ ಫೆ.21ರಂದು ಒಪ್ಪಿಗೆ ನೀಡಿತು. ಈ ವಿಷಯ ಸುಪ್ರೀಂ ಕೋರ್ಟಿನ ಮುಂದೆ ಇರುವಾಗ ಮತ್ತು ಆಧಾರ್ ನ್ನು ಯಾವುದೇ ಸವಲತ್ತು ಪಡೆಯಲು ಕಡ್ಡಾಯ ಮಾಡುವುದಿಲ್ಲ ಎಂದು ಕೇಂದ್ರ ಸರಕಾರ ಕೋರ್ಟಿಗೆ ಆಶ್ವಾಸನೆ ಕೊಟ್ಟಿರುವಾಗ, ಆಧಾರ್ ನಿಂದಾಗಿ ವ್ಯಾಪಕ ರೇಶನ್ ನಿರಾಕರಣೆ ನಡೆದು 'ಆಧಾರ್ ಹಸಿವು ಸಾವು'ಗಳು ನಡೆಯುತ್ತಿರುವಾಗ ಮೂರೂ ಪಕ್ಷಗಳ ಸಮ್ಮತಿಯಿಂದ ಈ ಜನ–ವಿರೋಧಿ ಮಸೂದೆ ಪಾಸಾಗಿದೆ. ಇಂತಹ ಮೂರೂ ಪಕ್ಷಗಳ ಶಾಮೀಲನ್ನೂ ಬಯಲು ಮಾಡುವುದು ಮತ್ತು ಇಂತಹವುಗಳನ್ನು ಚುನಾವಣಾ ವಿಷಯವಾಗಿಸುವುದೂ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಪಕ್ಷಗಳ ಕರ್ತವ್ಯ. ●



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ರೈತ ಇಂಟೆಲೆಕ್ಚುಯಲ್ ಪುಟ್ಟಣ್ಣಯ್ಯ – ಜಿ. ಎನ್. ನಾಗರಾಜ್



ನಗೆಚಾಟಿಕೆಗಳ ನಡುವೆ ನಗೆಚಾಟಿಗಳಿಂದ ತುಂಬಿದ ಮಾತುಗಳು, ರೈತರ, ಕೃಷಿಯ ಸಮಸ್ಯೆಗಳನ್ನು ಬಹು ಸರಳವಾಗಿ ಮತ್ತು ಮನಮುಟ್ಟುವಂತೆ ಜನರಿಗೆ ಮುಟ್ಟಿಸುತ್ತಿದ್ದ ವೈಶಿಷ್ಟ್ಯ ಪುಟ್ಟಣ್ಣಯ್ಯನವರದು. ನೆಲಮೂಲದ ರೈತನೊಬ್ಬ ತನ್ನ ಬದುಕು, ಅದರ ಬವಣೆಗಳಿಗೆ ನಿಜ ಕಾರಣಗಳ ಅರಿವು ಪಡೆದು ಚಳುವಳಿಕಾರನಾಗಿ, ಜನನಾಯಕನಾಗಿ ರೂಪುಗೊಂಡ ಪರಿಗೆ ಪುಟ್ಟಣ್ಣಯ್ಯನವರೇ ಉದಾಹರಣೆ. ಪಾಂಡವಪುರದ ಕ್ಯಾತನಹಳ್ಳಿಯಲ್ಲಿ ರೈತಾಪಿ ಜೀವನದಲ್ಲಿ ತೊಡಗಿದ್ದ ಪುಟ್ಟಣ್ಣಯ್ಯನವರಿಗೆ 1980 ರ ದಶಕದ ಆರಂಭದಿಂದ ಫಸಲಿನ ಬೆಲೆ ಕುಗ್ಗುವಿಕೆಯಿಂದ ರೈತರು ಅನುಭವಿಸುತ್ತಿದ್ದ ಸಂಕಟ ಮನಸ್ಸಿಗೆ ತಟ್ಟಿತು.

ಎಸ್.ಎಫ್.ಐ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ನಾಯಕರಾಗಿದ್ದ ಹಳಕಟ್ಟಿಯವರ ನೇತೃತ್ವದಲ್ಲಿ ನರಗುಂದ– ನವಲಗುಂದ ರೈತ ಹೋರಾಟ ರಾಜ್ಯದ ರೈತರನ್ನು ಬಡಿದೆಬ್ಬಿಸಿದ ಕಾಲ. ಆ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆಗಳಿಗಾಗಿ ಹೋರಾಟ ನಡೆಸಿದ್ದ ರುದ್ರಪ್ಪನವರ ರೈತ ಸಂಘದೊಡನೆ ಆಗ ವಕೀಲರಾಗಿ, ಸಮಾಜವಾದಿ ಚಳುವಳಿಗಾರರಾಗಿದ್ದ ಪ್ರೊ.ನಂಜುಂಡಸ್ವಾಮಿಯವರು ಸೇರಿದರು. ಆಗ ಹುಟ್ಟಿಕೊಂಡದ್ದೇ ಕರ್ನಾಟಕ ರಾಜ್ಯ ರೈತ ಸಂಘ. ಈ ರೈತ ಸಂಘಟನೆ ರಾಜ್ಯದ ನೀರಾವರಿ ಪ್ರದೇಶಗಳಲ್ಲಿ ಬೆಳೆಯಲಾರಂಭಿಸಿತು. ಈ ಸಂಘಟನೆ ಪುಟ್ಟಣ್ಣಯ್ಯನವರನ್ನೂ ಸೆಳೆಯಿತು. ರಾಜ್ಯ ರೈತಸಂಘ ಅಂದು ಹಮ್ಮಿಕೊಂಡಿದ್ದ ಜೈಲು ಭರೊ ಮೊದಲಾದ ಅನೇಕ ಹೋರಾಟಗಳಲ್ಲಿ ಪುಟ್ಟಣ್ಣಯ್ಯ ಚಳುವಳಿಗಾರರಾಗಿ ಬೆಳೆದರು. ಹೋರಾಟಗಳ ಪ್ರಾಯೋಗಿಕ ಅನುಭವದ ಜೊತೆಗೆ ರಾಜ್ಯ ರೈತ ಸಂಘದ ಅನೇಕ ಅಧ್ಯಯನ ಶಿಬಿರಗಳು ಪುಟ್ಟಣ್ಣಯ್ಯನವರಿಗೆ ಸಮಸ್ಯೆಗಳ ಮೂಲದ ಬಗ್ಗೆ ಅರಿವು ಮೂಡಿಸಿದವು.

ಹೀಗೆ ಅನುಭವ ಮತ್ತು ಅರಿವು ಮೇಳೈಸಿದ

ಪುಟ 4 ಕ್ಕೆ

ಬಿಎಸ್‌ಎನ್‌ಎಲ್ ಗುತ್ತಿಗೆ ನೌಕರರಿಂದ ಮಂಗಳೂರಿನಲ್ಲಿ ಪ್ರತಿಭಟನೆ

ರಾಜ್ಯ ಬಿಎಸ್‌ಎನ್‌ಎಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್ (ಸಿಐಟಿಯು) ನೇತೃತ್ವದಲ್ಲಿ ಫೆಬ್ರವರಿ 19 ರಂದು ಮಂಗಳೂರಿನ ಬಿಎಸ್‌ಎನ್‌ಎಲ್ ಪ್ರಧಾನ ಕಚೇರಿ ಮುಂಭಾಗ ಪ್ರತಿಭಟನೆ ನಡೆಯಿತು.

ಕನಿಷ್ಟ ಕೂಲಿ ಮಾಸಿಕ ರೂ.18,000 ವೇತನ ನಿಗದಿಗೊಳಿಸಬೇಕು, ಇಎಸ್‌ಐ ಮತ್ತು ಪಿಎಫ್ ನೀಡಬೇಕು, ಗುತ್ತಿಗೆ ಪದ್ಧತಿ ರದ್ದುಗೊಳಿಸಬೇಕು ಇತ್ಯಾದಿ ಬೇಡಿಕೆಗಳನ್ನು ಪ್ರತಿಭಟನಾಕಾರರು ಮಂಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಯೂನಿಯನ್ ಅಧ್ಯಕ್ಷರೂ ಸಿಐಟಿಯು ಜಿಲ್ಲಾ ಮುಂದಾಳುಗಳೂ ಆದ ವಸಂತ ಆಚಾರಿ, ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಯೂನಿಯನ್ ಮುಂದಾಳುಗಳಾದ ಉದಯ ಕುಮಾರ್, ನಿತ್ಯಾನಂದ, ಬಾಲಕೃಷ್ಣ ಹಾಗೂ ಜಿಲ್ಲೆಯ ಎಲ್ಲಾ ತಾಲೂಕಿನ ಮುಂದಾಳುಗಳು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಬೇಡಿಕೆಗಳ ಮನವಿಯನ್ನು ಸಂಸ್ಥೆಯ ಜನರಲ್ ಮ್ಯಾನೇಜರ್ ಅವರಿಗೆ ನೀಡಲಾಯಿತು.

ರೈತ ಇಂಟೆಲೆಕ್ಚುಯಲ್ ಪುಟ್ಟಣ್ಣಯ್ಯ....... ಪುಟ 3 ರಿಂದ

ಅವರ ಮಾತುಗಳಲ್ಲಿ ಹಳ್ಳಿಗಳ ಭಾಷೆ, ಗಾದೆ, ಪಡೆನುಡಿ ಮತ್ತು ಹಾಸ್ಯ ಪ್ರಜ್ಞೆ ಬೆರೆತು ಅವರದೇ ಶೈಲಿ ರೂಪುಗೊಂಡಿತು. ಈ ಶೈಲಿಯಲ್ಲಿ ಕೃಷಿಗೆ ಸಂಬಂಧಿಸಿದ ಅತ್ಯಂತ ಗಹನವಾದ ವಿಚಾರಗಳನ್ನೂ ಗ್ರಾಮೀಣ ಜನರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗುತ್ತಿದ್ದರು. ಇದು ಯಾವುದೇ ಉತ್ತಮ ಸಾಹಿತಿಗೆ ಹೋಲಿಸಬಹುದಾದ ಶೈಲಿಯಾಗಿತ್ತು. ನನಗೆ ಅಚ್ಚರಿಯನ್ನು ಉಂಟು ಮಾಡುತ್ತಿತ್ತು.

ಸತ್ತ ಅಪ್ಪರಿಗೆ "ತಿಥಿ ಬಿಡಿ, ಸಸಿ ನೆಡಿ" ಎಂದು ಸಾರಿದರು. ಅಂಧಶ್ರದ್ಧೆಗಳ ಕಟು ವಿರೋಧಿ. ಮಂಡ್ಯದಲ್ಲಿ ರೈತ ಚಳವಳಿ ಸಾಂಸ್ಕೃತಿಕ ಆಯಾಮವನ್ನೂ ಪಡೆದಿತ್ತು. ರಾಜ್ಯ ರೈತ ಸಂಘದ ನಾಯಕರದು ಸರಳ, ಶಾಸ್ತ್ರ ರಹಿತ ಮದುವೆಗಳಲ್ಲದೆ ಬೇರೆ ಮದುವೆಗಳಿಗೆ ಬರುವುದೇ ಇಲ್ಲ ಎಂಬ ಪಾಲಿಸಿ. ಪುಟ್ಟಣ್ಣಯ್ಯ ನೂರಾರು ಕುವೆಂಪು ಮಂತ್ರಾಕ್ಷತೆಯ ಮದುವೆಗಳನ್ನು ನಡೆಸಿಕೊಟ್ಟಿದ್ದಾರೆ. ಮದುವೆ ಮಾತ್ರವಲ್ಲ ಸತ್ತಾಗ ತಿಥಿ ಮಾಡಬಾರದು. ಬದಲಾಗಿ ಜನರಿಗೆ ಸತ್ತವರ ಮೇಲಿನ ಗೌರವ ತೋರಿಸುವುದಕ್ಕೆ ಉಪಯುಕ್ತವಾದದ್ದು ಏನಾದರೂ ಮಾಡಲಿ ಎಂಬುದು ಪಾಲಿಸಿ. ಸತ್ತವರಿಗೆ "ತಿಥಿ ಬಿಡಿ, ಸಸಿ ನೆಡಿ" ಎಂದು ಸಾರುತ್ತಿದ್ದವರು. ಇದನ್ನು ತಮ್ಮ ತಂದೆ ತಾಯಿಗಳ ವಿಷಯದಲ್ಲಿಯೂ ಪಾಲಿಸಿದರು. ಅವರ ನೆನಪಿನಲ್ಲಿ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು, ಪುಸ್ತಕ ಹಂಚಿಕೆ ಇಂತಹವುಗಳನ್ನು ಏರ್ಪಡಿಸುತ್ತಿದ್ದರು.

ಅಂಧಶ್ರದ್ಧೆ ಆಚರಣೆ ವಿರೋಧಿ ಕಾಯಿದೆಗಾಗಿ ನಿಡುಮಾಮಿಡಿ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆದ ಎಲ್ಲ ಹೋರಾಟಗಳಲ್ಲಿ ಭಾಗವಹಿಸಿದ್ದರು. ವಿಧಾನಸಭೆಯಲ್ಲಿ ಅದನ್ನು ಬೆಂಬಲಿಸಿ ವಿಚಾರಪೂರಿತ ಭಾಷಣ ಮಾಡಿದ್ದರು.

ಒಳಚರಂಡಿ ಭ್ರಷ್ಟಾಚಾರದ ವಿರುದ್ಧ ಮಂಗಳೂರಿನಲ್ಲಿ ಸಿಪಿಐ(ಎಂ) ಪ್ರತಿಭಟನೆ



ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯ ಒಳಚರಂಡಿಗಳು ಹಳೆಯವಾಗಿದ್ದು, ಹದಗೆಟ್ಟಿರುವ ಸೀವೆಂಜ್ ಪಂಪಿಂಗ್ ದುರಸ್ತಿಗೊಳಿಸುವುದು ಮತ್ತು ಬದಲಾಯಿಸುವ ಯೋಜನೆಯೊಂದು ಈಗ 10 ವರ್ಷಗಳ ಹಿಂದೆ 'ಕುಡ್ಸೆಂಪ್' ಯೋಜನೆಯಲ್ಲಿ ನಡೆದಿತ್ತು. ಇದೀಗ ಆಧುನಿಕ ನಗರದ ಆವಶ್ಯಕತೆಗನುಗುಣವಾಗಿ 60 ಕೋಟಿ ನಿಗದಿಗೊಳಿಸಿ ಕೆ.ಯು.ಐ.ಡಿ.ಎಫ್.ಸಿ ಒಳಚರಂಡಿ ನವೀಕರಣವನ್ನು ಕೈಗೆತ್ತಿಕೊಂಡಿದೆ. ಬಿಡಿ ಕಾಮಗಾರಿಗಳ ಹರಾಜಿನ ಅನಂತರ ಮೂಲ ಯೋಜನೆಯ 60% ಹೆಚ್ಚಿನ ಮೊತ್ತಕ್ಕೆ ಗುತ್ತಿಗೆದಾರರಿಗೆ ಕಾಮಗಾರಿ ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂಬುದಾಗಿ ಡಿವೈಎಫ್ಐ ಮಂಗಳೂರು ನಗರ ಸಮಿತಿ ಆರೋಪಿಸಿತ್ತು. ಮಂಗಳೂರು ನಗರವನ್ನು ಪ್ರತಿನಿಧಿಸುವ ಇಬ್ಬರು ಶಾಸಕರು, ಪಾಲಿಕೆಯ ಆಡಳಿತ ಪಕ್ಷ ಕಾಂಗ್ರೆಸ್ಸಿನ ಪ್ರತಿನಿಧಿಗಳು ಈ ಅವ್ಯವಹಾರಗಳ ಬಗ್ಗೆ ಮೌನವಾಗಿರುವುದು, ಭ್ರಷ್ಟಾಚಾರದ ಅನುಮಾನ ಮೂಡಿಸುತ್ತಿದೆ.

ಸದ್ರಿ ನಡೆಯುತ್ತಿರುವ ಒಳಚರಂಡಿ ಕಾಮಗಾರಿಯಲ್ಲಿ ನಡೆದ ಭ್ರಷ್ಟಾಚಾರವನ್ನು ಉನ್ನತ ಸಮಿತಿ ತನಿಖೆಗೆ ಒತ್ತಾಯಿಸಿ ಹಾಗೂ ಹೊಸ ಪಂಪ್‌ಲೈನ್ ಕಾಮಗಾರಿಗಳ ಗುತ್ತಿಗೆ ರದ್ದುಪಡಿಸುವಂತೆ ಆಗ್ರಹಿಸಿ ಫೆಬ್ರವರಿ 20 ರಂದು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಮತ್ತು ನಗರ ಉತ್ತರ ಸಮಿತಿಗಳು 'ನಗರ ಪಾಲಿಕೆ ಚಲೋ' ಕಾರ್ಯಕ್ರಮ ನಡೆಸಿ ಪಾಲಿಕೆ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದವು.

ಪ್ರತಿಭಟನಾ ಪ್ರದರ್ಶನವನ್ನು ಡಿವೈಎಫ್ಐ ರಾಜ್ಯಾಧ್ಯಕ್ಷ ಹಾಗೂ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯ ಮುನೀರ್ ಕಾಟಿಪಳ್ಳ ಉದ್ಘಾಟಿಸಿದರು. ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ನಗರ ಉತ್ತರ ಸಮಿತಿ ಕಾರ್ಯದರ್ಶಿ ಹಾಗೂ ಕಾರ್ಪರೇಟರ್ ದಯಾನಂದ ಶೆಟ್ಟಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರುಗಳಾದ ಜಯಂತಿ ಬಿ.ಶೆಟ್ಟಿ, ಯೋಗೀಶ್ ಜಪ್ಪಿನಮೊಗರು, ಸಂತೋಷ್ ಬಜಾಲ್, ನಗರ ಸಮಿತಿ ಸದಸ್ಯರುಗಳಾದ ಬಿ.ಕೆ.ಇಮ್ತಿಯಾಜ್, ಸಂತೋಷ್ ಶಕ್ತಿನಗರ, ನವೀನ್ ಕೊಂಚಾಡಿ, ಸುರೇಶ್ ಬಜಾಲ್. ದಿನೇಶ್ ಶೆಟ್ಟಿ, ಬಾಬು ದೇವಾಡಿಗ ಭಾಗವಹಿಸಿದ್ದರು.

ಪ್ರತಿಭಟನೆಗೂ ಮೊದಲು ಬಲ್ಲಾಳ್‌ಬಾಗ್‌ನಿಂದ ಮಹಾನಗರ ಪಾಲಿಕೆ ಕಚೇರಿವರೆಗೂ ಮೆರವಣಿಗೆ ನಡೆಸಲಾಗಿತ್ತು.

ಬೈಂದೂರು : ಅಂಗವಿಕಲರಿಂದ ರೈಲ್ವೆ ನಿಲ್ದಾಣದಲ್ಲಿ ಧರಣಿ



ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಬೈಂದೂರು ಶ್ರೀಮೂಕಾಂಬಿಕಾ ರೈಲು ನಿಲ್ದಾಣದಲ್ಲಿ ಅಂಗವಿಕಲರ ಸಮಸ್ಯೆಗಳ ನಿವಾರಣೆಗಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು. ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ **(NPRD)** ನಾಯಕತ್ವದಲ್ಲಿ ಮಾರ್ಚ್ 6 ರಂದು ದೆಹಲಿಯ ಸಂಸತ್ ಭವನದ ಮುಂದೆ ಹೋರಾಟ ನಡೆಸುವುದರ ಪೂರ್ವಭಾವಿಯಾಗಿ ಜಿಲ್ಲಾ ಕೇಂದ್ರಗಳಲ್ಲಿ ಅಂಗವಿಕಲರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಧರಣಿ ಸತ್ಯಾಗ್ರಹ ನಡೆಸಲಾಗಿದೆ.

ಅಂಗವಿಕಲರು ರೈಲ್ವೆಗಳಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರೈಲ್ವೆ ಇಲಾಖೆ ಇನ್ನೂ ಕೂಡ ಅಂಗವಿಕಲ ಸ್ನೇಹಿಯಾಗಿಲ್ಲ. ಪ್ಲಾಟ್‌ಫಾರಂಗಳಲ್ಲಿ ಓಡಾಡುವ ಸಮಸ್ಯೆಗಳಿಂದ ಹಿಡಿದು ಅಂಗವಿಕಲರ ಬೋಗಿ ಎಲ್ಲಿ ನಿಲ್ಲತ್ತೆ, ಬೋಗಿಯಲ್ಲಿನ ಸಮಸ್ಯೆಗಳು, ಅಂಗವಿಕಲರ ವೈದ್ಯಕೀಯ ಪ್ರಮಾಣ ಪತ್ರಗಳನ್ನ ಅನಗತ್ಯವಾಗಿ ನಿರಾಕರಿಸುವುದು. ಒಂದು ಪ್ಲಾಟ್‌ಫಾರಂನಿಂದ ಇನ್ನೊಂದು ಪ್ಲಾಟ್‌ಫಾರಂಗೆ ಹೋಗುವ ಸಮಸ್ಯೆಗಳು, ಶೌಚಾಲಯದ ಸಮಸ್ಯೆಗಳು, ಹೀಗೆ ಹಲವಾರು ಸಮಸ್ಯೆಗಳನ್ನು ಇಟ್ಟುಕೊಂಡು ನಡೆಸಿದ ಧರಣಿ ಸತ್ಯಾಗ್ರಹದಲ್ಲಿ ಮನವಿಯನ್ನು ಕೊಂಕಣ ರೈಲ್ವೆ ನಿಗಮದ (KRCL) ಕಾರವಾರ ವಿಭಾಗದ ರೈಲ್ವೆ ಅಧಿಕಾರಿ ರಮೇಶ ಶೆಟ್ಟಿಗೆ ಸಲ್ಲಿಸಲಾಯಿತು.

ಅಂಗವಿಕಲರಿಗೆ ರಿಯಾಯ್ತಿಯನ್ನು ಎಲ್ಲಾ ರೈಲುಗಳಿಗೂ ವಿಸ್ತರಿಸಬೇಕು ಮತ್ತು ಶೇಕಡಾ 75% ರಷ್ಟು ಏಕರೂಪ ರಿಯಾಯ್ತಿ ನಿಗದಿಯಾಗಬೇಕು. ಅಂಗವೈಕಲತೆಯ ಪುರಾವೆ ಟಿಕೆಟ್ ಕಾಯ್ದಿರಿಸುವಿಕೆಯಲ್ಲಿ ಕಡ್ಡಾಯ ಆಗಬಾರದು. ಕೇಂದ್ರ ಸರಕಾರ ನೀಡುತ್ತಿರುವ ಸಾರ್ವತ್ರಿಕ ಗುರುತಿನ ಚೀಟಿಯನ್ನೇ ರಿಯಾಯ್ತಿ ಟಿಕೆಟ್ ನೀಡಲು ಪರಿಗಣಿಸಬೇಕು. ಪ್ರತ್ಯೇಕ ರೈಲು ಪಾಸ್ ಮಾಡಿಸಿಕೊಳ್ಳುವ ಪದ್ಧತಿ ಕೈಬಿಡಬೇಕು. ಅಂಗವಿಕಲರ ಬೋಗಿಯ ಗಾರ್ಡನ್ ಮುಂದಿನ ಭಾಗದಲ್ಲಿ ಇರುವಂತೆ ಖಚಿತ ಪಡಿಸಬೇಕು. ರೈಲ್ವೆ ನಿಲ್ದಾಣಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತಕ್ಕಂತೆ ರೂಪಿಸಬೇಕು. ಅಗತ್ಯ ಇರುವ ಸ್ಥಳಗಳಲ್ಲಿ ಇಳಿಜಾರು/ಲಿಫ್ಟ್‌ಗಳನ್ನು ಒದಗಿಸಬೇಕು. ಅಂಧ ವ್ಯಕ್ತಿಗಳಿಗೆ ನಿರ್ಗಮನ, ಸೇತುವೆಗಳು, ಮೆಟ್ಟಿಲುಗಳು ಟಿಕೆಟ್ ಕೌಂಟರ್‌ಗಳ ಮಾರ್ಗದರ್ಶನಕ್ಕೆ ಪ್ಲಾಟ್‌ಫಾರಂಗಳಲ್ಲಿ ಸ್ಪರ್ಶ ಗುರುತುಗಳನ್ನು ಅಳವಡಿಸಬೇಕು. ಎಲ್ಲಾ ಡಬ್ಬಿಗಳು ಬ್ರೈಲ್ ಉಬ್ಬು ಚಿಹ್ನೆಗಳನ್ನು ಹೊಂದಿರಬೇಕು. ಎಲ್ಲಾ ಪ್ರಮುಖ ನಿಲ್ದಾಣಗಳು ಮತ್ತು ಪ್ಲಾಟ್‌ಫಾರಂಗಳಲ್ಲಿ ಬ್ಯಾಟರಿ ಚಾಲಿತ ವಾಹನಗಳು ದೊರೆಯುವಂತಾಗಬೇಕು. ಅಂಗವಿಕಲರಿಗೆ ಮೀಸಲಾಗಿರುವ ಲೋವರ್ ಬರ್ತ್ ಕೋಟವನ್ನು ದ್ವಿಗುಣಗೊಳಿಸಬೇಕು. ನಿಲ್ದಾಣಗಳಲ್ಲಿ ಅಂಗವಿಕಲರಿಗೆ ಮಾರಾಟ ಮಾಡಲು ಶೇಕಡಾ 20% ರಷ್ಟು ಅಂಗಡಿಗಳನ್ನು ಆದ್ಯತೆಯ ಮೇಲೆ ಹಂಚಿಕೆ ಮಾಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.



ಧರಣಿಯಲ್ಲಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಸಮಿತಿಯ ಉಪಾಧ್ಯಕ್ಷ ವೆಂಕಟೇಶ ಕೋಣಿ, ರಾಜ್ಯ ಸಮಿತಿ ಕಾರ್ಯದರ್ಶಿ ಮಂಜುನಾಥ ಹೆಬ್ಬಾರ್ ಕಾಲ್ತೋಡು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೃಷ್ಣಪ್ಪ ಪ್ರಜಾರಿ ಕೋಟೇಶ್ವರ ಮುಖಂಡರಾದ ದೀಪಗೌಡ, ರಾಧಕೃಷ್ಣ ಬೈಂದೂರು, ಬಾಬು ಕೆ. ದೇವಾಡಿಗ ಉಪ್ಪುಂಡ, ಗ್ಣಪತಿ ಪ್ರಜಾರಿ ಅಮಾಸ್ಯೆಬೈಲು, ಅನಿತಾ ತಡುವರಿ ನೇತೃತ್ವ ವಹಿಸಿದ್ದರು.

ಸಿಪಿಐ(ಎಂ) ಬೈಂದೂರು ವಲಯ ಕಾರ್ಯದರ್ಶಿ ಸುರೇಶ ಕಲ್ಲಾಗರ, ಹೋರಾಟಗಾರ ಅಂಗವಿಕಲರನ್ನು ಉದ್ದೇಶಿಸಿ ಮಾತನಾಡಿ, ಬೆಂಬಲ ವ್ಯಕ್ತಪಡಿಸಿದರು. ಕಟ್ಟಡ ಕಾರ್ಮಿಕ ಸಂಘಟ ಬೈಂದೂರು ಅಧ್ಯಕ್ಷ ಗಣೇಶ ತೊಂಡೆಮಕ್ಕಿ, ಕಾರ್ಯದರ್ಶಿ ಗಣೇಶ ಮೊಗವೀರ ಉಪಸ್ಥಿತರಿದ್ದರು.

– ವೆಂಕಟೇಶ ಕೋಣಿ

(ರಾಯಚೂರು, ವಿಜಯಪುರ, ಬಳ್ಳಾರಿ, ಬೆಂಗಳೂರು, ಬೆಳಗಾವಿ, ಉತ್ತರ ಕನ್ನಡ, ಬಾಗಲಕೋಟೆ, ಕೊಪ್ಪಳ ಜಿಲ್ಲೆಗಳಲ್ಲಿ ಸಹ ಪ್ರತಿಭಟನೆ ನಡೆಸಲಾಗಿದೆ ಎಂದು ತಿಳಿದು ಬಂದಿದೆ.)

ಎಸ್‌ಎಫ್‌ಐ ರಾಷ್ಟ್ರೀಯ ಸಮಾವೇಶ ಬೆಂಗಳೂರಿನಲ್ಲಿ ಶಾಂತಿಯ ದನಿ

ಫೆಬ್ರುವರಿ 17ರಂದು ಬೆಂಗಳೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಸಭಾಂಗಣದಲ್ಲಿ ಕೋಮುವಾದದ ವಿರುದ್ಧ ಮತ್ತು ದೇಶದ ಐಕ್ಯತೆಯನ್ನು ಕಾಯ್ದುಕೊಳ್ಳುವ ದೃಢ ನಿರ್ಧಾರದ ಘೋಷಣೆಗಳು ಮೊಳಗಿದವು. ಜನವರಿ 26ರಿಂದ ಫೆಬ್ರುವರಿ 17 ರ ವರೆಗೆ ಎಸ್‌ಎಫ್‌ಐ ದೇಶದಲ್ಲಿ ಶಾಂತಿ–ಸಾಮರಸ್ಯಕ್ಕಾಗಿ ನಡೆಸಿರುವ 'ಅಮನ್ ಕಾ ಐಲಾನ್' (ಶಾಂತಿಯ ಘೋಷಣೆ) ಪ್ರಚಾರಾಂದೋಲನದ ಭಾಗವಾಗಿ ಜನವರಿ 30 ಹುತಾತ್ಮರ ದಿನದಂದು ದಿಲ್ಲಿಯಲ್ಲಿ ಒಂದು ರಾಷ್ಟ್ರೀಯ ಸಮಾವೇಶ ನಡೆಯಿತು. ಬೆಂಗಳೂರಿನಲ್ಲಿ ನಡೆದ ಸಮಾವೇಶದಲ್ಲಿ ದಕ್ಷಿಣದ ರಾಜ್ಯಗಳ 650 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್‌ಎಫ್‌ಐನ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಲ್ಲದೆ, ಉದ್ಘಾಟಕರಾಗಿ ಪ್ರಖ್ಯಾತ ಚಿತ್ರನಟ ಮತ್ತು ನಿರ್ದೇಶಕ ಹಾಗೂ ಗೌರಿ ಲಂಕೇಶ್ ಕೊಲೆಯಿಂದ ತಲ್ಲಣಗೊಂಡ ನಂತರ ಈಗ ಒಬ್ಬ ಪ್ರಮುಖ ಸಾಮಾಜಿಕ ಕಾರ್ಯಕರ್ತರೂ ಆಗಿರುವ ಪ್ರಕಾಶ್ ರಾಜ್ ಮತ್ತು ನಿವೃತ್ತ ಸುಪ್ರಿಂ ಕೋರ್ಟ್ ಗೋಪಾಲ ಗೌಡರು ಮುಖ್ಯ ಭಾಷಣಕಾರರಾಗಿ ಭಾಗವಹಿಸಿದರು.



ಪ್ರಕಾಶ್ ರಾಜ್ ಅವರು ತಮ್ಮ ಭಾವಪೂರ್ಣ ಉದ್ಘಾಟನಾ ಭಾಷಣದಲ್ಲಿ "ನನ್ನಂತವನಿಗೆ ರಾಷ್ಟ್ರ–ವಿರೋಧಿ ಎಂದು ಹಣಪಟ್ಟಿ ಕಟ್ಟುತ್ತಾರೆ, ಪ್ರತಿಭಟನೆಯ ದನಿಯೆತ್ತುವ ನಿಮ್ಮಂತಹ ಯುವಜನರಿಗೂ ಖಂಡಿತಾ ಕಟ್ಟುತ್ತಾರೆ. ಸದ್ಯದಲ್ಲೇ ಈ ದೇಶದಲ್ಲಿ ರಾಷ್ಟ್ರ–ವಿರೋಧಿಗಳೇ ಬಹುಸಂಖ್ಯೆಯಲ್ಲಿರುತ್ತಾರೇನೋ, ಆದರೆ ಇವರೇ ನಿಜವಾಗಿ ಈ ದೇಶವನ್ನು ಪ್ರೀತಿಸುವವರು" ಎಂದು ಆರಂಭಿಸಿದರು.

ತನ್ನ ಅನುಭವಗಳನ್ನು ನೆನಪಿಸಿಕೊಳ್ಳುತ್ತ ಅವರು, ಬಾಲಕನಾಗಿ ಈ ಸ್ಕೌಟ್ ಸೇರಿದಾಗ, ನಂತರ ಜನಗಳೊಡನೆ ಬೆರೆಯ ಲಾರಂಭಿಸಿ ಕಲಾರಂಗಕ್ಕೆ ಪ್ರವೇಶಿಸಿದಾಗ ಯಾರೂ ನನ್ನ ಐಡೆಂಟಿಟಿ ವಿಚಾರಿಸಿರಲಿಲ್ಲ. ಆದರೆ ಈಗ ನನ್ನ ದನಿ ಎತ್ತಿದಾಗ ನನ್ನ ತಾಯಿ ಕ್ರೈಸ್ತರು, ತಂದೆ ಹಿಂದೂ ಎನ್ನುತ್ತಾರೆ. ನಾನು ಜಾತ್ಯತೀತ ಎಂದಾಗ ನನ್ನ ತಂದೆ–ತಾಯಿಯ ಸಮಗ್ರತೆಯನ್ನು ಪ್ರಶ್ನಿಸುತ್ತಾರೆ ಎಂದು ನೋವಿನಿಂದ ಹೇಳಿದ ಅವರು ಈ ದೇಶವನ್ನಾಳುವ ಸರಕಾರ ತನ್ನ ಪಕ್ಷದ ಕಥನವನ್ನು ದೇಶದ ಮೇಲೆ ಹೇರುತ್ತಿದೆ. ನಮ್ಮ ಸಂವಿಧಾನ ಕೊಟ್ಟಿರುವ ನಮ್ಮ ವಾಕ್ ಸ್ವಾತಂತ್ರ್ಯದ, ಪ್ರಶ್ನೆ ಕೇಳುವ ಹಕ್ಕನ್ನು ನಾವು ಚಲಾಯಿಸುವಂತಿಲ್ಲ.

ಆದರೆ ನಮ್ಮದು ಜನಗಳು ಭಾಗವಹಿಸುವ ಪ್ರಜಾಪ್ರಭುತ್ವವಾಗಬೇಕಿದೆ, ಪ್ರತಿಯೊಬ್ಬ ವಿದ್ಯಾರ್ಥಿ, ವಿದ್ಯಾರ್ಥಿನಿ ಪ್ರಶ್ನಿಸುವಂತೆ ಹೇಳಬೇಕಾಗಿದೆ, ಹಾಗೆ ಪ್ರಶ್ನಿಸುವಲ್ಲಿ ನಾವು ನಿಮ್ಮ ಜತೆಗಿದ್ದೇವೆ ಎಂದು ಹೇಳಬೇಕಾಗಿದೆ ಎಂದರು.

ನ್ಯಾಯಮೂರ್ತಿ ಗೋಪಾಲಗೌಡರು ಮಾತಾಡುತ್ತ ಸಂವಿಧಾನದಲ್ಲಿ ಸೇರಿಸಿದ ಜಾತ್ಯತೀತತೆಯ ತತ್ವದ ಮಹತ್ವವನ್ನು ನಿರೂಪಿಸಿದರು. ಇದು ನಾವು ನಮಗೆ ಕೊಟ್ಟುಕೊಂಡ ಸಂವಿಧಾನದ ಮೂಲರಚನೆ, ಇದನ್ನು ಯಾರೂ ಬದಲಿಸಲು ಸಾಧ್ಯವಿಲ್ಲ ಎಂದರು. ಈಗ ಹರಡುತ್ತಿರುವ ಕೋಮುವಾದದಿಂದ ದೇಶವನ್ನು ಉಳಿಸುವಲ್ಲಿ, ಜನಗಳ ನಿಜವಾದ ಬದುಕಿನ ಪ್ರಶ್ನೆಗಳನ್ನು ಎತ್ತುವಲ್ಲಿ ಈಗಿನ ವಿದ್ಯಾರ್ಥಿಗಳೇ ನಮ್ಮ ಆಶಾಕಿರಣ ಎಂದರು.

ಆರಂಭದಲ್ಲಿ ಎಸ್‌ಎಫ್‌ಐ ಅಖಿಲ ಭಾರತ ಅಧ್ಯಕ್ಷ ವಿ.ಪಿ.ಸಾನು ಮಾತಾಡುತ್ತ ಬಿಜೆಪಿಗೆ ಎರಡು ಅಜೆಡಾಗಳಿವೆ, ನವ–ಉದರವಾದಿ ಆರ್ಥಿಕ ಅಜೆಂಡಾ ಮತ್ತು ಕೋಮುವಾದಿ ಅಜೆಂಡಾ, ನವ–ಉದರವಾದಿ ಅಜೆಂಡಾವನ್ನು ಮರೆಮಾಚಲು, ಜನಗಳ ಗಮನವನ್ನು ತಮ್ಮ ವಿಫಲತೆಗಳಿಂದ ಬೇರೆಡೆಗೆ ತಿರುಗಿಸಲು ಕೋಮುವಾದಿ ಕಥನಗಳನ್ನು ಮುಂದೆ ತರುತ್ತಾರೆ ಎಂದರು.

ಎಸ್‌ಎಫ್‌ಐನ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರುವ ನಿತೀಶ್ ನಾರಾಯಣನನ್ ಭಾರತದ ಶ್ರೀಮಂತ ಮತ್ತು ವೈವಿಧ್ಯಮಯ ಸಂಸ್ಕೃತಿಯ ಬಗ್ಗೆ ಮತ್ತು ಐಕ್ಯತೆಗಾಗಿ ಈ ವೈವಿಧ್ಯತೆಯನ್ನು ಮಾನ್ಯ ಮಾಡುವ ಬಗ್ಗೆ ವಿವರವಾಗಿ ಮಾತಾಡಿದರು.

ಈ ಸಮಾವೇಶ ಭಾರತವನ್ನು ಹಿಂದೂರಾಷ್ಟ್ರವಾಗಿ ಪರಿವರ್ತಿಸುವ ಸಂಘ ಪರಿವಾರದ ಕೋಮುವಾದಿ ಅಜೆಂಡಾದ ವಿರುದ್ಧ ಸತತ ಮತ್ತು ಐಕ್ಯ ಹೋರಾಟ ನಡೆಸಲು ಸಮಾವೇಶ ನಿರ್ಧರಿಸಿತು.

ಕೋಲಾರ ನರಸಾಪುರ ಎಕ್ಸಿಡಿ ಕಾರ್ಮಿಕರ ಉಪವಾಸ ಸತ್ಯಾಗ್ರಹ



ನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ಎಕ್ಸಿಡಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ 449 ಜನ ಕಾರ್ಮಿಕರರನ್ನು ಕಂಪನಿಯ ಮಾಲೀಕತ್ವ ಕೆಲಸದಿಂದ ಲಾಕ್ ಔಟ್ ಮಾಡಿದೆ ಹಾಗೂ ಕಾರ್ಮಿಕರ ಹಕ್ಕು ಸೌಲಭ್ಯಗಳನ್ನು ಕೇಳಿದ 18 ಯೂನಿಯನ್ ಮುಖಂಡರನ್ನು ಸಸ್ಪೆಂಡ್ ಮಾಡಲಾಗಿದೆ. ಕಂಪನಿಯ ಕಾರ್ಮಿಕ ವಿರೋಧಿ ಸರ್ವಾಧಿಕಾರಿ ಧೋರಣೆ ಖಂಡಿಸಿ ನಾಲ್ಕು ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಯುತ್ತಿದ್ದು, ಈ ಹೋರಾಟಕ್ಕೆ ಡಿವೈಎಫ್.ಐ. ಜಿಲ್ಲಾ ಕಾರ್ಯದರ್ಶಿ ಕೆ.ವಾಸುದೇವರೆಡ್ಡಿ ಹೋರಾಟದಲ್ಲಿ ಭಾಗವಹಿಸಿ ಬೆಂಬಲಿಸಿ ಮಾತನಾಡಿದರು. ಅವರು ಎಕ್ಸಿಡಿ ಕಂಪನಿ ಕಾರ್ಮಿಕರ ಕಾನೂನುಗಳನ್ನು ಉಲ್ಲಂಘನೆ ಮಾಡಿ ಕಾರ್ಮಿಕರನ್ನು ಲಾಕ್ ಔಟ್ ಮಾಡಿರುವುದು ಖಂಡನೀಯ. ಈ ಕಂಪೆನಿಯಲ್ಲಿ ನಿರಂತರವಾಗಿ ಕಾರ್ಮಿಕ ಶೋಷಣೆ, ಕೊಲೆಗಳು ನಡೆಯುತ್ತಿವೆ ಕಾರ್ಮಿಕರು ತಮ್ಮ ಹಕ್ಕುಗಳನ್ನು ಕೇಳಲು ಯುನಿಯನ್ ಮಾಡಿಕೊಂಡರೆ ಯುನಿಯನ್ ಮುಖಂಡರನ್ನು ಟಾರ್ಗೆಟ್ ಮಾಡಿ ಹಿಂಸೆ ನೀಡಲಾಗುತ್ತಿದೆ. ಮತ್ತು ಸ್ಥಳೀಯ ನಿರುದ್ಯೋಗಿ ಯುವಕರ ಬದಲಿಗೆ ಹೊರ ರಾಜ್ಯಗಳವರಿಗೆ ಹೆಚ್ಚು ಆದ್ಯತೆ ನೀಡುತ್ತಿದೆ. ಕಾರ್ಮಿಕ ಕಾನೂನು ಪ್ರಕಾರ ಕಾರ್ಮಿಕರ ಸೌಲಭ್ಯಗಳು ಕಲ್ಪಿಸಬೇಕು. ಯೂನಿಯನ್ ಮುಖಂಡರ ವಿರುದ್ಧ ಕುತಂತ್ರ ಮಾಡಿ ಪದೇ ಪದೇ ಸಸ್ಪೆಡ್ ಮಾಡುವುದು ನಿಲ್ಲಿಸಬೇಕು. ನಾಲ್ಕು ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಯುತ್ತಿರುವ 25 ಕಾರ್ಮಿಕರು ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದರೂ, ಎಕ್ಸಿಡಿ ಕಂಪನಿ ಮಾಲೀಕತ್ವ ಕಾರ್ಮಿಕ ಜೊತೆ ಮಾತನಾಡದಿರುವುದು ಕಾರ್ಮಿಕ ವಿರೋಧಿ ಧೋರಣೆಗೆ ಸಾಕ್ಷಿಯಾಗಿದೆ. ಆದ್ದರಿಂದ ಹೋರಾಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಮುಖಂಡರು ಮಂಜುಳಾಮ್ಮ, ಎಕ್ಸಿಡಿ ಸಿಐಟಿಯು ಯೂನಿಯನ್ ಅಧ್ಯಕ್ಷ ಮುನಿರಾಜು, ಉಪಾಧ್ಯಕ್ಷರು ಮೋಹನ್, ಪ್ರಮೋದ್,ಕಾರ್ಯದರ್ಶಿ ಹರೀಶ್, ಖಜಾಂಸಿ ಮಂಜುನಾಥ, ಜಂಟಿ ಕಾರ್ಯದರ್ಶಿ ಮಹೇಂದ್ರ, ಎನ್.ಮೋಹನ್, ಕೆಪಿಆರ್‌ಎಸ್ ಮುಖಂಡ ಕುರ್ಕಿ ದೇವರಾಜ್ ಹಾಗೂ ಕಾರ್ಮಿಕರು ಭಾಗವಹಿಸಿದ್ದರು.

ಉಡುಪಿ ಮತ್ತು ಮಂಗಳೂರಿನಲ್ಲಿ ಬಿಸಿಯೂಟ ನೌಕರರಿಂದ ಮತ್ತೆ ಪ್ರತಿಭಟನೆಗಳು

ಬಿಸಿಯೂಟ ನೌಕರರಿಗೆ ವೇತನ ಹೆಚ್ಚಳ ಸಂಬಂಧ ಬಿಸಿಯೂಟ ನೌಕರರು ಸಿಐಟಿಯು ಸಂಯೋಜಿತ ಬಿಸಿಯೂಟ ನೌಕರರ ರಾಜ್ಯ ಫೆಡರೇಶನ್ ನೇತೃತ್ವದಲ್ಲಿ ಫೆಬ್ರವರಿ 8 ಮತ್ತು 9 ರಂದು ಅನಿರ್ದಿಷ್ಟಾವಧಿ ಮುಷ್ಕರವನ್ನು ಬೆಂಗಳೂರಿನಲ್ಲಿ ನಡೆಸಿದ್ದರು. ಆಗ ಶಿಕ್ಷಣ ಸಚಿವರು ಮತ್ತು ಅಧಿಕಾರಿಗಳ ಜೊತೆ ನಡೆಸಿದ ಮಾತುಕತೆಗಳ ಆಧಾರದಲ್ಲಿ ಗೌರವಾರ್ಹ ವೇತನ ಹೆಚ್ಚಳದ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಪ್ರಕಾರ, ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿತ್ತು.

ಆದರೆ ಆ ಬಳಿಕ ರಾಜ್ಯದ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಮಂಡಿಸಿದ ಬಜೆಟ್ಟಿನಲ್ಲಿ ಸರ್ಕಾರ ಸಕಾರಾತ್ಮಕ ನಿರ್ಧಾರವನ್ನು ಕೈಗೊಂಡಿರುವುದಿಲ್ಲ. ಕನಿಷ್ಟ ವೇತನ ರೂ.5000 ನೀಡಬೇಕೆಂದು ನೌಕರರ ಸಂಘಟನೆಗೆ ಒತ್ತಾಯಿಸಿತ್ತು. ಅಲ್ಲದೆ ನೌಕರರನ್ನು ನಾಲ್ಕನೇ ದರ್ಜೆ ಸರ್ಕಾರಿ ನೌಕರರಾಗಿ ಪರಿಗಣಿಸಬೇಕು, ಅಪಘಾತಗಳಿಗೆ ಪರಿಹಾರ ನೀಡಬೇಕು ಇತ್ಯಾದಿ ಬೇಡಿಕೆಗಳನ್ನು ಮುಂದಿಡಲಾಗಿತ್ತು. ಬಜೆಟ್‌ನಲ್ಲಿ ವೇತನ ಹೆಚ್ಚಳದ ಪ್ರಸ್ತಾಪವಿಲ್ಲದಿರುವುದನ್ನು ಪ್ರತಿಭಟಿಸಿ ಉಡುಪಿ ಮತ್ತು ದ.ಕ.ಜಿಲ್ಲೆಗಳಲ್ಲಿ ಫೆಬ್ರವರಿ 17 ರಂದು ಪ್ರತಿಭಟನೆಗಳನ್ನು ನಡೆಸಲಾಯಿತು.

ಮಣಿಪಾಲದಲ್ಲಿರುವ ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಜಿಲ್ಲಾ ಸಂಘದ ಅಧ್ಯಕ್ಷ ದಾಸು ಭಂಡಾರಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಸುನಂದ, ತಾಲೂಕು ಸಮಿತಿಗಳ ಮುಖಂಡರುಗಳು ಭಾಗವಹಿಸಿದ್ದರು.

ಮಂಗಳೂರು ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಉಪಾಧ್ಯಕ್ಷರಾದ ವಸಂತ ಆಚಾರಿ, ಬಿಸಿಯೂಟ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಪದ್ಮಾವತಿ ಶೆಟ್ಟಿ ಮಾತನಾಡಿದರು. ಸಂಘದ ಜಿಲ್ಲಾ ಸಮಿತಿ ಮುಖಂಡರುಗಳಾದ ಗಿರಿಜಾ ಮೂಡಬಿದ್ರೆ, ಭವ್ಯಾ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪುತ್ತೂರಿನಲ್ಲಿ ತಾಲೂಕು ಸಂಘದ ಪ್ರತಿನಿಧಿಗಳು ಸಿಪಿಐ(ಎಂ) ಘಟಕ ಕಾರ್ಯದರ್ಶಿ ಪಿ.ಕೆ.ಸತೀಶನ್ ಅವರೊಂದಿಗೆ ತಾಲೂಕು ಕಚೇರಿಗೆ ತೆರಳಿ ಉಪತಹಶೀಲ್ದಾರರಿಗೆ ಮನವಿ ಸಲ್ಲಿಸಿದರು. ಅದೇ ದಿನ ಬೆಳ್ತಂಗಡಿಯಲ್ಲೂ, ಸುಳ್ಯದಲ್ಲೂ ಆಯಾ ತಾಲೂಕು ಬಿಸಿಯೂಟ ನೌಕರರ ಸಂಘದ ಪ್ರತಿನಿಧಿಗಳು ನಿಯೋಗ ಹೋಗಿ ತಹಶೀಲ್ದಾರರಿಗೆ ಮನವಿಗಳನ್ನು ಸಲ್ಲಿಸಿರುತ್ತಾರೆ.

– ವಾಸುದೇವ ಉಚ್ಚಿಲ





ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬಾಗೇಪಲ್ಲಿ ಸಿಪಿಐ(ಎಂ) ಪಟ್ಟಣ ಸಮಿತಿ ವತಿಯಿಂದ ಹಮ್ಮಿಕೊಂಡ ಪುರಸಭೆ ವಿರುದ್ಧದ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡುತ್ತಿರುವ ಕಾಮ್ರೇಡ್ ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿದರು.

ವಿಶೇಷ ಲೇಖನ

ಭಾರತದ ಆರೋಗ್ಯ ಸೇವೆ : ಸ್ಥಿತಿ, ಸವಾಲುಗಳು, ಪರಿಹಾರಗಳು



ಭಾರತದಲ್ಲಿ ಪ್ರತಿಯೊಬ್ಬರೂ ತುರ್ತು ವೈದ್ಯಕೀಯ ಸಮಸ್ಯೆ ಬಗ್ಗೆ ಗಾಬರಿಗೊಳಗಾಗುತ್ತಾರೆ. ಅನಾರೋಗ್ಯ ಸಮಸ್ಯೆಯಾದಾಗ ಜನರು ತಮ್ಮ ಜೇಬಿನಿಂದ ಖರ್ಚು ಮಾಡಬೇಕಿರುವ ಪರಿಸ್ಥಿತಿ ಇದ್ದು, ತಮ್ಮ ಆಸ್ತಿ ಮಾರಿ ಅಥವಾ ಸಾಲ ಪಡೆದು ಚಿಕಿತ್ಸೆ ಪಡೆಯಬೇಕಾಗುತ್ತದೆ. ಬಡ ಜನರು ಹತ್ತಿರ ಹಣವಿಲ್ಲದ್ದರಿಂದ ಚಿಕಿತ್ಸೆಯಿಂದ ವಂಚಿತರಾಗುತ್ತಾರೆ ಅಥವಾ ವಿಪರೀತ ಆರೋಗ್ಯ ವೆಚ್ಚದಿಂದ ಬಡತನಕ್ಕೆ ತಳ್ಳಲ್ಪಡುತ್ತಾರೆ. ಬಡತನಕ್ಕೆ ತಳ್ಳಲ್ಪಟ್ಟ ಕುಟುಂಬಗಳು ಪುನಃ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಹೀಗೆ ವಿಷವರ್ತುಲ ಮುಂದುವರೆಯುತ್ತದೆ.

ಇದು ದೀರ್ಘ ಲೇಖನದ ಮೊದಲ ಭಾಗ ಭಾರತದ ಆರೋಗ್ಯ ಮತ್ತು ಆರೋಗ್ಯ ಸೇವೆಯ ಸ್ಥಿತಿ ಬಗ್ಗೆ. ಮುಂದಿನ ಭಾಗಗಳಲ್ಲಿ ಆರೋಗ್ಯ ಸೇವೆಯ ಸ್ಥಿತಿ, ಸವಾಲುಗಳು, ಪರಿಹಾರಗಳು ಇರುತ್ತವೆ.

ಡಾ. ಪ್ರಕಾಶ್ ರಾವ್

ಜನಸಾಮಾನ್ಯರಿಗೆ ಆರೋಗ್ಯ ಸೇವೆಗಳ ದೊರಕುವಿಕೆಯಲ್ಲಿ ತೀವ್ರ ಅಸಮಾನತೆ, ಬಡತನ, ಇಂದಿನ ಭಾರತದ ಆರೋಗ್ಯ ನಿರ್ಲಕ್ಷ್ಯ ಸ್ಥಿತಿಗೆ ಕಾರಣವಾಗಿದೆ. ಕೆಲವೇ ಜನರಿಗೆ ಅತ್ಯುತ್ತಮ (ಜಾಗತಿಕ ಮಟ್ಟಕ್ಕೆ ಹೋಲುವಂತಹ) ಚಿಕಿತ್ಸೆ ದೊರಕಿದರೆ ಉಳಿದ ಹೆಚ್ಚಿನ ಜನರಿಗೆ ಆರೋಗ್ಯ ಸಮಸ್ಯೆ ಬಂದರೆ, ಇಡೀ ಕುಟುಂಬ ಸಾಲದಲ್ಲಿ ಮುಳುಗಿ ಬಡತನದೆಡೆಗೆ ಹೋಗುವಂತಹ ಪರಿಸ್ಥಿತಿ ಇದೆ.

ಖಾಸಗೀ ಆರೋಗ್ಯ ಸೌಲಭ್ಯಗಳು ಸಾಮಾನ್ಯ ಜನರಿಗೆ ಎಟುಕದಂತಿದ್ದು ಜನಾರೋಗ್ಯ ಸರಕಾರಿ ಸೇವೆಗಳು ಜನಸಾಮಾನ್ಯರಿಗೆ ದೊರಕದಂತಾಗಿವೆ. ಮಕ್ಕಳ ಹಾಗೂ ಗರ್ಭಿಣಿ ಮಹಿಳೆಯ ಆರೋಗ್ಯ ವಿಷಯದಲ್ಲಿ ಲಸಿಕೆ ನೀಡುವ ಸಾಧನೆಯಲ್ಲಿ ಭಾರತ ಅನೇಕ ಬಡದೇಶಗಳಿಗಿಂತ ಕೆಳಗಿನ ಸ್ಥಳದಲ್ಲಿದೆ. ಅಂತಾರಾಷ್ಟ್ರೀಯ ಮಟ್ಟದ ಆರೋಗ್ಯ ಪಟ್ಟಿಯಲ್ಲಿ ಭಾರತ ಕೆಳಗೆ ಇರುವುದು ಕಂಡುಬರುತ್ತದೆ.

ಭಾರತದಲ್ಲಿ ಜನರು ಹಲವಾರು ರೋಗಗಳನ್ನು ಎದುರಿಸಬೇಕಾಗಿದೆ. ಅನೇಕ ತಡೆಗಟ್ಟಬಹುದಾದ ರೋಗಗಳು ನಮ್ಮಲ್ಲಿದ್ದು ಹತೋಟಿಗೆ ತರಲಾಗದೆ ಉಳಿದಿವೆ. ಕೋಟ್ಯಾಂತರ ಜನರು ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಆರೋಗ್ಯ ಸಮಸ್ಯೆಗಳು (ಅಪೌಷ್ಟಿಕತೆ/ಬೊಜ್ಜು) ಬಳಲುತ್ತಿದ್ದು, ದೀರ್ಘಕಾಲದ ರೋಗಗಳು ಜನರಲ್ಲಿ ಹೆಚ್ಚುತ್ತಿರುವುದು ಕಂಡುಬರುತ್ತಿದೆ.

ಭಾರತದಲ್ಲಿ ಪ್ರತಿಯೊಬ್ಬರೂ ತುರ್ತು ವೈದ್ಯಕೀಯ ಸಮಸ್ಯೆ ಬಗ್ಗೆ ಗಾಬರಿಗೊಳಗಾಗುತ್ತಾರೆ. ಅನಾರೋಗ್ಯ ಸಮಸ್ಯೆಯಾದಾಗ ಜನರು ತಮ್ಮ ಜೇಬಿನಿಂದ ಖರ್ಚು ಮಾಡಬೇಕಿರುವ ಪರಿಸ್ಥಿತಿ ಇದ್ದು, ತಮ್ಮ ಆಸ್ತಿ ಮಾರಿ ಅಥವಾ ಸಾಲ ಪಡೆದು ಚಿಕಿತ್ಸೆ ಪಡೆಯಬೇಕಾಗುತ್ತದೆ. ಬಡ ಜನರು ಹತ್ತಿರ ಹಣವಿಲ್ಲದ್ದರಿಂದ ಚಿಕಿತ್ಸೆಯಿಂದ ವಂಚಿತರಾಗುತ್ತಾರೆ ಅಥವಾ ವಿಪರೀತ ಆರೋಗ್ಯ ವೆಚ್ಚದಿಂದ ಬಡತನಕ್ಕೆ ತಳ್ಳಲ್ಪಡುತ್ತಾರೆ. ಬಡತನಕ್ಕೆ ತಳ್ಳಲ್ಪಟ್ಟ ಕುಟುಂಬಗಳು ಪುನಃ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಹೀಗೆ ವಿಷವರ್ತುಲ ಮುಂದುವರೆಯುತ್ತದೆ. ಪ್ರತಿ ಸರಕಾರದ ವಿಫಲತೆಯಿಂದಾಗಿ, ಆರೋಗ್ಯ ಸೇವೆಗಳು ಸುಧಾರಿಸದೇ, ಬಡ ಜನರು ರೋಗಗ್ರಸ್ಥತೆ ಹೆಚ್ಚುತ್ತಿದೆ. ಅಧಿಕಾರದಲ್ಲಿರುವವರು ಜನಾರೋಗ್ಯ ಸೇವೆಗಳನ್ನು ನೀಡಲು ಕಡೆಗಣಿಸುವರಲ್ಲದೇ, ದುಬಾರಿ ಅನಗತ್ಯ, ಅನೈತಿಕ, ಗುಣಮಟ್ಟವಿಲ್ಲದ ಆರೋಗ್ಯ ಸೇವೆಗಳಿಗೆ ಕಾರಣರಾಗಿದ್ದಾರೆ.

ಆರೋಗ್ಯದ ಶೋಚನೀಯ ಸ್ಥಿತಿ

ಜಗತ್ತಿನಲ್ಲಿ 5 ವರ್ಷ ಹುಟ್ಟುಹಬ್ಬದೊಳಗೆ ಮರಣಹೊಂದುವ ಐದನೇ ಒಂದು ಭಾಗದಷ್ಟು ಮಕ್ಕಳು ಭಾರತದಲ್ಲಿದ್ದಾರೆ. ನಾವು ಈ ವಿಷಯದಲ್ಲಿ ಮುಂದುವರೆಯುತ್ತಿರುವ ದೇಶಗಳಿಗಿಂತ ಹಿಂದಿದ್ದೇವೆ ಎನ್ನಬಹುದು. ನಮ್ಮ ಭಾಗದ ಜಗತ್ತಿನಲ್ಲಿ ಕೇವಲ ಎರಡು ದೇಶಗಳು ನಮಗಿಂತ ಹಿಂದಿವೆ. ಜಗತ್ತಿನ 179 ದೇಶಗಳ ಅಧ್ಯಯನದ ಪ್ರಕಾರ ಭಾರತ ತಾಯಿಯಾಗಲು ಅಸುರಕ್ಷ ದೇಶ (2055 ಮಕ್ಕಳನ್ನು ಉಳಿಸಿ) ವೆಂದು ಸಾಬೀತಾಗಿದೆ.

ಲೈಂಗಿಕ ಫಲವತ್ತತೆಯ ವಯಸ್ಸಿನ ಮಹಿಳೆಯರಲ್ಲಿಯ ಅಪೌಷ್ಟಿಕತೆ, ಹಾಗೂ ಗರ್ಭವತಿಯಾದಾಗ ದೊರಕುವ ಕಡಿಮೆ ಪರೀಕ್ಷೆ (ಪ್ರಸವ–ಪೂರ್ವ ಪರೀಕ್ಷೆಗಳು) ಯಿಂದಾಗಿ ಮಹಿಳೆ ಹೆರಿಗೆ ಸಮಯದಲ್ಲಿ ಅನೇಕ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ತಡೆಗಟ್ಟಬಹುದಾದ ರೋಗಗಳಿಂದ ಹಾಗೂ ಹಸಿವು ಅಪೌಷ್ಟಿಕತೆಯಿಂದ ಲಕ್ಷಾಂತರ ಮಕ್ಕಳು ಪ್ರತಿವರ್ಷ ಸಾವನ್ನಪ್ಪುತ್ತಾರೆ. ಮೂರನೇ ಒಂದು ಭಾಗದಷ್ಟು ಮಕ್ಕಳಿಗೆ ಪೌಷ್ಟಿಕ ಆಹಾರ ದೊರಕುವುದಿಲ್ಲ, ಅಂದರೆ ಈ ಸ್ಥಿತಿ ಆಫ್ರಿಕಾದ ಬಡದೇಶಕ್ಕಿಂತ ಕೆಟ್ಟದ್ದಾಗಿದೆ. ಮಕ್ಕಳು ಬೇಧಿರೋಗ, ನಿಮೋನಿಯಾದಿಂದ ನಿರಂತರವಾಗಿ ಸಾವನ್ನಪ್ಪುತ್ತಾರೆ. ಇದಕ್ಕೆ ಕಾರಣ ಸ್ವಚ್ಛ ಕುಡಿಯುವ ನೀರು ಶೌಚಾಲಯ ಹಾಗೂ ಸಾರ್ವಜನಿಕ ಚಿಕಿತ್ಸಾ ಸೌಲಭ್ಯಗಳಿಲ್ಲದಿರುವುದು. ಅನೇಕ ಸರ್ವೇಗಳಿಂದ ತಿಳಿದು ಬಂದುದೇನೆಂದರೆ, ಕೇವಲ 68.7% ಮಹಿಳೆಯರು ಮೂರು ಬಾರಿ ಪ್ರಸವ ಪೂರ್ವ ವೈದ್ಯಕೀಯ ಪರೀಕ್ಷೆಗೆ ಒಳಗಾಗುತ್ತಾರೆ. 26.3% ಮಹಿಳೆಯರು ಮಾತ್ರ 100 ಐರನ್ ಹಾಗೂ ಪೋಲಿಕ್ ಆಮ್ಲದ ಮಾತ್ರೆಗಳನ್ನು ಗರ್ಭವತಿಯಾದ ಸಮಯದಲ್ಲಿ ಬಳಸಿರುತ್ತಾರೆ. ಕೇವಲ 6% ಮಕ್ಕಳು ಮಾತ್ರ (12–23 ತಿಂಗಳು) ಲಸಿಕೆಗಳನ್ನು ಪಡೆದಿದ್ದಾರೆ. ಭಾರತ ಮಾನವ ಬೆಳವಣಿಗೆಯ ಸೂಚ್ಯಾಂಕಕ್ಕೆ (Human Development Index) ಸಂಬಂಧಿಸಿದಂತೆ, 169 ದೇಶಗಳಲ್ಲಿ 119ನೇ ಸ್ಥಾನ ಪಡೆದಿದೆ.

2015ರ ಜಗತ್ತಿನ ತಾಯಿಯ ಸ್ಥಾನದ ಸೂಚ್ಯಾಂಕದಲ್ಲಿ ಭಾರತ 179 ದೇಶಗಳಲ್ಲಿ 140ನೇ ಸ್ಥಾನವನ್ನು ಪಡೆದಿದೆ. 5 ವರ್ಷ ಕಡಿಮೆ ವಯಸ್ಸಿನ ಮಕ್ಕಳ ವಾರ್ಷಿಕ ಸಾವಿನ ಸಂಖ್ಯೆ ಭಾರತವನ್ನು ಜಗತ್ತಿನ ಇತರೇ ದೇಶಗಳಿಗೆ ಹೋಲಿಸಿದರೆ ಅತಿ ಹೆಚ್ಚಾಗಿದೆ. ಹಾಗೂ ಈ ಸಾವುಗಳಲ್ಲಿ ಹೆಚ್ಚಿನ ಸಾವುಗಳನ್ನು ತಡೆಗಟ್ಟಬಹುದಾಗಿದೆ.

5 ವರ್ಷಕ್ಕಿಂತ ಕಡಿಮೆ ವಯಸ್ಸಿನ 10 ಕೋಟಿ ಮಕ್ಕಳು ಅಪೌಷ್ಟಿಕತೆಯನ್ನು ಹೊಂದಿದ್ದಾರೆ ಹಾಗೂ ಅದರಲ್ಲಿ 85 ಲಕ್ಷ ಮಕ್ಕಳು ತೀವ್ರತರದ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

ಭಾರತದಲ್ಲಿ ಕೇವಲ ಅರ್ಧದಷ್ಟು ಹೆರಿಗೆಗಳು (52%) ಸುರಕ್ಷವಾಗಿವೆ (ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ)

ಭಾರತದಲ್ಲಿ ಬೇಧಿಯಿಂದ ನರಳುವ ಮೂರನೇ ಒಂದರಷ್ಟು ಮಕ್ಕಳು ಮಾತ್ರ ಓ.ಆರ್.ಎಸ್ ಪಡೆಯುತ್ತಿದ್ದಾರೆ (ಜಗತ್ತಿನ ಮಕ್ಕಳ ಸ್ಥಿತಿ – ಯುನಿಸೆಫ್ 2011). ನಿಮೋನಿಯಾದಿಂದ ಬಳಲುವ 69% ಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗುತ್ತದೆ. ಆದರೆ ಅವರಲ್ಲಿ ಕೇವಲ 13% ಮಕ್ಕಳು ಆಂಟಿಬಯಾಟಿಕ್ ಔಷಧಿಗಳ ಚಿಕಿತ್ಸೆ ಪಡೆಯುತ್ತಾರೆ (ಯುನಿಸೆಫ್ 2011)

ಕೋಷ್ಟಕ 1 ರಿಂದ ಭಾರತ ನಮ್ಮ ನೆರೆಯ ರಾಷ್ಟ್ರಗಳಾದ ಶ್ರೀಲಂಕಾ ಹಾಗೂ ಬಾಂಗ್ಲಾದೇಶಕ್ಕೆ ಹೋಲಿಸಿದಾಗಲೂ ಕಳಪೆ ಸ್ಥಾನದಲ್ಲಿದೆ ಎಂಬುದು ತಿಳಿಯುತ್ತದೆ.

ಸಾರ್ವಜನಿಕ ಆರೋಗ್ಯದ ಪರಿಸ್ಥಿತಿಯನ್ನು ಹೇಳುವುದಾದರೆ ನಾವು ಮಕ್ಕಳನ್ನು ತಡೆಗಟ್ಟಬಹುದಾದ ರೋಗಗಳಿಂದ ಕಾಪಾಡಲು ಸಾಧ್ಯವಾಗುತ್ತಿಲ್ಲ. ಮಕ್ಕಳಿಗೆ ಕೊಡುವ ಲಸಿಕೆಗಳು ಮಕ್ಕಳ ಜೀವ ಉಳಿಸುವ, ಖಚಿತ ಪರಿಣಾಮ ಬೀರುವ, ಕಡಿಮೆ ಖರ್ಚಿನ ಸಾಧನಗಳು. ಜಗತ್ತಿನಲ್ಲಿ ಲಸಿಕೆ ಪಡೆಯದಿರುವ ಮೂರನೇ ಒಂದು ಭಾಗದಷ್ಟು ಮಕ್ಕಳು ಭಾರತದಲ್ಲಿ ಇದ್ದಾರೆ.

ಭಾರತದಲ್ಲಿ ಲಸಿಕೆ ಪಡೆದವರಲ್ಲಿ ಸಾಕಷ್ಟು ಅಸಮಾನತೆಗಳಿವೆ. ಅವು ರಾಜ್ಯಗಳಲ್ಲಿ, ಇದ್ದು ಶ್ರೀಮಂತಿಕೆ, ಜಾತಿ, ಧರ್ಮ ಹಾಗೂ ಸ್ಥಳಗಳ ಮೇಲೆ ಅವಲಂಬಿಸಿವೆ. ಶ್ರೀಮಂತರಲ್ಲಿ ಬಡವರಿಗೆ ಹೋಲಿಸಿದರೆ 2.5 ಪಟ್ಟು ಹೆಚ್ಚು ಲಸಿಕೆ ನೀಡಲಾಗಿದೆ. ಕೆಲವು ರಾಜ್ಯಗಳಲ್ಲಿ 2005–06 ರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ನೀಡಲಾಗಿತ್ತು. ಆದರೆ ಈಗ ಆ ರಾಜ್ಯಗಳು ಕಳೆದ ಹತ್ತು ವರ್ಷಗಳಲ್ಲಿ ಅತಿ ಕಡಿಮೆ ಲಸಿಕೆ ಪಡೆದ ರಾಜ್ಯಗಳಾಗಿವೆ (ತಮಿಳುನಾಡು, ಹರಿಯಾಣಾ, ಉತ್ತರಾಖಂಡ, ಮಹಾರಾಷ್ಟ್ರ (ಚಿತ್ರ–1). ತಮಿಳುನಾಡಿನಲ್ಲಿ ಅತಿ ಕಡಿಮೆ (11.2%) ಲಸಿಕೆ ನೀಡಲಾಗಿದ್ದು, ಹಿಂದೆ ಅದು ಅತ್ಯುತ್ತಮ ಮಟ್ಟದಲ್ಲಿ ಲಸಿಕಾ ಪಡೆದ ರಾಜ್ಯವಾಗಿತ್ತು. ಇದಕ್ಕೆ ಕಾರಣ ಪಟ್ಟಣ ಪ್ರದೇಶದಲ್ಲಿ ಲಸಿಕಾ ಕಾರ್ಯಕ್ರಮ ಸ್ಥಗಿತಗೊಂಡಿರುವುದು.

ಹರಿಯಾಣ	82.2	57%
ಮಹಾರಾಷ್ಟ್ರ	68	55.8
ತಮಿಳುನಾಡು	83.7	73.3
ಉತ್ತರಾಖಂಡ	67.2	56.5

ಮಹಿಳೆ ಹಾಗೂ ಹೆಣ್ಣುಮಕ್ಕಳ ಆರೋಗ್ಯ ಪರಿಸ್ಥಿತಿ

ಮಹಿಳೆ ಹಾಗೂ ಹೆಣ್ಣುಮಗು ಎದುರಿಸುತ್ತಿರುವ ಬೇಧಭಾವ ಅವರ ಆರೋಗ್ಯದ ಮೇಲೆ ಕೆಟ್ಟಪರಿಣಾಮ ಬೀರಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (National Family Health Survey) ಪ್ರಕಾರ ಹೆಣ್ಣುಮಕ್ಕಳ ಹುಟ್ಟಿದ 1ನೇ ತಿಂಗಳಿಂದ 4ನೇ ವರ್ಷದವರೆಗೂ ಸಂಭವಿಸುವ ಸಾವಿನ ದರ ಗಂಡುಮಕ್ಕಳಿಗಿಂತ 61% ಹೆಚ್ಚಾಗಿದೆ. 15 ರಿಂದ 19 ವರ್ಷ ವಯಸ್ಸಿನ ಹೆಣ್ಣುಮಕ್ಕಳೇ ಗರ್ಭಧಾರಣೆಯಿಂದಾದ ತೊಂದರೆಗಳಿಂದ ಉಂಟಾಗುವ ಸಾವುಗಳು ಅತಿ ಹೆಚ್ಚು. ಭಾರತದ ಹಿಂದುಳಿದ ಜಿಲ್ಲೆಗಳಲ್ಲಿ ವಾಸಿಸುವ ಮೂರು ಹದಿಹರೆಯ ಹೆಣ್ಣುಮಕ್ಕಳಲ್ಲಿ ಇಬ್ಬರು ಲೈಗಿಂಕ ಶೋಷಣೆಗೆ ಒಳಗಾಗಿರುತ್ತಾರೆ.

ಮಾತೃ ಮರಣ ಸಂಖ್ಯೆ (190/10 ಸಾವಿರ ಜೀವಂತ ಹೆರಿಗೆಗಳಲ್ಲಿ) ಭಾರತದಲ್ಲಿ ಇತರೆ ದೇಶಕ್ಕೆ ಹೋಲಿಸಿದರೆ ಅತಿ ಹೆಚ್ಚು. ಮಾತೃ ಮರಣ ಸಂಖ್ಯೆ ಯುವ ಮಹಿಳೆಯರಲ್ಲಿ ಅತಿ ಹೆಚ್ಚು, ಕಾರಣ ಕಾನೂನಾತ್ಮಕ ಮದುವೆಯ ವಯಸ್ಸಿಗಿಂತ ಮೊದಲೆ ಮಾಡುವ ಪದ್ಧತಿಯಿಂದಾಗಿ. ಮದುವೆಯ ವಯಸ್ಸಿಗೂ ಮುಂಚೆ ದೇಹ ಪಕ್ವವಾಗುವುದಕ್ಕಿಂತ ಮೊದಲೇ ಗರ್ಭವತಿಯಾಗುತ್ತಾರೆ. ಇದಲ್ಲದೇ ಅಪೌಷ್ಟಿಕತೆ, ರಕ್ತಹೀನತೆಯಿಂದಾಗಿ ಹದಿಹರೆಯ ವಯಸ್ಸಿನಲ್ಲಿಯೇ ಗರ್ಭಧರಿಸಿದ ಹುಡುಗಿಯರು ಸಾವನ್ನಪ್ಪುತ್ತಾರೆ. ಹೆರಿಗೆ ಸಮಯದಲ್ಲೂ ಮಹಿಳೆಯರ ಸಾವು ಸಾಮಾನ್ಯ ಕಾರಣ ವೈದ್ಯಕೀಯ ಸೌಕರ್ಯಗಳು ಇಲ್ಲದಿರುವುದರಿಂದ. ಹೆರಿಗೆಯ ಸಮಯದಲ್ಲಾಗುವ ಸಮಸ್ಯೆಗಳಿಗೆ (Complication) ಸರಿಯಾದ ಪರಿಹಾರ ನೀಡದಿರುವುದು, ಗರ್ಭವತಿಯಾದ ಸಮಯದಲ್ಲಿ ನೀಡಬೇಕಾದ ಆರೋಗ್ಯ ತಪಾಸಣೆಯ ವ್ಯವಸ್ಥೆಯಲ್ಲಿ ಕೊರತೆ ಇರುವುದು ಹಾಗೂ ಸಾರ್ವಜನಿಕ ಅರೋಗ್ಯ ವ್ಯವಸ್ಥೆಯಲ್ಲಿ ಗರ್ಭಪಾತ ಸೇವೆಗಳು ಎಲ್ಲ ಮಹಿಳೆಯರಿಗೆ ದೊರಕದಿರುವುದು ಇತ್ಯಾದಿ. ಗುಣಮಟ್ಟದ ಗರ್ಭನಿರೋಧಕ ಸೌಲಭ್ಯಗಳನ್ನು ಮಹಿಳೆಯರಿಗೆ ಅವರ ಅಗತ್ಯತೆಗೆ ತಕ್ಕಂತೆ ನೀಡಲಾಗಿಲ್ಲ. ಅದರ ಬದಲು ಕುಟುಂಬ ಯೋಜನೆಯ ಗುರಿಯನ್ನು ತಲುಪಲು ವೈದ್ಯಕೀಯ ವ್ಯವಸ್ಥೆ ಗರ್ಭನಿರ್ಮೂಲನ ಶಸ್ತ್ರಚಿಕಿತ್ಸೆಯಲ್ಲಿ ತೊಡಗಿದ್ದಾರೆ.

ಸಾಂಕ್ರಾಮಿಕ, ಅಸಾಂಕ್ರಾಮಿಕ ಹಾಗೂ ಮಾನಸಿಕ ರೋಗಗಳ ಹೊರೆ ಮಹಿಳೆಯರ ಮೇಲೆ ಹೆಚ್ಚಿದೆ. ಲೈಂಗಿಕ ಸಂಪರ್ಕದಿಂದ ಹರಡುವ ರೋಗಗಳು ಮಹಿಳೆಯರಲ್ಲಿ ಗುರುತಿಸಲ್ಪಡದೇ ಹೋಗುತ್ತವೆ ಭೀಕರ ಸಾಮಾಜಿಕ ಪರಿಣಾಮಗಳನ್ನುಂಟು ಮಾಡುತ್ತವೆ. ಹೃದಯಾಘಾತ ಹಾಗೂ ಪಾರ್ಶ್ವವಾಯು ಮಹಿಳೆಯರಿಗೆ ಮಾರಕ ರೋಗಗಳು ಹಾಗೂ ಖಿನ್ನತೆ ಮಹಿಳೆಯರಲ್ಲಿ ಪುರುಷರಿಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚು. 60 ವರ್ಷ ಮೀರಿದ ಮಹಿಳೆಯರಿಗೆ ರೋಗಕ್ಕಿಂತ ಹೆಚ್ಚು ಅಸಮರ್ಥತೆ ಇರುತ್ತದೆ, ಹಾಗೂ ಅದೇ ವಯಸ್ಸಿನ ಪುರುಷರಿಗಿಂತ ಹೆಚ್ಚು. ಇದಕ್ಕೆ ಕಾರಣ ಮಹಿಳೆಯರು ಅರೋಗ್ಯ ಸೇವೆಗಳನ್ನು ಪಡೆಯಲು ಹಿಂದೆ ಬೀಳುತ್ತಾರೆ ಹಾಗೂ ಅವರನ್ನು ಪ್ರೋತ್ಸಾಹಿಸಲಾಗುವುದಿಲ್ಲ. ಲಿಂಗಾಧಾರಿತ ಹಿಂಸಾಚಾರ ಮಹಿಳೆಯರಲ್ಲಿ ಹೆಚ್ಚಾಗಿದ್ದು, 40.3% ಮಹಿಳೆಯರು ಒಮ್ಮೆಯಾದರೂ ಅದನ್ನು ವರದಿ ಮಾಡಿರುತ್ತಾರೆ. ಈಗಿನ ದಿನಗಳಲ್ಲಿ ಲೈಂಗಿಕ ಹಿಂಸಾಚಾರ, ಸಾಂಕ್ರಾಮಿಕವಾಗಿ ಬಿಟ್ಟಿವೆ. ಹಿಂಸಾಚಾರದಿಂದಾದ ದೈಹಿಕ ಮಾನಸಿಕ ಪರಿಣಾಮಗಳನ್ನು ವೈದ್ಯಕೀಯ ಕ್ಷೇತ್ರ ಗಮನಹರಿಸಿ ಪರಿಹಾರ ನೀಡಬೇಕಾಗಿದೆ.

(ಮುಂದುವರೆಯುವುದು) ■

ಕೋಷ್ಟಕ 1 : ಬೇರೆ ಬೇರೆ ದೇಶಗಳಲ್ಲಿನ ಆರೋಗ್ಯ ಸ್ಥಿತಿಗತಿ

	ಇಂಡಿಯಾ	ಚೀನ	ಥೈಲ್ಯಾಂಡ್	ಶ್ರೀಲಂಕ	ಬಾಂಗ್ಲಾದೇಶ
100 ಜನರಿಗೆ ಇರುವ ವೈದ್ಯರ ಸಂಖ್ಯೆ	0.7	1.94	0.4	0.7	0.4
100 ಜನರಿಗೆ ಇರುವ ದಾದಿ ಸಂಖ್ಯೆ	1.7	1.85	2.1	1.6	0.3
100 ಜನರಿಗೆ ಇರುವ ಆಸ್ಪತ್ರೆ ಹಾಸಿಗೆ	0.7	3.8	2.1	3.6	0.6
ಸಾಂಸ್ಥಿಕ ಹೆರಿಗೆ ಪ್ರಮಾಣ(%)	73	99.8	99.5	98.6	32
ಮಾತೃಮರಣ ಸಂಖ್ಯೆ – 10 ಸಾವಿರ ಜೀವಂತ ಹೆರಿಗೆಗಳಲ್ಲಿ	190	32	26	29	170
ಸರಾಸರಿ ಆಯುಷ್ಯ	66.2	75.1	74.2	74.1	70.3

ಮೋದಿ ಆಳ್ವಿಕೆಯಲ್ಲಿ ಮೋಸ ಮತ್ತು ಚಮಚಾ ಬಂಡವಾಳಶಾಹಿ



ಫೋಟೋದಲ್ಲಿ ವ್ಯಂಗ್ಯ : ಸತೀಶ್ ಆಚಾರ್ಯ

ಮಬ್ಬುಗಟ್ಟಿದ ರಫೇಲ್ ಯುದ್ಧವಿಮಾನದ ವ್ಯವಹಾರದ ಬೆನ್ನ ಹಿಂದೆಯೇ, ಪಿಎನ್‌ಬಿ ಹಗರಣ ಬಹಿರಂಗಕ್ಕೆ ಬಂದಿದೆ. ಇದು ತನ್ನದು ಭ್ರಷ್ಟಾಚಾರ–ಮುಕ್ತ ಆಳ್ವಿಕೆ ಎಂಬ ಮೋದಿ ಸರಕಾರದ ದಾವೆಯನ್ನು ಹರಿದು ಚಿಂದಿ ಮಾಡಿದೆ. ನೀರವ್ ಮೋದಿ ಮತ್ತು ಮೆಹುಲ್ ಚೊಕ್ಸಿ ಇಬ್ಬರೂ ಬಿಜೆಪಿ ಮುಖಂಡರಿಗೆ ನಿಕಟವಾಗಿರುವವರು ಎಂದು ತಿಳಿದಿರುವ ಸಂಗತಿ; ಕಾರ್ಪೋರೇಟ್ ಸುಸ್ತಿ ಸಾಲಗಳು ಮತ್ತು ಬ್ಯಾಂಕಿಂಗ್ ಬಿಕ್ಕಟ್ಟಿನ ಮೂಲದಲ್ಲಿರುವುದು ನವ–ಉದಾರವಾದಿ ಧೋರಣೆಗಳನ್ನು ರಭಸದಿಂದ ಜಾರಿ ಮಾಡುತ್ತಿರುವ ಆಳ್ವಿಕೆಯಲ್ಲಿ ಚಮಚಾ ಬಂಡವಾಳಶಾಹಿ ಮತ್ತು ಭ್ರಷ್ಟ ರಾಜಕಾರಣಿಗಳ ನಂಟು. ಈ ಹಗರಣ ಬ್ಯಾಂಕಿಂಗ್ ವಲಯದಲ್ಲಿ ಉದಾರೀಕರಣ/ ಅನಿಯಂತ್ರಣದ ಮತ್ತು ಹೇಗೇ ಆಗಲಿ ಬ್ಯಾಂಕ್‌ಗಳು ಲಾಭ ಮಾಡಬೇಕು ಎಂಬ ಒತ್ತಡಗಳ ತೀವ್ರ ದುಷ್ಪರಿಣಾಮಗಳನ್ನು ತೋರಿಸುತ್ತದೆ.



ಪ್ರಕಾಶ ಕಾರಟ್

ಪಂಜಾಬ್ ನ್ಯಾಶನಲ್ ಬ್ಯಾಂಕ್ (ಪಿಎನ್‌ಬಿ) ಹಗರಣ ಭಾರತೀಯ ಬ್ಯಾಂಕಿಂಗ್ ಇತಿಹಾಸದಲ್ಲಿ ಅತ್ಯಂತ ಭಂಢ ಮತ್ತು ಆಘಾತಕಾರಿ ಮೋಸದ ಪ್ರಕರಣ. 85ನೇ ಅತ್ಯಂತ ಭಾರತೀಯ ಶ್ರೀಮಂತ ಎಂಬ ಖ್ಯಾತಿಯ ನೀರವ್ ಮೋದಿ ಮತ್ತು ಆತನ ಸೋದರ ಮಾವ ಮೆಹುಲ್ ಚೊಕ್ಸಿ ಬ್ಯಾಂಕ್ ಅಧಿಕಾರಿಗಳೊಂದಿಗೆ ಶಾಮೀಲಾಗಿ ಮತ್ತೆ–ಮತ್ತೆ ಸಾಲ ಪಾವತಿಯ ಮುಚ್ಚಳಿಕೆ(ಎಲ್‌ಒಯು) ಯ ಖೋಟಾ ಪತ್ರಗಳನ್ನು ನೀಡಿ 11,400 ಕೋಟಿ ರೂ.ಗಳ ಗೋಲ್‌ಮಾಲ್ ಮಾಡಿದ್ದಾರೆ ಎಂದು ವರದಿಯಾಗಿದೆ.

ಈ ಮೋಸ 2011ರಿಂದ ನಡೆದುಕೊಂಡು ಬಂದಿದೆ ಮತ್ತು 2017ರಲ್ಲಿ ತುತ್ತತುದಿ ತಲುಪಿದೆ ಎಂಬುದು ಎಂತಹ ಪಮಾಣದಲ್ಲಿ ಮತ್ತು ಎಷ್ಟು ಸುಲಭವಾಗಿ ಇಂತಹ ಮೋಸವನ್ನು ಮಾಡಲಾಗಿದೆ ಎಂಬುದನ್ನು ಸೂಚಿಸುತ್ತದೆ. ಮೋದಿಯವರ ನವಭಾರತದಲ್ಲಿ 'ವ್ಯಾಪಾರ ಮಾಡುವ ಸುಗಮತೆ' ಎಂದರೆ ಇದೇ ಏನು?

ಮೋದಿ ಸರಕಾರದ ಅಡಿಯಲ್ಲಿ ಸ್ಥಾಪನೆಗೊಂಡಿರುವ ವಿಧಾನದಂತೆ, ನೀರವ್ ಮೋದಿ, ಆತನ ಮಾವ ಮತ್ತು ಕುಟುಂಬದ ಸದಸ್ಯರು ಜನವರಿ ತಿಂಗಳ ಮೊದಲ ವಾರದಲ್ಲಿ, ಸಿಬಿಐ ಈ ಕೆಟ್ಟ ಕೆಲಸಗಳ ತನಿಖೆಗೆ ತೊಡಗುವ ಮೊದಲು, ಆರಾಮವಾಗಿ ದೇಶ ಬಿಟ್ಟು ಹೋದರು. ಲಲಿತ್ ಮೋದಿ ಮತ್ತು ವಿಜಯ ಮಲ್ಯ ಕೂಡ ಹೀಗೇ ಮಾಡಿದ್ದರು. ಇನ್ನೂ ರಹಸ್ಯಮಯ ಸಂಗತಿಯೆಂದರೆ, ನೀರವ್ ಮೋದಿ ಜನವರಿಯ ಮೂರನೇ ವಾರದಲ್ಲಿ ದಾವೊಸ್‌ನಲ್ಲಿ ವಿಶ್ವ ಆರ್ಥಿಕ ವೇದಿಕೆಯಲ್ಲಿ ಭಾರತದ ವ್ಯಾಪಾರ ನಿಯೋಗದ ಸದಸ್ಯರಾಗಿ ಕಾಣಿಸಿಕೊಂಡರು ಮತ್ತು ಇತರ ವ್ಯಾಪಾರಿಗಳ ಜತೆಗೆ ಪ್ರಧಾನ ಮಂತ್ರಿಗಳೊಂದಿಗೆ ಫೋಟೋ ಕೂಡ ಹೊಡಿಸಿಕೊಂಡರು.

ಪಿಎನ್‌ಬಿ ಹಗರಣ ಸಾಕಷ್ಟು ಆಳ ಮತ್ತು ವಿಸ್ತಾರಗಳನ್ನು ಹೊಂದಿದೆ. ನಾಲ್ಕು ಇತರ ಬ್ಯಾಂಕುಗಳು– ಎಸ್‌ಬಿಐ, ಯೂನಿಯನ್ ಬ್ಯಾಂಕ್, ಅಲಹಾಬಾದ್ ಬ್ಯಾಂಕ್ ಮತ್ತು ಆಕ್ಸಿಸ್ ಬ್ಯಾಂಕ್–ಕೂಡ ಈ ಮೋಸಕ್ಕೆ ಒಳಗಾಗಿವೆ.. ಮಾಹಿತಿ ಹಕ್ಕಿನ ಅಡಿಯಲ್ಲಿ ಪಡೆದ ಉತ್ತರದ ಪ್ರಕಾರ ಮಾರ್ಚ್ 31, 2017ರಂದು ಅಂತ್ಯವಾಗುವ ಹಿಂದಿನ ಐದು ವರ್ಷಗಳಲ್ಲಿ ರೂ.61260 ಕೋಟಿ ಮೊತ್ತದ 8670 'ಸಾಲ ವಂಚನೆ'ಯ ಕೇಸುಗಳಿವೆ.


ಈ ಹಗರಣ ಬ್ಯಾಂಕಿಂಗ್ ವಲಯುದಲ್ಲಿ ಉದಾರೀಕರಣ/ ಅನಿಯಂತ್ರಣದ ಮತ್ತು ಹೇಗೇ ಆಗಲಿ ಬ್ಯಾಂಕ್‌ಗಳು ಲಾಭ ಮಾಡಬೇಕು ಎಂಬ ಸೂಚನೆಗಳ ತೀವ್ರ ದುಷ್ಪರಿಣಾಮಗಳನ್ನು ತೋರಿಸುತ್ತದೆ. ತ್ವರಿತ ಉದಾರೀಕರಣದ ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳು ಅಪಾಯ ತುಂಬಿರುವ ವ್ಯವಹಾರಗಳನ್ನು ನಡೆಸಿವೆ, ಬಡ್ಡಿ ವ್ಯತ್ಯಾಸಗಳು, ಕಮಿಶನ್ ಶುಲ್ಕಗಳು ಮತ್ತು ಸೇವಾ ಶುಲ್ಕಗಳಿಂದ ಸುಲಭ ಆದಾಯ ಗಳಿಸಿಕೊಳ್ಳುವ ಪ್ರಲೋಭನೆಗಳಿಗೆ ಒಳಗಾಗಿವೆ. ಶ್ರಮ ವಹಿಸಿ ಪರೀಕ್ಷಣೆ ಮಾಡುವುದನ್ನು ಗಮನಾರ್ಹ ರೀತಿಯಲ್ಲಿ ಇಳಿಸಲಾಗಿದೆ, ಮತ್ತು ಉಸ್ತುವಾರಿ ಹಾಗೂ ನಿಗಾ ವ್ಯವಸ್ಥೆಗಳನ್ನು ದುರ್ಬಲಗೊಳಿಸಲಾಗಿದೆ.

ಪಿಎನ್‌ಬಿ ತರಹೆಯ ಹಗರಣಗಳಿಗೆ ಉದಾರೀಕರಣದ ಧೋರಣೆಗಳನ್ನು ಹೊಣೆಯಾಗಿಸುವ ಬದಲು ನವ–ಉದಾರವಾದಿ ಧೋರಣೆಗಳ ವಕ್ತಾರರು ನಿರೀಕ್ಷಿಸಿದಂತೆ ಬ್ಯಾಂಕ್ ರಾಷ್ಟ್ರೀಕರಣವನ್ನು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಟೀಕಿಸುತ್ತಿದ್ದಾರೆ. ಮುಖ್ಯ ಆರ್ಥಿಕ ಸಲಹೆಗಾರರಾದ ಅರವಿಂದ ಸುಬ್ರಮಣ್ಯನ್ ಇನ್ನಷ್ಟು ನಿಯಂತ್ರಣಗಳನ್ನು ತೆಗೆಯಬೇಕು ಎಂದು ವಾದಿಸಲಷ್ಟೇ ಅಲ್ಲ, ಹೆಚ್ಚಿನ 'ಖಾಸಗೀ ವಲಯದ ಭಾಗೀದಾರಿಕೆ'ಯ ಪ್ರತಿಪಾದನಗೆ ಈ ಹಗರಣವನ್ನು ಬಳಸಿಕೊಂಡಿದ್ದಾರೆ. ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಖಾಸಗಿ ಒಡೆತನ ಬಹುಮತದಲ್ಲಿರಬೇಕು ಎಂದು ಅವರು ವಾದ ಹೂಡುತ್ತಾರೆ., ಸರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣಕ್ಕೆ ತಹತಹಿಸುವವರು ಖಾಸಗಿ ವಾಣಿಜ್ಯ ಬ್ಯಾಂಕುಗಳ ದಾಖಲೆಯನ್ನೊಮ್ಮೆ ನೋಡುವುದು ಒಳ್ಳೆಯದು. ಸ್ವಾತಂತ್ರ್ಯ ದೊರೆತಂದಿನಿಂದ 1969ರ ವರೆಗೆ 559 ಖಾಸಗಿ ವಾಣಿಜ್ಯ ಬ್ಯಾಂಕುಗಳು ಠೇವಣಿದಾರರನ್ನು ನಡು ನೀರಿನಲ್ಲಿ ಕೈಬಿಟ್ಟು ಮುಳುಗಿದವು, ರಾಷ್ಟ್ರೀಕರಣದ ನಂತರ 25 ಖಾಸಗಿ ಬ್ಯಾಂಕುಗಳು ವಿಫಲವಾದವು, ಅವನ್ನು ಸಾರ್ವಜನಿಕ ವಲಯದ ಬ್ಯಾಂಕುಗಳೊಂದಿಗೆ ವಿಲೀನಗೊಳಿಸುವ ಮೂಲಕ ಕಾಪಾಡಲಾಯಿತು. ಇದರಲ್ಲಿ 'ಹೊಸ ತಲೆಮಾರಿನ ಖಾಸಗಿ ಬ್ಯಾಂಕು' ಎನಿಸಿದ್ದ ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಕೂಡ ಸೇರಿದೆ.

ನವ–ಉದಾರವಾದಿ ಧೋರಣೆಗಳನ್ನು ಅನುಸರಿಸುವುದೇ ಹಗರಣದ ಮೂಲಕಾರಣ. ರಿಝರ್ವ್ ಬ್ಯಾಂಕಿನ ತಪಾಸಣಾ ಇಲಾಖೆಯನ್ನು ಬಾಯಿ ಮುಚ್ಚಿಸಿಡಲಾಗಿದೆ. ಬ್ಯಾಂಕುಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಮತ್ತು ಇತರ ಹಣಕಾಸು ಸಂಸ್ಥೆಗಳಿಗೂ ಸ್ವಯಂ ಪ್ರಮಾಣಪತ್ರ ವಿಧಾನವನ್ನು ಅನುಸರಿಸಲು ಅನುಮತಿ ನೀಡಲಾಗಿದೆ. ಅವು ತತ್ವಶಃ ಅಲ್ಲೊಂದು ಇಲ್ಲೊಂದು ತಪಾಸಣೆ ನಡೆಸಬೇಕು, ಆದರೆ ವಾಸ್ತವವಾಗಿ ಲೆಕ್ಕ ಭರ್ತಿಗೆ ಮಾತ್ರ ಮಾಡಬಹುದಾಗಿದೆ.

ಒಂದು ಸ್ಪರ್ಧಾತ್ಮಕ ವಾತಾವರಣದಲ್ಲಿ ಗರಿಷ್ಟ ಲಾಭ ಮಾಡಿಕೊಳ್ಳುವ ತರ್ಕ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಅಪಾಯ ತುಂಬಿದ ಸಾಲನೀಡಿಕೆಗಳ, ಮತ್ತು ಸಾಕಷ್ಟು ಶ್ರಮವಹಿಸದೆ ಬಡ್ಡಿಯಲ್ಲಿನ ಲಾಭಾಂಶಗಳ ಮೂಲಕ ಆದಾಯ ಗಳಿಸುವ ಜಾರುದಾರಿಯತ್ತ ಅಟ್ಟಿದೆ.

ಮಬ್ಬುಗಟ್ಟಿದ ರಫೇಲ್ ಯುದ್ಧವಿಮಾನದ ವ್ಯವಹಾರದ ಬೆನ್ನ ಹಿಂದೆಯೇ ಬಂದಿರುವ ನೀರವ್ ಮೋದಿ ಹಗರಣ ತನ್ನದು ಭ್ರಷ್ಟಾಚಾರ–ಮುಕ್ತ ಆಳ್ವಿಕೆ ಎಂಬ ಮೋದಿ ಸರಕಾರದ ದಾವೆಯನ್ನು ಹರಿದು ಚಿಂದಿ ಮಾಡಿದೆ. ನೀರವ್ ಮೋದಿ ಮತ್ತು ಮೆಹುಲ್ ಚೊಕ್ಸಿ ಇಬ್ಬರೂ ಬಿಜೆಪಿ ಮುಖಂಡರಿಗೆ ನಿಕಟವಾಗಿರುವವರು ಎಂದು ತಿಳಿದಿರುವ ಸಂಗತಿ; ಇನ್ನೊಬ್ಬ ದೊಡ್ಡ ವ್ಯಾಪಾರಿ ಅನಿಲ್ ಅಂಬಾನಿ ಕೂಡ ಇಲ್ಲಿ ಫಲಾನುಭವಿ. ದೇಶದಲ್ಲಿ ಕಾರ್ಯನಿರ್ವಹಿಸದ ಆಸ್ತಿಗಳು ಮತ್ತು ಬ್ಯಾಂಕಿಂಗ್ ಬಿಕ್ಕಟ್ಟಿನ ಮೂಲದಲ್ಲಿರುವುದು ಚಮಚಾ ಬಂಡವಾಳಶಾಹಿ ಮತ್ತು ಭ್ರಷ್ಟ ರಾಜಕಾರಣಿಗಳ ನಂಟು.



ವ್ಯಂಗ್ಯಚಿತ್ರ: ಮಂಜುಲ್




ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಖಾಸಗೀಕರಣವಾಲಾಗಳಿಗೆ ಬ್ಯಾಂಕ್ ನೌಕರರ/ಅಧಿಕಾರಿಗಳ ಸಂಘಟನೆಗಳ ಪ್ರಶ್ನೆಗಳು


ಪಿಎನ್‌ಬಿ ತರಹೆಯ ಹಗರಣಗಳಿಗೆ ಉದಾರೀಕರಣದ ಧೋರಣೆಗಳನ್ನು ಹೊಣೆಯಾಗಿಸುವ ಬದಲು ನವ–ಉದಾರವಾದಿ ಧೋರಣೆಗಳ ವಕ್ತಾರರು ಬ್ಯಾಂಕ್ ರಾಷ್ಟ್ರೀಕರಣವನ್ನು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಟೀಕಿಸುತ್ತಿದ್ದಾರೆ. ಫಿಕಿ, ಅಸೊಚಾಂ ಮುಂತಾದ ದೊಡ್ಡ ಕಾರ್ಪೊರೇಟ್‌ಗಳ ಸಂಘಗಳು ಮಾತ್ರವಲ್ಲ ಸ್ವತಃ ಈ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರು ಅಳಿದುಳಿದ ನಿಯಂತ್ರಣಗಳನ್ನೂ ತೆಗೆದು ಹಾಕಿ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಖಾಸಗೀಕರಿಸಬೇಕು ಎಂದು ಕೂಗಲಾರಂಭಿಸಿದ್ದಾರೆ. ಇದನ್ನು ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳ ಸಂಘಟನೆಗಳು ಬಲವಾಗಿ ಖಂಡಿಸಿವೆ. ಸರಕಾರ, ಅವರ ಆರ್ಥಿಕ ಸಲಹೆಗಾರರು , ರಿಜರ್ವ್ ಬ್ಯಾಂಕ್, ಮುಖ್ಯ ಜಾಗೃತ ಆಯುಕ್ತರು ಎಲ್ಲರೂ ಇಂತಹ ಹಗರಣಗಳು ನಡೆದಾಗಲೇ ಎಚ್ಚೆತ್ತುಕೊಳ್ಳುವುದೇಕೆ ಎಂದು ಅವರು ಪ್ರಶ್ನಿಸಿದ್ದಾರೆ. ಅವರ ಈ ಕೆಲವು ಪ್ರಶ್ನೆಗಳಿಗೆ ಈ ಖಾಸಗೀಕರಣವಾಲಾಗಳು ಉತ್ತರಿಸುತ್ತಾರೆಯೇ?


* ಈ ಹಗರಣವನ್ನು ಉಂಟು ಮಾಡಿದ ಎಲ್‌ಒಯುಗಳನ್ನು ಕೊಡುವ ಪದ್ಧತಿ ವಿದೇಶಿ ಬ್ಯಾಂಕುಗಳಲ್ಲಿ ಇಲ್ಲ. ಇದನ್ನು ಇಲ್ಲಿ ಆರ್‌ಬಿಐ ತಂದಿರುವುದೇಕೆ? ಆಮೂಲಕ ಭಾರತದ ಬ್ಯಾಂಕುಗಳ ಆದಾಯಕ್ಕೆ ಕತ್ತರಿ ಹಾಕಿದ್ದೇಕೆ?ಭಾರತದ ಉದ್ಯಮಿಗಳು ವಿದೇಶಗಳಲ್ಲಿ ಕಡಿಮೆ ಬಡ್ಡಿದರಗಳ ಪ್ರಯೋಜನ ಪಡೆಯಲೆಂದೇನು?
* ಈ ಹಗರಣಕ್ಕೆ ಅನುವು ಮಾಡಿಕೊಟ್ಟ SWIFT ವ್ಯವಸ್ಥೆಯಲ್ಲಿ ಸಮಸ್ಯೆಗಳಿವೆ ಎಂಬುದು ಈ ಹಿಂದೆಯೂ ಅರಿವಿಗೆ ಬಂದಿತ್ತು. ಆದರೂ ಸರಕಾರ ಮತ್ತು ಆರ್‌ಬಿಐ ಮಧ್ಯಪ್ರವೇಶಿಸಿಲ್ಲವೇಕೆ?
* ಆರ್‌ಬಿಐ ಆಡಿಟ್ ಮತ್ತು ಉಸ್ತುವಾರಿಯಲ್ಲಿ ವಿಫಲವಾದದ್ದೇಕೆ? ಅದು ಒಂದು ವರ್ಷವಾದ ಮೇಲೂ ರದ್ದಾದ ನೋಟುಗಳನ್ನು ಎಣಿಸುತ್ತಲೇ ಇರುವುದರಿಂದಾಗಿಯೇ?
* **ಮುಖ್ಯ ಆರ್ಥಿಕ ಸಲಹೆಗಾರರು ಆರ್ಥಿಕವನ್ನು ಉತ್ತಮಡಿಸಲು ಏನು ಮಾಡಿದ್ದಾರೆ? ಖಾಸಗೀಕರಿಸಬೇಕೆಂಬ ಅವರ ಸಲಹೆಯ ಅರ್ಥವೇನು? ನೀರವ್ ಮೋದಿ ಲೂಟಿ ಮಾಡಿದ ಪಿಎನ್‌ಬಿಯನ್ನು ಆತನ ಹಿರಿಯ ಸಂಬಂಧಿ ಅಂಬಾನಿಗೆ ಕೊಡಬೇಕೆಂದೇ, ಅಥವ ಸ್ವತಃ**

ಪುಟ 12 ನೋಡಿ



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು





ರಾಜ್ಯದ ರೈತರನ್ನು ಮತ್ತಷ್ಟು ಸಂಕಷ್ಟದೆಡೆ ತಳ್ಳುವ ರಾಜ್ಯ ಬಜೆಟ್ : ರೈತ ಸಂಘ

ರಾಜ್ಯದ ರೈತರು ಮತ್ತು ಕೃಷಿಕೂಲಿಕಾರರ ಬದುಕಿನ ಮೂಲವಾದ ಸಾಂಪ್ರದಾಯಿಕ ಕೃಷಿಯನ್ನು ಲಾಭದಾಯಕವನ್ನಾಗಿಸಲು ಮತ್ತು ಅದರಲ್ಲಾಗುವ ನಷ್ಟದಿಂದ ಅದನ್ನು ಪಾರುಮಾಡಲು ಪರಿಣಾಮಕಾರಿಯಾದ ಯಾವುದೇ ಕ್ರಮ ಹಾಗೂ ನಿರ್ದೇಶನಗಳನ್ನು ಈ ಬಜೆಟ್‌ನಲ್ಲಿ ತೋರಿಸಿಲ್ಲ. ಬದಲಿಗೆ, ಸಾಂಪ್ರದಾಯಿಕ ಕೃಷಿ ಹಾಗೂ ರೈತರು ಮತ್ತು ಕೂಲಿಕಾರರ ಮೇಲೆ ಮತ್ತಷ್ಟು ದಾಳಿಗಳನ್ನು ನಡೆಸಲು ಕಂಪೆನಿ ಕೃಷಿಗೆ, ಕೃಷಿ ಉದ್ಯಮಿಗಳಿಗೆ ನೆರವಾಗುವ ಕ್ರಮಗಳನ್ನು ಪ್ರಕಟಿಸಿರುವುದು, ಎತ್ತಿಹಿಡಿದಿರುವುದು ತೀವ್ರ ಖಂಡನೀಯವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 2018–19 ರ ಸಾಲಿನ ಕರ್ನಾಟಕದ ಬಜೆಟ್ ಅದಾಗಲೇ ಬಿಕ್ಕಟ್ಟಿಗೆ ಸಿಲುಕಿರುವ ಕೃಷಿ ಮತ್ತು ಗ್ರಾಮೀಣ ಪ್ರದೇಶವನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡುವ ಉದ್ದೇಶವನ್ನು ಹೊಂದಿದ್ದು ತಕ್ಷಣವೇ ಅದರ ದಿಶೆಯನ್ನು ಬದಲಾಯಿಸಿ, ಇವುಗಳನ್ನು ಬಿಕ್ಕಟ್ಟಿನಿಂದ ಪಾರುಮಾಡಲು ಅಗತ್ಯವಾದ ಕ್ರಮಗಳನ್ನು ಸೇರ್ಪಡೆ ಮಾಡುವಂತೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ಬಲವಾಗಿ ಒತ್ತಾಯಿಸಿದೆ.

ತಾನು ರೈತನ ಮಗ ಹಾಗೂ ತನಗೆ ರೈತನ ಕಷ್ಟವೇನೆಂದು ತಿಳಿದಿದೆಯೆಂದು ತಮ್ಮಷ್ಟಕ್ಕೆ ಹೇಳಿಕೊಂಡಿರುವ ಸಿದ್ದರಾಮಯ್ಯನವರು ರೈತರ ಸಂಕಷ್ಟಗಳ ಪರಿಹಾರಗಳನ್ನು ಭಾಷಣಕ್ಕೆ ಸೀಮಿತಗೊಳಿಸಿದ್ದಾರೆ. ಮುಖ್ಯವಾಗಿ, ರಾಜ್ಯದ ರೈತರು ಮತ್ತು ಕೃಷಿಕೂಲಿಕಾರರ ಬದುಕಿನ ಮೂಲವಾದ ಸಾಂಪ್ರದಾಯಿಕ ಕೃಷಿಯನ್ನು ಲಾಭದಾಯಕವನ್ನಾಗಿಸಲು ಮತ್ತು ಅದರಲ್ಲಾಗುವ ನಷ್ಟದಿಂದ ಅದನ್ನು ಪಾರುಮಾಡಲು ಪರಿಣಾಮಕಾರಿಯಾದ ಯಾವುದೇ ಕ್ರಮ ಹಾಗೂ ನಿರ್ದೇಶನಗಳನ್ನು ಈ ಬಜೆಟ್‌ನಲ್ಲಿ ತೋರಿಸಿಲ್ಲ. ಬದಲಿಗೆ, ಸಾಂಪ್ರದಾಯಿಕ ಕೃಷಿ ಹಾಗೂ ರೈತರು ಮತ್ತು ಕೂಲಿಕಾರರ ಮೇಲೆ ಮತ್ತಷ್ಟು ದಾಳಿಗಳನ್ನು ನಡೆಸಲು ಕಂಪೆನಿ ಕೃಷಿಗೆ, ಕೃಷಿ ಉದ್ಯಮಿಗಳಿಗೆ ನೆರವಾಗುವ ಕ್ರಮಗಳನ್ನು ಪ್ರಕಟಿಸಿರುವುದು, ಎತ್ತಿಹಿಡಿದಿರುವುದು ತೀವ್ರ ಖಂಡನೀಯವಾಗಿದೆ.

ರಾಜ್ಯದ ಕೃಷಿ ಮಾರುಕಟ್ಟೆಗಳನ್ನು ಆನ್‌ಲೈನ್ ಅಥವಾ ಅಂತರ್ಜಾಲಕ್ಕೊಳಪಡಿಸಿರುವುದು ರಾಜ್ಯದ ರೈತರಿಗೆ ನೆರವಾಗಬೇಕಾದರೇ, ಕೃಷಿ ಆಯೋಗದ ಅಧ್ಯಕ್ಷರಾದ ಡಾ.ಎಂ.ಎಸ್.ಸ್ವಾಮಿನಾಥನ್‌ರವರ ಸಲಹೆಯಂತೆ ವೈಜ್ಞಾನಿಕವಾಗಿ ಗುರುತಿಸಲಾದ ಕೃಷಿ ಉತ್ಪನ್ನಗಳ ವೆಚ್ಚದ ಒಂದೂವರೆ ಪಟ್ಟು ಬೆಂಬಲ ಬೆಲೆ ನಿಗದಿಸಿ, ವರ್ಷವಿಡೀ (24*7 ಸಮಯ) ಆನ್ ಲೈನ್ ನಲ್ಲಿ ಖರೀದಿಸಲು ಸರಕಾರಿ ಮಾರುಕಟ್ಟೆ ಏಜೆನ್ಸಿಗಳು ಇರುವಂತೆ ಮತ್ತು ಅವುಗಳಿಗೆ ಅಗತ್ಯವಾದ ಹಣಕಾಸು ಸಿಗುವಂತೆ ರಾಜ್ಯ ಸರಕಾರ ಆದ್ಯತೆಯ ಮೇರೆಗೆ ಮಾಡಬೇಕಾಗಿದೆ. ಬಜೆಟ್‌ನಲ್ಲಿ ಇಂತಹ ಯಾವುದೇ ಪ್ರಸ್ತಾಪಗಳಿಲ್ಲ. ಅದಿಲ್ಲದಿದ್ದರೇ ಅದು, ವಿದೇಶಿ ಕೃಷಿ ಉತ್ಪನ್ನಗಳಿಗೆ ನೆರವಾಗಲಿದೆ ಮಾತ್ರವಲ್ಲ, ರೈತರ ಹೆಗಲ ಮೇಲೆ ಸಾಲದ ಭಾರವನ್ನು ಹೇರಲಿದೆ.

ಸರಕಾರಗಳ ನಷ್ಟದಾಯಕವಾದ ಕೃಷಿ ನೀತಿಯಿಂದಾಗಿ ರೈತರ ಹೆಗಲೇರುವ ಸಾಲದ ಭಾರವನ್ನು ಕಡಿಮೆ ಮಾಡಲು ಕೇರಳದ ಮಾದರಿಯಲ್ಲಿ ಋಣ ಮುಕ್ತ ಕಾಯ್ದೆ ಜಾರಿ ಮಾಡಬೇಕೆಂಬ ನಮ್ಮ ಒತ್ತಾಯವನ್ನು ಪರಿಗಣಿಸಿಲ್ಲ.

ಸುಮಾರು 20 ಲಕ್ಷ ದಲಿತರು, ಬಡವರು, ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಿದ ಸರಕಾರಿ ಜಮೀನುಗಳಿಗೆ ಹಕ್ಕುಪತ್ರ ನೀಡುವ ಕನಿಷ್ಠ ಸೂಚನೆಯನ್ನು ನೀಡಿಲ್ಲ. ಬದಲಿಗೆ ಫಾರ್ಮರ್ ಪ್ರಡ್ಯೂಸರ್ ಆರ್ಗನೈಸೇಷನ್ಸ (FPO) ಮತ್ತು ನಗರ ಪ್ರದೇಶದ ಮಾರುಕಟ್ಟೆಗಾಗಿ ತರಕಾರಿಗಳನ್ನು ಬೆಳೆಯುವ ಜಲಕೃಷಿ ಅಥವಾ ಹೈಡ್ರೋಫೋನಿಕ್ಸ್ (HYDROPHONICS) ಹೆಸರಿನ ಕಂಪೆನಿ ಕೃಷಿಗೆ ಅವಕಾಶ ನೀಡುವ ಸೂಚನೆಗಳು ಇವರನ್ನು ಮತ್ತು ಇತರ ಎಲ್ಲ ರೈತರನ್ನು ಬೆದರಿಸಿವೆ.

ದಲಿತರ ಜನಸಂಖ್ಯೆಗನುಗುಣವಾಗಿ ಅನುದಾನ ನೀಡುವ SCSP ಹಾಗೂ TSP ಕಾಯ್ದೆಯಂತೆ ಸಾಕಷ್ಟು ಅನುದಾನದ ಹಣವಿದ್ದರೂ ಕೃಷಿಯಲ್ಲಿ ಹಿತಾಸಕ್ತಿ ಹೊಂದಿರುವ ಭೂಹೀನ ದಲಿತರಿಗೆ ವ್ಯಾಪಕವಾಗಿ ಭೂಮಿ ಒದಗಿಸುವ ಭೂಮಿ ಯೋಜನೆಯನ್ನು ವಿಸ್ತರಿಸ ಬೇಕೆಂದು ಕೇಳಲಾಗುತ್ತಿದ್ದರೂ, ಆ ಮೂಲಕ ಅವರ ಸ್ವಾವಲಂಭಿ ಹಾದಿಯನ್ನು ತೆರೆಯಲು ಅವಕಾಶಗಳಿದ್ದರೂ, ಈ ಕುರಿತು ಸಿದ್ದರಾಮಯ್ಯ ಮೌನ ವಹಿಸಿ ತಾವೆಷ್ಟು ದಲಿತ ಹಾಗೂ ಹಿಂದುಳಿದವರ ಪರವೆಂದು ತೋರಿಸಿಕೊಂಡಿದ್ದಾರೆ.

ಕೃಷಿಯಲ್ಲಿ ಬೆಳೆಯುತ್ತಿರುವ ಆಧುನಿಕ ತಂತ್ರಜ್ಞಾನದಿಂದಾಗಿ ಉಂಟಾಗುತ್ತಿರುವ ವ್ಯಾಪಕವಾದ ಕೃಷಿಯಲ್ಲಿನ ಕೂಲಿ ಹೀನ ಸ್ಥಿತಿಯಿಂದ ಬಡ ರೈತರು ಮತ್ತು ಕೂಲಿಕಾರರ ಉದ್ಯೋಗಾವಕಾಶ ವಿಸ್ತರಿಸುವ ಕನಿಷ್ಠವೇತನವನ್ನು ರೂ. 600ಕ್ಕೆ ಹೆಚ್ಚಿಸುವ ಪ್ರಸ್ತಾಪಗಳನ್ನು ಉಪೇಕ್ಷಿಸಲಾಗಿದೆ.

ಮುಂಬರುವ ಚುನಾವಣಾ ದೃಷ್ಟಿಯಿಂದ ಪ್ರಕಟಿಸಲಾದ ಒಣ ಭೂಮಿ ಪ್ರದೇಶದ ರೈತರಿಗೆ ರೂ. 5,000 ದಿಂದ 10,000 ನೀಡುವ ಪ್ರಸ್ತಾಪವೊಂದು ಬಿಟ್ಟರೇ, ಕೃಷಿ ರಂಗವನ್ನು ಇಂದಿನ ಸಂಕಷ್ಟದಿಂದ ಮೇಲೆತ್ತಲು ಈ ಬಜೆಟ್ ನೆರವಾಗಿಲ್ಲ. ಬದಲಿಗೆ ರೈತರ ಮೇಲೆ ದಾಳಿಯನ್ನು ವಿಸ್ತರಿಸುವ ಇಂಗಿತವನ್ನು ಹೊಂದಿದೆ.

ಇದರ ಹಾಗೂ ಇಂತಹ ಕಂಪನಿ ಕೃಷಿ ನೀತಿಯ ವಿರುದ್ದ ಪ್ರತಿಭಟನೆಯನ್ನು ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ 23.02.2018 ರಂದು ವಿಧಾನಸೌಧ ಚಲೋ ಸಂಘಟಿಸಿ ಪ್ರತಿರೋಧ ಒಡ್ಡಲು ನಿರ್ಧರಿಸಿದ್ದು ರಾಜ್ಯದ ರೈತರು, ಕೂಲಿಕಾರರು, ನಾಗರೀಕರು ಬೆಂಬಲಿಸಿ ಪಾಲ್ಗೊಳ್ಳುವಂತೆ ರೈತ ಸಂಘಟನೆ ಕರೆ ನೀಡಿದೆ.

ದಲಿತ ಯೋಜನೆಯ ರೂ.929 ಕೋಟಿ ವರ್ಗಾವಣೆ
'ಅಹಿಂದ' ಮುಖ್ಯಮಂತ್ರಿಯಿಂದ ದಲಿತರಿಗೆ ವಂಚನೆ : ಡಿ.ಎಚ್.ಎಸ್.

ದಲಿತರಿಗೆ ಸ್ವರ್ಗವನ್ನೇ ತೋರುತ್ತಿರುವ, 'ದಲಿತರ ಬಂಧು ನಾನೇ' ಎಂದ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ತನ್ನ ಬಜೆಟನಲ್ಲಿ ರೂ. 929 ಕೋಟಿ ದಲಿತರ ಅಭಿವೃದ್ದಿಗೆ ಮೀಸಲಿಟ್ಟ ಹಣವನ್ನು ಸಹಕಾರ ಇಲಾಖೆಗೆ ವರ್ಗಾಯಿಸಿ ರೈತರ ಸಾಲ ಮನ್ನಾ ಮಾಡಿರುವುದಾಗಿ ಘೋಷಿಸಿದ್ದಾರೆ. ಇದು ದಲಿತರಿಗೆ ಮಾಡಿದ ಮಹಾ ವಂಚನೆ. ಈ 'ಅಹಿಂದ' ಸರಕಾರ ರಾಜ್ಯದ ದಲಿತ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಕೊಡುವುದಾಗಿ ಪಟ್ಟ ಮಾಡಿ ಹಣ ನೀಡದೆ ಮೌನವಾಗಿದ್ದು ಹಣ ಬಿಡುಗಡೆ ಮಾಡದೆ, ದಲಿತ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತದೆ.

ಪ.ಜಾತಿ/ಪ.ಪಂಗಡದ ವಿಶೇಷ ಘಟಕ ಯೋಜನೆ (ಎಸ್.ಸಿ.ಎಸ್.ಪಿ./ಟಿ.ಎಸ್.ಪಿ) ಕಾಯಿದೆ ತಂದು ಅವರೇ ಉಲ್ಲಂಘಿಸಿದ್ದಾರೆ. 2015–16ರಲ್ಲಿ ರೂ. 751 ಕೋಟಿ ಬಾಕಿ ಉಳಿದಿದೆ ಎಂದು ತಿಳಿಸಿ, ಅನೇಕ ಇಲಾಖೆ ಅಧಿಕಾರಿಗಳು ಜಾರಿ ಮಾಡಿಲ್ಲ ಎಂದು ತಿಳಿಸಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಅಸಮರ್ಥರಾಗಿದ್ದಾರೆ. ದಲಿತರಿಗೆ 5ಎಕರೆ ಭೂಮಿ ನೀಡಲು, ದಲಿತರಿಗೆ ಹಿತ್ತಲು ಸಹಿತ ಮನೆ ನೀಡಲು ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಹಣದಲ್ಲಿ ಶೇ. 30ರಷ್ಟು ಹಣ ಒದಗಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿ (ಡಿ.ಹೆಚ್.ಎಸ್) ಮನವಿ ಮಾಡಿದೆ. ಆದರೆ ಈ ಹಣ ನೀಡಲಿಲ್ಲ. ಈ ದಲಿತ ವಿರೋಧಿ ನೀತಿಯನ್ನು ಖಂಡಿಸಿ ರಾಜ್ಯಾದ್ಯಾಂತ ಹೋರಾಟ ನಡೆಸುತ್ತದೆ ಎಂದು ಡಿ.ಹೆಚ್.ಎಸ್. ರಾಜ್ಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಮೂಗಿಗೆ ತುಪ್ಪ ಸವರಿದ ರಾಜ್ಯ ಬಜೆಟ್: ಎಸ್.ಎಫ್.ಐ. ಆರೋಪ

ಕರ್ನಾಟಕ ರಾಜ್ಯ ಸರಕಾರ 2018 ನೇ ಸಾಲಿನ ಬಜೆಟ್ ಮಂಡಿಸಿದ್ದು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನವನ್ನು ನೀಡದೆ ನಿರ್ಲಕ್ಷ ವಹಿಸಿದೆ. ಕೊಠಾರಿ ಆಯೋಗದ ಪ್ರಕಾರ 30% ಹಣವನ್ನು ಶಿಕ್ಷಣಕ್ಕಾಗಿ ರಾಜ್ಯ ಬಜೆಟ್ ನಲ್ಲಿ ಮೀಸಲಿಡಬೇಕು ಎಂದು ಎಸ್.ಎಫ್.ಐ. ಸೇರಿದಂತೆ ಪೋಷಕರ ಸಂಘಟನೆಗಳು, ಶಿಕ್ಷಣ ತಜ್ಞರು ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ರಾಜ್ಯ ಸರಕಾರ ಕಳೆದ ಬಾರಿ 11% ನೀಡಿತ್ತು. ಈ ಬಾರಿ 11.78% ಹಣವನ್ನು ಮೀಸಲಿಟ್ಟಿದೆ. ಕೇವಲ 0.78% ರಷ್ಟು ಮಾತ್ರ ಹೆಚ್ಚಿಸಲಾಗಿದೆ. ಕಳೆದ ಐದು ವರ್ಷದಿಂದ ಶಿಕ್ಷಕರ ನೇಮಕಾತಿಯನ್ನು ಸರಿಯಾಗಿ ನಿರ್ವಹಿಸದೆ ಪ್ರಾಥಮಿಕ ಶಿಕ್ಷಣವನ್ನು ನಿರ್ಲಕ್ಷಿಸಲಾಗಿದೆ. ಈ ಬಾರಿಯೂ ಶಿಕ್ಷಕರ ನೇಮಕಾತಿಯ ಬಗ್ಗೆ ಬಜೆಟ್ ನಲ್ಲಿ ಮಾಹಿತಿ ನೀಡಿಲ್ಲ.

ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ್ ಬಸ್ ಪಾಸ್ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ. ಎಸ್.ಎಫ್.ಐ. ಜೂನ್ ಮತ್ತು ಜುಲೈ ತಿಂಗಳಲ್ಲಿ 'ಉಚಿತ ಶಿಕ್ಷಣ–ಉಚಿತ ಪ್ರಯಾಣ' ಎಂಬ ಬೇಡಿಕೆಯಡಿ ಹೋರಾಟ ನಡೆಸಿತ್ತು. ಆದರೆ ಉಚಿತ ಶಿಕ್ಷಣ ಪ್ರಸ್ತಾಪವನ್ನು ಬಜೆಟ್ ನಲ್ಲಿ ಕಡೆಗಣಿಸಲಾಗಿದೆ. ಎಲ್ಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪಟಾಪ್ ನೀಡಲು ರಾಜ್ಯ ಸರಕಾರಕ್ಕೆ ಹಣದ ಕೊರತೆ ಇರಲಿಲ್ಲ.

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕೇವಲ 100 ರೂ ಹೆಚ್ಚಳ ಮಾಡುವ ಮೂಲಕ ಮೆಟ್ರಿಕ್ ಪೂರ್ವ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರೂ. 1300, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ. 1500 ಹಣ ನಿಗದಿ ಪಡಿಸಿದೆ. ಈ ಹಣದಲ್ಲಿ ಗುಣಮಟ್ಟದ ಮತ್ತು ಪೌಷ್ಟಿಕ ಆಹಾರದಿಂದ ಕೂಡಿದ ಆಹಾರವನ್ನು ನೀಡಲು ಸಾಧ್ಯವಿಲ್ಲ.



ವಿದ್ಯಾರ್ಥಿನಿಯರಿಗೆ ಉನ್ನತ ಶಿಕ್ಷಣದ ವರೆಗೆ ಉಚಿತ ಶಿಕ್ಷಣದ ಕುರಿತ ಪ್ರಸ್ತಾವವನ್ನು ಹೆಣ್ಣು ಮಕ್ಕಳ ಶಿಕ್ಷಣವನ್ನು ಉತ್ತೇಜಿಸಿರುವುದನ್ನು ಎಸ್.ಎಫ್.ಐ. ಸ್ವಾಗತಿಸುತ್ತದೆ. ಉನ್ನತ ಶಿಕ್ಷಣವನ್ನು ಬಲಪಡಿಸಲು ಕೆಲವೆಡೆ ಸ್ನಾತಕೋತ್ತರ ಕೇಂದ್ರಗಳನ್ನು ಆರಂಭಿಸಲು ಪ್ರಸ್ತಾಪಿಸಲಾಗಿದೆ. ಆದರೆ ಕಳೆದ ಬಾರಿ ಪ್ರಸ್ತಾಪಿಸಲಾದ ಕಾಲೇಜುಗಳಿಗೆ ಮೂಲ ಸೌಲಭ್ಯ ನೀಡದೆ ಕೆಲ ವಿಷಯಗಳನ್ನು ಸ್ಥಗಿತಗೊಳಿಸಲಾಗಿತ್ತು. ಕೇವಲ ಕೆಲವೇ ಕೆಲವು ಯೋಜನೆಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳ ಮೂಗಿಗೆ ತುಪ್ಪ ಸವರುವ ಕೆಲಸವನ್ನು ರಾಜ್ಯ ಸರಕಾರ ಮಾಡಿದೆ.

ಶಿಕ್ಷಣಕ್ಕಾಗಿ ಹೆಚ್ಚಿನ ಹಣ ಮೀಸಲಿಡಲು ಹಾಗೂ ಉಚಿತ ಶಿಕ್ಷಣ ಮತ್ತು ಉಚಿತ ಲ್ಯಾಪ್‌ಟಾಪ್ ನೀಡಲು ಎಸ್.ಎಫ್.ಐ. ಆಗ್ರಹಿಸುತ್ತಿದೆ. ಚುನಾವಣೆಯನ್ನು ದೃಷ್ಟಿಕರಿಸಿ ಬಜೆಟ್ ಮಂಡಿಸಿರುವ ರಾಜ್ಯ ಸರಕಾರ ಮುಂದಿನ ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಓಲೈಕೆ ಬಜೆಟ್ ನ್ನು ಮಂಡಿಸಿದೆ ಎಂದು ಎಸ್.ಎಫ್.ಐ. ರಾಜ್ಯಾಧ್ಯಕ್ಷ ವಿ.ಅಂಬರೀಶ್, ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಆರೋಪಿಸಿದ್ದಾರೆ.

ಪಿಣರಾಯಿ ವಿಜಯನ್ ಮಂಗಳೂರು ಭೇಟಿ ಸಂಘ ಪರಿವಾರದ ಸವಾಲು–ಪ್ರತಿಸವಾಲಿಗೆ ಒಂದು ವರ್ಷ

ಕೃಷ್ಣಪ್ಪ ಕೊಂಚಾಡಿ



ಕಳೆದ ವರ್ಷ (2017) ಫೆಬ್ರವರಿ 26ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಪಿಐ(ಎಂ) ಆಯೋಜಿಸಿದ್ದ ಕರಾವಳಿ ಸೌಹಾರ್ದತಾ ರ್‍ಯಾಲಿಯು ಸಂಘ ಪರಿವಾರ ಮತ್ತು ಸಿಪಿಐ(ಎಂ) ನೇತೃತ್ವದ ಜಾತ್ಯಾತೀತ ಮನಸ್ಸುಗಳೊಂದಿಗೆ ನಡೆದ ನೇರ ಮುಖಾಮುಖಿಗೆ ಒಂದು ವರ್ಷ ಸಲ್ಲುತ್ತಿದೆ. ಈ ರ್‍ಯಾಲಿಗೆ ಪೂರ್ವಭಾವಿಯಾಗಿ ಕರಾವಳಿ ಜಿಲ್ಲೆಗಳಲ್ಲಿ ನಡೆದಂತಹ ವಿವಿಧ ಸ್ವರೂಪದ ಕ್ರಿಯೆ ಪ್ರತಿಕ್ರಿಯೆಗಳ ವಿಶ್ಲೇಷಣೆಯು, ಕೋಮುವಾದಿ ಮತಾಂಧ ಫ್ಯಾಸಿಸ್ಟ್ ಶಕ್ತಿಗಳನ್ನು ಎದುರಿಸುವ ಸ್ವರೂಪ–ವಿಧಾನಗಳ ಬಗೆಗೆ ಬೆಳಕು ಚೆಲ್ಲುತ್ತದೆ. ಈ ಶಕ್ತಿಗಳನ್ನು ಮೃದು ಹಿಂದುತ್ವದ ಮೂಲಕ ಮಣಿಸಬಹುದೆಂಬ ಒಂದು ಚಿಂತನೆ ಪ್ರಬಲವಾಗಿರುವಂತೆಯೇ, ಅಲ್ಪಸಂಖ್ಯಾತ ಸಮುದಾಯದ ಮಧ್ಯೆ ತೀವ್ರವಾದಿ ಕ್ರಿಯೆಗೆ ಪ್ರತಿಕ್ರಿಯೆ ಎಂಬ ಯೋಜನೆ ಕಾರ್ಯರೂಪದಲ್ಲಿ ಚಾಲ್ತಿಯಲ್ಲಿದೆ. ಇವೆರಡವುಗಳ ಮಧ್ಯೆ ಎಡ ಸಂಘಟನೆಗಳು ಮತಾಂಧ ಶಕ್ತಿಗಳನ್ನು ಪ್ರಜ್ಞಾಪೂರ್ವಕ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಜಾಲಗಳನ್ನು ಒಗ್ಗೂಡಿಸಿ ಪ್ರತಿರೋಧವನ್ನು ಹೆಣೆಯುವ ಮುಖಾಂತರ ಕೋಮುವಾದಿಗಳ ಅಟ್ಟಹಾಸವನ್ನು ಮುರಿಯಲು ಸಾಧ್ಯವಿದೆ ಎಂದು ಪ್ರಬಲವಾಗಿ ವಾದಿಸುತ್ತಿದೆ. ಇಂತಹ ಧೋರಣೆಯನ್ನು ಕಾರ್ಯಾಚರಣೆ– ವಿಶ್ಲೇಷಣೆಗೆ ಒಳಪಡಿಸಿದ ಘಟನೆ ಪಿಣರಾಯಿ ವಿಜಯನ್‌ರವರ ಮಂಗಳೂರು ಭೇಟಿ ಕಾರ್ಯಕ್ರಮವಾಗಿದೆ. ಇಂತಹ ಈ ಘಟನೆಯನ್ನು ರಾಜಕೀಯ ಅರ್ಥಶಾಸ್ತ್ರದ ನೆಲೆಗಟ್ಟಿನಲ್ಲಿ ಹಲವು ಆಯಾಮಗಳಿಂದ ವಿಶ್ಲೇಷಿಸಬಹುದು.

ಸಂಘಪರಿವಾರವು ಹೊಂದಿರುವ ತನ್ನ ಸಂಘಟನಾ ಜಾಲಗಳ ಮೂಲಕ ಸತ್ಯ, ನ್ಯಾಯ, ಸಂವಿಧಾನ, ಪ್ರಜಾಪ್ರಭುತ್ವಗಳೆಲ್ಲವನ್ನೂ ಗಾಳಿಗೆ ತೂರಿ ತನ್ನ ಮೂಗಿನ ನೇರಕ್ಕೆ ಅನುಗುಣವಾಗಿ ಚಟುವಟಿಕೆ ನಡೆಸುತ್ತದೆ. ತನಗೆ ಬೇಕಾದಾಗ ಸರಕಾರಿ ವ್ಯವಸ್ಥೆಯನ್ನು ಹೆದರಿಸಿ, ಬೆದರಿಸಿ ತನ್ನ ಕಾರ್ಯವನ್ನು ಸಾಧಿಸುತ್ತದೆ. ಕರಾವಳಿ ಕರ್ನಾಟಕವನ್ನು ಸಂಘಪರಿವಾರದ ಹೊಸಹೊಸ ಪ್ರಯೋಗಗಳ ತಾಣವನ್ನಾಗಿ ಮಾಡಿದೆ. ಸಾಮಾನ್ಯವಾಗಿ ಸಂಘಪರಿವಾರ ಹೇಳಿದ್ದೇ ವೇದ ವಾಕ್ಯ ಎಂಬ ರೀತಿ ವರ್ತಿಸುತ್ತಿದೆ. ಆನೆ ನಡೆದದ್ದೇ ದಾರಿ ಎಂಬ ರೀತಿಯಲ್ಲಿ ಜಿಲ್ಲೆಯಲ್ಲಿ ಸಂಘಪರಿವಾರವು ವಿವಿಧ ಘಟನೆಗಳನ್ನು, ಸಂದರ್ಭಗಳನ್ನು ಮತ್ತು ಬೆಳವಣಿಗೆಗಳನ್ನು ನಿರ್ವಹಿಸುತ್ತಾ ಬಂದಿದೆ. ಇಂತಹ ಸಂಘಪರಿವಾರದ ಜಾಯಾಮಾನಕ್ಕೆ ಪ್ರಬಲ ಪ್ರತ್ಯುತ್ತರ ನೀಡಿದ ಚಾರಿತ್ರಿಕ ಘಟನೆ ಪಿಣರಾಯಿ ವಿಜಯನ್‌ರವರು ಮಂಗಳೂರಿನಲ್ಲಿ ಕಳೆದ ವರ್ಷ ನಡೆಸಿದ ಯಶಸ್ವಿ ಕಾರ್ಯಕ್ರಮವಾಗಿದೆ. ಇದು ಜಾತ್ಯತೀತ ಶಕ್ತಿಗಳಲ್ಲಿ ಮೂಡಿಸಿದ ಆತ್ಮವಿಶ್ವಾಸ "ಸೌಹಾರ್ದತೆಗಾಗಿ ಕರ್ನಾಟಕ" ವೇದಿಕೆ ರಚನೆ ಮತ್ತು ಜನವರಿ 30, 2018ರಂದು 2 ಲಕ್ಷ ಜನ 160ಕ್ಕೂ ಹೆಚ್ಚು ಸ್ಥಳಗಳಲ್ಲಿ ಭಾಗವಹಿಸಿದ "ಮಾನವ ಸರಪಣಿ"ಯ ಇನ್ನೊಂದು ಯಶಸ್ವಿ ಚಾರಿತ್ರಿಕ ಕಾರ್ಯಕ್ರಮವನ್ನು ಸಾಧ್ಯ ಮಾಡಿತು.

ಪಿಣರಾಯಿ ವಿರುದ್ಧ ಸಂಘಿ ಅಪಪ್ರಚಾರ

ಮಂಗಳೂರಿನಿಂದ ಪ್ರಕಟವಾಗುತ್ತಿರುವ ವಾರ್ತಾಭಾರತಿ ದಿನಪತ್ರಿಕೆಯ ಮಾಧ್ಯಮ ಕೇಂದ್ರದ ಕಾಮಗಾರಿಯ ಉದ್ಘಾಟನಾ ಸಮಾರಂಭ ಮತ್ತು ಸಿಪಿಐ(ಎಂ) ಪಕ್ಷದ ಕರಾವಳಿ ಸೌಹಾರ್ದ ರ್‍ಯಾಲಿಯಲ್ಲಿ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ರವರು ಭಾಗವಹಿಸುತ್ತಾರೆ ಎಂಬ ವಿಷಯವನ್ನು ತಿಳಿದುಕೊಂಡ ಸಂಘಪರಿವಾರವು ಸರ್ವಾಧಿಕಾರಿ ಧೋರಣೆಯನ್ನು ಪ್ರದರ್ಶಿಸುವ ಕಾರ್ಯಕ್ರಮವಾಗಿ "ಪಿಣರಾಯಿ ವಿಜಯನ್‌ರವರನ್ನು ಕರ್ನಾಟಕದ ಮಣ್ಣಿಗೆ ಕಾಲೂರಲು ಬಿಡುವುದಿಲ್ಲ" ಎಂದು ಘೋಷಿಸಿ ನೇರ ಸಂಘರ್ಷಕ್ಕೆ ಇಳಿಯಿತು. ಸಂಘಪರಿವಾರವು ಈ ಕಾರ್ಯಕ್ರಮದ ಒಂದು ತಿಂಗಳ ಮೊದಲು, ವಿಜಯನ್‌ರವರು ಮಂಗಳೂರು ರೈಲ್ವೆ ಜಂಕ್ಷನ್ ನಿಲ್ದಾಣದ ಮುಖಾಂತರ ಹಾದು ಹೋಗುವ ಸಂದರ್ಭದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ವ್ಯಾಪಕ ಪ್ರಚಾರ ಗಿಟ್ಟಿಸಿಕೊಂಡರು. ಈ ಸಂದರ್ಭದಲ್ಲಿ ಪೊಲೀಸರು ಮೂಕ ಪ್ರೇಕ್ಷಕರಾಗಿ, ಸಂವಿಧಾನಿಕ ಕರ್ತವ್ಯ ನಿರ್ವಹಿಸಲಿಲ್ಲ. ಈ ಬೆಳವಣಿಗೆಯಿಂದ ಸಂಘಪರಿವಾರವು ಸಾಕಷ್ಟು ಉತ್ತೇಜನ ಪಡೆದಿದ್ದರು. ಇದೇ ಅವಧಿಯಲ್ಲಿ ದೇಶದಾದ್ಯಂತ ಬಿಜೆಪಿಯು, ಕೇರಳದಲ್ಲಿ ಸಿಪಿಐ(ಎಂ) ಪಕ್ಷವು ಆರ್‌ಎಸ್‌ಎಸ್ ಕಾರ್ಯಕರ್ತರ ರಾಜಕೀಯ ಹತ್ಯೆ ನಡೆಸುತ್ತಿದೆ ಎಂಬ ಪ್ರಚಾರಾಂದೋಲನವನ್ನು ನಡೆಸುತ್ತಿತ್ತು. ದೇಶದ ವಿವಿಧೆಡೆಗಳಲ್ಲಿ ಮತ್ತು ನವದೆಹಲಿಯಲ್ಲಿರುವ ಪಕ್ಷದ ಕೇಂದ್ರ ಸಮಿತಿಯ ಕಛೇರಿಯ ಎದುರು ಬಿಜೆಪಿ ಮತ್ತು ಸಂಘಪರಿವಾರ ದಾಂಧಲೆಯನ್ನು ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರುಗಳು ಪ್ರತಿರೋಧದ ಪ್ರತಿಭಟನೆ ಹಮ್ಮಿಕೊಂಡಾಗ ಅನಿವಾರ್ಯವಾಗಿ ತಮ್ಮ ಕಾರ್ಯಕ್ರಮವನ್ನು ಹಿಂದಕ್ಕೆ ಪಡೆದುಕೊಂಡಿದ್ದರು.

ಮಧ್ಯಪ್ರದೇಶದಲ್ಲಿರುವ ಬಿಜೆಪಿ ಸರಕಾರವು ಅಲ್ಲಿ ಪೂರ್ವ ನಿಗಧಿತವಾಗಿದ್ದ ಪಿಣರಾಯಿ ವಿಜಯನ್‌ರವರ ಕಾರ್ಯಕ್ರಮಕ್ಕೆ ಬಿಜೆಪಿಯ ಕಾರ್ಯಕರ್ತರು ಬೆದರಿಕೆ ಮತ್ತು ಅಡ್ಡಿಪಡಿಸುವುದಾಗಿ ಘೋಷಿಸಿದರು. ಆ ಸಮಯದಲ್ಲಿ ಸಂವಿಧಾನದ ಪ್ರಕಾರ ಮುಖ್ಯಮಂತ್ರಿಯವರ ಕಾರ್ಯಕ್ರಮಕ್ಕೆ ರಕ್ಷಣೆ ಕೊಡಬೇಕಾಗಿದ್ದ ರಾಜ್ಯ ಸರಕಾರವು ಸಂವಿಧಾನ ವಿರೋಧಿಯಾಗಿ ವರ್ತಿಸಿದೆ. ಪೊಲೀಸ್ ರಕ್ಷಣೆ ನೀಡುವ ಬದಲು ಕಾರ್ಯಕ್ರಮವನ್ನು ರದ್ದು ಮಾಡಲು ಒತ್ತಡ ಹೇರಿತು. ಇದರಿಂದಾಗಿ ಅನಿವಾರ್ಯವಾಗಿ ಆ ಕಾರ್ಯಕ್ರಮ ರದ್ದಾಯಿತು. ಇದೇ ಸಂದರ್ಭದಲ್ಲಿ ಓರ್ವ ಬಿಜೆಪಿ ನಾಯಕ ಪಿಣರಾಯಿ ವಿಜಯನ್‌ರವರ ತಲೆಕಡಿದು ಒಪ್ಪಿಸಿದವರಿಗೆ ಒಂದು ಕೋಟಿ ರೂಪಾಯಿ ಬಹುಮಾನ ನೀಡುವುದಾಗಿ ಘೋಷಿಸಿದನು. ಈ ಎಲ್ಲಾ ಬೆಳವಣಿಗೆಗಳ ಬಗ್ಗೆ ಪ್ರಧಾನ ಮಂತ್ರಿಯಾಗಲೀ ಅಥವಾ ಬಿಜೆಪಿಯ ಇತರೆ ಪ್ರಮುಖ ನಾಯಕರುಗಳು ಪ್ರತಿಕ್ರಿಯೆ ನೀಡಲಿಲ್ಲ. ಬದಲಾಗಿ ಮೌನವಾಗಿ ತನ್ನ ಕಾರ್ಯಕರ್ತರಿಗೆ ಬೆಂಬಲ ನೀಡಿದರು. ಒಟ್ಟಾರೆಯಾಗಿ ಸಂಘಪರಿವಾರವು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ರವರನ್ನು ಖಳನಾಯಕನಾಗಿ ಬಿಂಬಿಸುವ ಯೋಜನಾಬದ್ಧ ಕಾರ್ಯಕ್ರಮವನ್ನು ದೇಶದಾದ್ಯಂತ ಹಮ್ಮಿಕೊಂಡಿದ್ದರು.

'ಪಿಣರಾಯಿ ಮಂಗಳೂರಿಗೆ ಕಾಲಿಡಲು ಬಿಡೆವು'

ಇಂತಹ ಹಲವಾರು ಸರಣಿ ಕಾರ್ಯಕ್ರಮದಿಂದ ಸ್ಫೂರ್ತಿಪಡೆದಿದ್ದ ಸಂಘಪರಿವಾರವು ಪಿಣರಾಯಿ ವಿಜಯನ್‌ರವರ ಮಂಗಳೂರು ಕಾರ್ಯಕ್ರಮದ ವಿರುದ್ಧ ವ್ಯಾಪಕವಾದಂತಹ ಪ್ರಚಾರಾಂದೋಲನವನ್ನು ನಡೆಸಿತು. ಪ್ರಮುಖವಾಗಿ ಸಾಮಾಜಿಕ ಜಾಲತಾಣ, ಪತ್ರಿಕಾಗೋಷ್ಠಿ, ಬಹುವರ್ಣದ ಕರಪತ್ರ, ಭಿತ್ತಿಪತ್ರ, ಕಟೌಟ್, ಬ್ಯಾನರ್‌ಗಳ ಮುಖಾಂತರ 'ಗೋಬ್ಯಾಕ್ ಪಿಣರಾಯಿ ವಿಜಯನ್' ಎಂಬ ಆಂದೋಲನ ಪ್ರಾರಂಭಿಸಿತು. ಇದಕ್ಕೆ ಪ್ರತಿರೋಧವಾಗಿ ಸಿಪಿಐ(ಎಂ) ಮತ್ತು ಅದರ ವಿವಿಧ ಸಾಮೂಹಿಕ ಸಂಘಟನೆಗಳು ಸಂಘಪರಿವಾರದ ಸರ್ವಾಧಿಕಾರಿ, ಪ್ರಜಾಪ್ರಭುತ್ವ ವಿರೋಧಿ ಧೋರಣೆಯ ವಿರುದ್ಧ ವ್ಯಾಪಕ ಆಂದೋಲನವನ್ನು ಹಮ್ಮಿಕೊಂಡಿತ್ತು. ಪಿಣರಾಯಿ ವಿಜಯನ್‌ರವರ ಕಾರ್ಯಕ್ರಮವನ್ನು ಯಾವುದೇ ಕಾರಣಕ್ಕೂ ರದ್ದು ಮಾಡದೇ ನಡೆಸಿಯೇ ನಡೆಸುತ್ತೇವೆ ಎಂದು ಘೋಷಿಸಿತ್ತು. ಆಗ ಸಂಘಪರಿವಾರವು ತನ್ನ ಪ್ರತಿರೋಧ ಆಂದೋಲನದ ಮುಂದುವರಿಕೆಯ ಭಾಗವಾಗಿ ಪಿಣರಾಯಿ ವಿಜಯನ್‌ರವರ ಕಾರ್ಯಕ್ರಮದ ಬಗ್ಗೆ ತಿಳಿಸುವ ಬ್ಯಾನರ್, ಕಟೌಟ್‌ಗಳನ್ನು ಹಾಗೂ ಪೋಸ್ಟರ್‌ಗಳನ್ನು ನಾಶಪಡಿಸಿತ್ತು. ಅವರ ಭಾವಚಿತ್ರಕ್ಕೆ ಮಸಿ ಬಳಿಯುವ ಹೀನ ಕೃತ್ಯಕ್ಕೆ ನಡೆಸಿತು. ಆದರೂ ಸಹ ವಿಜಯನ್‌ರವರ ಕಾರ್ಯಕ್ರಮ ಯಥಾಪ್ರಕಾರ ನಡೆಸಲು ವ್ಯಾಪಕ ಪ್ರಯತ್ನಗಳು ನಡೆಯುತ್ತಿತ್ತು. ಈ ಸಂದರ್ಭದಲ್ಲಿ ರಾತ್ರೋರಾತ್ರಿ ಉಳ್ಳಾಲದಲ್ಲಿದ್ದ ಸಿಪಿಐ(ಎಂ) ಪಕ್ಷದ ಕಛೇರಿಗೆ ಬೆಂಕಿಯನ್ನು ಹಚ್ಚುವ ಮುಖಾಂತರ ಭಯದ ವಾತಾವರಣವನ್ನು ಸೃಷ್ಟಿಸಿತ್ತು.

ಈ ರೀತಿಯ ಬ್ಯಾನರ್ ನಾಶ, ಪೋಸ್ಟರ್ ನಾಶ, ಕಛೇರಿ ನಾಶ – ಬೆಂಕಿ ಹಚ್ಚುವ ಕಾರ್ಯಕ್ರಮಗಳಿಂದ ವಿಚಲಿತರಾಗದ ಸಿಪಿಐ(ಎಂ) ಮತ್ತು ಅದರ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರುಗಳು ಮತ್ತೊಮ್ಮೆ ನಾಶಪಡಿಸಿದ ಅದೇ ಸ್ಥಳದಲ್ಲಿ ಬ್ಯಾನರ್, ಪೋಸ್ಟರ್‌ಗಳನ್ನು ಹಾಕಿ ಅವುಗಳ ಸಂರಕ್ಷಣೆಗಾಗಿ ರಾತ್ರಿಯಿಡೀ ಕಾದು ಕುಳಿತರು. ಕೆಲವೆಡೆಗಳಲ್ಲಿ ಧ್ವಂಸಕ್ಕಾಗಿ ಬಂದ ಸಂಘಪರಿವಾರದ ಕಾರ್ಯಕರ್ತರುಗಳಿಗೆ ಧರ್ಮದೇಟೂ ಲಭಿಸಿತ್ತು. ಈ ರೀತಿ ಸವಾಲಿಗೆ ಪ್ರತಿ ಸವಾಲುಗಳು ನಡೆಯುತ್ತಿರುವಾಗ ಕಾರ್ಯಕ್ರಮ ನಡೆದೇ ನಡೆಯುತ್ತದೆ ಎಂಬ ದೃಢವಾದ ಘೋಷಣೆ ಕೇಳಿ ಬಂತು. ಸಾರ್ವಜನಿಕರು ಹಾಗೂ ಜಾತ್ಯಾತೀತ ಶಕ್ತಿಗಳು ಪಿಣರಾಯಿ ವಿಜಯನ್‌ರವರ ಆಗಮನವನ್ನು ವಿರೋಧಿಸುವ ಸಂಘಪರಿವಾರವನ್ನು ಖಂಡತುಂಡವಾಗಿ ಟೀಕಿಸಿದರು. ವಿವಿಧೆಡೆಗಳಿಂದ ಮತ್ತು ಜಾತ್ಯಾತೀತ ರಾಜಕೀಯದಲ್ಲಿ ನಂಬಿಕೆಯಿರುವ ಪಕ್ಷಗಳಿಂದ, ಸಂಘಟನೆಗಳಿಂದ ಬೆಂಬಲದ ಮಹಾಪೂರ ಹರಿದು ಬಂತು. ರಾಜ್ಯ ಸರಕಾರ ಹಾಗೂ ಪೊಲೀಸ್ ಇಲಾಖೆ ಈ ಕಾರ್ಯಕ್ರಮಕ್ಕೆ ಸಂಪೂರ್ಣ ರಕ್ಷಣೆ ನೀಡುವುದಾಗಿಯೂ ಸಮಾಜಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಉಗ್ರವಾಗಿ ದಂಡಿಸುವುದಾಗಿಯೂ ಘೋಷಿಸಿದರು.

ಸಂಘಿ ತಂತ್ರ ವಿಫಲ

ಸಾಮಾನ್ಯವಾಗಿ ಮಂಗಳೂರು ಮತ್ತು ಸುತ್ತ ಮುತ್ತ ಸಂಘಪರಿವಾರದ ವಿರುದ್ಧ ಯಾವುದೇ ಪ್ರತಿಭಟನೆಗಳನ್ನು, ಧರಣಿಗಳನ್ನು ಇತರ ಪಕ್ಷಗಳು ಮತ್ತು ಸಂಘಟನೆಗಳು ಘೋಷಿಸಿದಾಗ ಅದೇ ಸಮಯಕ್ಕೆ ಅದೇ ಸ್ಥಳದಲ್ಲಿ ತಮಗೂ ಇನ್ನೊಂದು ಕಾರ್ಯಕ್ರಮಕ್ಕೆ ಅವಕಾಶ ನೀಡಬೇಕೆಂದು ಪೊಲೀಸ್ ಪರವಾನಿಗೆಗೆ ಅರ್ಜಿ ಸಲ್ಲಿಸಿ ಎರಡೂ ಕಾರ್ಯಕ್ರಮಗಳನ್ನು ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಹಿನ್ನೆಲೆ ಕಾರಣ ನೀಡಿ ಪೊಲೀಸರೇ ರದ್ದು ಮಾಡುವಂತಹ ತಂತ್ರವನ್ನು ಕಳೆದ ಎರಡು ದಶಕಗಳಿಂದ ಅನುಸರಿಸುತ್ತಿದ್ದರು. ಇದೇ ತಂತ್ರವನ್ನು ಪಿಣರಾಯಿ ವಿಜಯನ್‌ರವರ ಕಾರ್ಯಕ್ರಮ ರದ್ದು ಮಾಡುವ ಉದ್ದೇಶದಿಂದ ರೂಪಿಸಿತು. ಆದರೆ ಈ ಬಾರಿ ಜಿಲ್ಲೆಯ ಆಡಳಿತ ಇದಕ್ಕೆ ಸೊಪ್ಪು ಹಾಕುವ ಬದಲು ರಕ್ಷಣೆಯನ್ನು ನೀಡುವ ಘೋಷಣೆ ಮಾಡಿದಾಗ ಅದಕ್ಕೆ ಪ್ರತಿತಂತ್ರವಾಗಿ ಭಯದ ವಾತಾವರಣ ಮತ್ತು ಬಂದ್‌ಗೆ ಕರೆ ಕೊಡುವ ಕುಟಿಲ ರಾಜಕೀಯ ತಂತ್ರವನ್ನು ಅನುಸರಿಸಿತು.

ಪಿಣರಾಯಿ ಕಾರ್ಯಕ್ರಮ ನಿಗದಿಯಾಗಿದ್ದ ಎರಡು ದಿನಗಳ ಮೊದಲು ಬಿಜೆಪಿ ಮತ್ತು ಸಂಘಪರಿವಾರವು ಮಂಗಳೂರಿನಲ್ಲಿ ಪಿಣರಾಯಿ ವಿಜಯನ್ ಕಾರ್ಯಕ್ರಮವನ್ನು ವಿರೋಧಿಸಿ ಪ್ರತಿಭಟನಾ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನು ಆಯೋಜಿಸಿತ್ತು. ವಾಸ್ತವಿಕವಾಗಿ ಈ ಕಾರ್ಯಕ್ರಮ ಪ್ರತಿಭಟನಾ ರ್‍ಯಾಲಿಯ ಹೆಸರಲ್ಲಿ ಮಂಗಳೂರಲ್ಲಿ ಪೊಲೀಸರ ಸರ್ಪಗಾವಲಿನಲ್ಲಿ ಹಿಂಸೆ, ಬೀದಿ ಕಾಳಗ ನಡೆಸುವ ಉದ್ದೇಶ ಹೊಂದಿತ್ತು. ಇದೇ ಪ್ರಕಾರ ಈ ರ್‍ಯಾಲಿಯಲ್ಲಿ ಪೊಲೀಸರ ಸಮ್ಮುಖದಲ್ಲೇ ಬಸ್ಸಿಗೆ ಕಲ್ಲು ತೂರಾಟ, ಪಿಣರಾಯಿ ವಿಜಯನ್ ಪ್ರಚಾರದ ಕಟೌಟ್, ಬ್ಯಾನರ್‌ಗಳನ್ನು ನೂರಾರು ಸಂಖ್ಯೆಯಲ್ಲಿ ನಾಶಗೊಳಿಸಿದರು. ಈ ಪ್ರತಿಭಟನಾ ರ್‍ಯಾಲಿಯ ಮುಖಾಂತರ ಭಯದ ವಾತಾವರಣವನ್ನು ಸೃಷ್ಟಿಸಲು ಬಿಜೆಪಿ ಮತ್ತು ಸಂಘಪರಿವಾರಕ್ಕೆ ಸಾಧ್ಯವಾಯಿತು. ಆದರೆ ಸಿಪಿಐ(ಎಂ) ಹಾಗೂ ಅದರ ಸಾಮೂಹಿಕ ಸಂಘಟನೆಗಳು ಈ ಘಟನೆಗಳನ್ನೂ ಸವಾಲಾಗಿ ಸ್ವೀಕರಿಸಿತ್ತು. ಅದರ ಪರಿಣಾಮವಾಗಿ ಸಮಯಾವಕಾಶದ ಅಭಾವವಿದ್ದರೂ ಮತ್ತೆ ಹೊಸ ಬ್ಯಾನರ್ ಕಟೌಟ್‌ಗಳನ್ನು ಮುದ್ರಿಸಿ ಈ

ಪುಟ 11 ಕ್ಕೆ

ದೇಶದ ಸಹಕಾರಿ ರಂಗದ ರತ್ನ ಕೇರಳ

(ಕಳೆದ ಸಂಚಿಕೆ 8ರಲ್ಲಿ ಈ ಲೇಖನದ ಭಾಗ-1 ಪ್ರಕಟವಾಗಿತ್ತು.. ಈಗ ಭಾಗ-2 ಮತ್ತು ಕೊನೆಯ ಭಾಗ ಓದಿ)

ಯಮುನಾ ಗಾಂವ್ಕರ್

ನೋಟು ರದ್ದತಿ ಮತ್ತು ನವ ಉದಾರೀಕರಣ ನೀತಿಯ ಪ್ರಭಾವ

ಸಹಕಾರಿ ಬ್ಯಾಂಕುಗಳಲ್ಲಿ ಸೇವಾ ತೆರಿಗೆಯನ್ನು ವಿಸ್ತರಿಸಲು ಮತ್ತು ಬ್ಯಾಂಕ್ ಎಂಬ ಪದವನ್ನು ಸಹಕಾರಿ ಸಂಘಗಳಿಗೆ ಬಳಸಲು ನಿಷೇಧವಿರುವುದು ಈ ಕ್ಷೇತ್ರವನ್ನು ಇನ್ನಷ್ಟು ತೊಂದರೆಗೀಡು ಮಾಡಿದೆ. ನವ ಉದಾರೀಕರಣ ಆರ್ಥಿಕ ನೀತಿಯ ಸಂದರ್ಭದಲ್ಲಿ ಕೇಂದ್ರ ಸರಕಾರ ಈ ರೀತಿಯ ಅನೇಕ ಸಂರಚನೆಗಳನ್ನು ಮೀರಿ ಬರುವುದು ತುಂಬ ಕಷ್ಟದ ಕೆಲಸ.

ಇತ್ತೀಚೆಗೆ ನೋಟು ರದ್ದತಿಯಾದಾಗ ದೇಶದಾದ್ಯಂತ ಇರುವ ಸಹಕಾರಿ ರಂಗಗಳು ಭಾರೀ ಹೊಡೆತ ಅನುಭವಿಸಿದವು. ನೋಟು ಅಮಾನ್ಯದಿಂದಾಗಿ ಸಹಕಾರಿ ಕ್ಷೇತ್ರವನ್ನೇ ಭೀಕರವಾಗಿ ದುರ್ಬಲಗೊಳಿಸಲು ಕೇಂದ್ರ ಸರಕಾರ ಮುಂದಾಯಿತು. ನೋಟು ರದ್ದತಿಯ ಪ್ರಶ್ನೆ ಎದುರಾದಾಗ ಇಡೀ ಕೇರಳ ಪಕ್ಷಾತೀತವಾಗಿ ಎದ್ದು ನಿಂತಿತು. ಕೇಂದ್ರ ಸರ್ಕಾರದ ಕ್ರಮಕ್ಕೆ ಎದುರಾಗಿ 750 ಕಿ.ಮಿ ಬೃಹತ್ ಮಾನವ ಗೋಡೆ ನಿರ್ಮಿಸಿ ತಮ್ಮ ಅಸಮ್ಮತಿ ಸೂಚಿಸಿದವು, ನೋಟು ರದ್ದತಿ ಮತ್ತು ಅದರ ಪರಿಣಾಮದ ವಿರುದ್ಧ ಧ್ವನಿ ಎತ್ತುತ್ತಾ ಸಹಕಾರಿ ರಂಗದ ರಕ್ಷಣೆಗೆ ಮುಂದಾಗಲಾಯಿತು.

ಭೂಸುಧಾರಣೆ ಮತ್ತು ಸಹಕಾರಿ ರಂಗದ ಬಲವರ್ಧನೆ

ಅದು ಸಾಧ್ಯವಾಗಿದ್ದು ಮೇಲ್ನೋಟದ ಸಂಘರ್ಷದಿಂದಲ್ಲ. ಏಕೆಂದರೆ ಕೇರಳದಲ್ಲಿ ಹಲವು ವರ್ಷಗಳ ಹಿಂದೆ ಜಾರಿಗೆ ಬಂದ ಐತಿಹಾಸಿಕ ಭೂ ಸುಧಾರಣೆ ರಾಜ್ಯದ ಆರ್ಥಿಕ ಪರಿಸ್ಥಿತಿಯ ಚಿತ್ರಣವನ್ನೇ ಬದಲಿಸಿತು. ಊಳಿಗಮಾನ್ಯ ಪಾಳೆಗಾರಿ ಉತ್ಪಾದನಾ ವಿಧಾನಕ್ಕೆ ತಡೆ ಹಾಕಿತು, ಸ್ವಾಭಿಮಾನದ ಕ್ರಮ ಕೈಗೊಳ್ಳಲಾಯಿತು. ಇದರಿಂದ ಕೆಳವರ್ಗದ ಜನತೆಯ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಅದ್ಭುತ ನೆಗೆತ ಸಾಧಿಸಲು ಸಾಧ್ಯವಾಯಿತು. ಭೂಸುಧಾರಣೆಯಿಂದ ಭೂ ಭದ್ರತೆ ದೊರಕಿತು. ಕ್ರಮೇಣ ಖಾಸಗಿ ಹಣದ ಸಾಲದ ಬಾಧೆಯಿಂದ ಬಳಲಿದ ಇವರಿಗೆ ಕೇರಳದ ಕೊ.ಆಪ್ ಬ್ಯಾಂಕ್ ಗಳು ಅಗ್ಗದ ದರದಲ್ಲಿ ಸಾಲ ವಿತರಿಸಿದವು, ಸ್ವತಂತ್ರ ಆರ್ಥಿಕ ವ್ಯವಹಾರ ಪ್ರಾರಂಭಿಸಿದ್ದರಿಂದ ಲೇವಾದೇವಿದಾರರ ಲಾಭಕ್ಕೆ ಕಡಿವಾಣ ಬಿತ್ತು. ಪ್ರಜಾಸತ್ತಾತ್ಮಕ ನಿಯಂತ್ರಣ ಬಂತು. ಇಂಥ ಕಠಿಣ ಕ್ರಮಗಳಿಂದ ಕೂಡಿಟ್ಟ ಹಣದ ಮೇಲೆ ನೋಟು ನಿರ್ಬಂಧ ನೀತಿಯಿಂದ ಹೊಡೆತ ಬಿತ್ತು. ಕೇರಳದ ಜೀವನಾಡಿಯನ್ನು ಕಳೆದ ವರ್ಷ ರಕ್ಷಿಸಿದ ಅಲ್ಲಿಯ ಜನಾಂದೋಲನ ನಿಜಕ್ಕೂ ಮೈನವಿರೇಳಿಸುವಂತಹುದು

ಇಷ್ಟೆಲ್ಲದರ ಮಧ್ಯೆ, ಗ್ರಾಮೀಣ ಪ್ರದೇಶದಲ್ಲಿ ಹಳ್ಳಿಗಳ ಅಭಿವೃದ್ಧಿಗೆ ಸಂಪನ್ಮೂಲ ಅಣಿನೆರೆಸಲು, ಯಾವುದೇ ಸಹಕಾರಿ ಸಂಸ್ಥೆಯೂ ದಿವಾಳಿಯಾಗದೆ, ಭ್ರಷ್ಟಾಚಾರ ಮಾಡದೆ, ಸ್ವಜನ ಪಕ್ಷಪಾತವಿಲ್ಲದೆ ಕೇರಳ ಸಹಕಾರಿ ಮಾದರಿಯಾಗಿದೆ ಎಂದು ಹೇಳಿದರೆ ಅತಿಶಯವೇನಿಲ್ಲ.

ಕಾಸರಗೋಡಿನಲ್ಲಿ ಸಹಕಾರಿ ರಂಗದ ಅನುಭವ

ಈ ಅಧ್ಯಯನಕ್ಕೆ ಹೋದಾಗ, ಕಾಸರಗೋಡು ದುಡಿಯುವ ವರ್ಗದ ನೇತಾರರಾಗಿರುವ ಹಿರಿಯ ಜೀವ ಪಿ. ರಾಘವನ್ ಹಾಗೂ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾ. ಟಿ.ಕೆ.ರಾಜನ್ ಅವರು ಪ್ರೀತಿಯಿಂದ ಬಹುತೇಕ ಎಲ್ಲಾ ಸಹಕಾರಿ ಸಂಸ್ಥೆಗಳನ್ನು ಪರಿಚಯಿಸಿದರು. ಇಲ್ಲಿ ಜನ ಮನ್ನಣೆ ಗಳಿಸಿರುವ ಮಹತ್ವದ ಸಹಕಾರಿ ಸಂಸ್ಥೆಗಳಲ್ಲಿ ಪ್ರಥಮ ದರ್ಜೆ ಸ್ಥಾನದಲ್ಲಿರುವ ದಿ. ಕಾಸರಗೋಡು ಸರ್ವಿಸಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಒಂದು. 1981 ರಲ್ಲಿ ಸಹಕಾರಿ ತತ್ವದ ಆಧಾರದಲ್ಲಿ ಪ್ರಾರಂಭವಾದ ಇದು ಮಾಜಿ ಶಾಸಕ ಪಿ. ರಾಘವನ್

> **ಇಂದು ಕೇರಳದಲ್ಲಿ ಸಹಕಾರಿ ರಂಗ ಇಲ್ಲದ ಉದ್ಯಮವೂ ಇಲ್ಲ, ಕ್ಷೇತ್ರವೂ ಇಲ್ಲ. ಇದು ಬದುಕಿನ ಭಾಗವಾಗಿದೆ. ಕೇರಳದ ಒಟ್ಟು ಸಹಕಾರಿ ರಂಗದ ಮೊತ್ತ ಮೂರು ವರ್ಷಗಳ ಹಿಂದೆ 1.5 ಲಕ್ಷ ಕೋಟಿ ರೂಪಾಯಿಗಳು. ಇದನ್ನು ಅತ್ಯಂತ ದಕ್ಷತೆಯಿಂದ ನಡೆಸುತ್ತಿದ್ದಾರೆ. ಭ್ರಷ್ಟಾಚಾರದ ಲೇಪವಿಲ್ಲದಂತೆ, ಸ್ವಜನ ಪಕ್ಷಪಾತವಿಲ್ಲದಂತೆ ನೋಡಿಕೊಂಡಿದ್ದಾರೆ. ಇಷ್ಟೆಲ್ಲ ಶ್ರಮದ ಹಿಂದೆ ಸಹಕಾರಿ ರಂಗದ ಧೀಮಂತ ನಾಯಕರ ಬದ್ಧತೆಯೂ ಇದೆ.**

ಅವರ ಅಧ್ಯಕ್ಷತೆಯಲ್ಲಿ, ಅಂದಿನ ಸಂಸದ ಎನ್. ರಾಮಣ್ಣ ರೈಯವರಿಂದ ಉದ್ಘಾಟನೆಗೊಂಡು ಕಾಸರಗೋಡು ನಗರದಲ್ಲಿಯೇ ಐದು ಶಾಖೆಗಳನ್ನು ಹೊಂದಿದೆ. ಸುಮಾರು 6250 ಸದಸ್ಯತ್ವ ಹೊಂದಿದ ಈ ಬ್ಯಾಂಕ್ ರೂ. 52 ಕೋಟಿ ಸಾಲ ಕೊಟ್ಟಿದೆ. ಎಂದೂ ಸಾಲಗಾರರ ಮೇಲೆ ಮಾನಸಿಕ ಒತ್ತಡ ಹೇರದಿದ್ದರೂ ಸಾಲ ಸ್ವೀಕರಣೆಯ ನಿಯಮಗಳು ಅತಿ ಸರಳವಾಗಿರುವುದರಿಂದ, ವಾತಾವರಣ ಹೆಚ್ಚು ಆಪ್ತವಾಗಿರುವುದಿಂದ ಪಕ್ಷಾತೀತವಾಗಿ ಜನ ಬೆಂಬಲ ಪಡೆದಿದೆ. ಇನ್ನೂ ಹಲವು ಶಾಖೆಗಳನ್ನು ಪ್ರಾರಂಭಿಸಲು ಒತ್ತಾಯ ಕೂಡ ಬರುತ್ತಿದೆ. ಸಹಕಾರಿ ಗಣ್ಯರ ನೇರ ಮಾರ್ಗದರ್ಶನದಲ್ಲಿ ನಡೆಯುವ ಈ ಬ್ಯಾಂಕಿನಲ್ಲಿ ಸುಮಾರು 40 ಕ್ಕೂ ಹೆಚ್ಚು ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ. ಇಡೀ ಕೇರಳದಲ್ಲಿ ಸುಮಾರು 40,000 ಕ್ಕೂ ಅಧಿಕ ಕುಟುಂಬಗಳಿಗೆ ಸಹಕಾರಿ ಸಂಸ್ಥೆಯಲ್ಲಿ ಕೆಲಸ ನೀಡಲಾಗಿದೆ.

ಇ.ಕೆ. ನಾಯನಾರ್ ಸ್ಮಾರಕ ಸಹಕಾರಿ ಆಸ್ಪತ್ರೆ

2005 ರಲ್ಲಿ ಪ್ರಾರಂಭವಾದ ಇ.ಕೆ. ನಾಯನಾರ್ ಸ್ಮಾರಕ ಸಹಕಾರಿ ಆಸ್ಪತ್ರೆ ಕಾಸರಗೋಡಿನ ಬೆಂಗಳದಲ್ಲಿದೆ. ಸುಮಾರು 100 ಹಾಸಿಗೆಯ ದೊಡ್ಡ ಆಸ್ಪತ್ರೆ ಇದು. ಪ್ರತಿ ದಿನ 600-800 ಜನ ರೋಗಿಗಳು ಭೇಟಿ ಕೊಡುತ್ತಾರೆ. ಅತ್ಯಂತ ಕಡಿಮೆ ದರದಲ್ಲಿ ಔಷಧೋಪಚಾರ ನೀಡುವ ಈ ಆಸ್ಪತ್ರೆ ಕೂಡ ಪ್ರತ್ಯೇಕ ಸೊಸೈಟಿಯ ಅಡಿಯಲ್ಲಿಯೇ ನಡೆಯುತ್ತಿದೆ. ಆಧುನಿಕವಾದ ಎಲ್ಲಾ ಸೌಲಭ್ಯಗಳನ್ನು ಈ ಆಸ್ಪತ್ರೆಯಲ್ಲಿ ಪಡೆಯಬಹುದು. 9 ಜನ ಖಾಯಂ ವೈದ್ಯರು, ಇತರೇ ಸಂದರ್ಶಕ ವೈದ್ಯರನ್ನು ಸೇರಿ 75 ಜನ ಉದ್ಯೋಗಿಗಳಿದ್ದಾರೆ. ಆಯುರ್ವೇದಿಕ್ ಆಸ್ಪತ್ರೆಗಾಗಿ ಇನ್ನೊಂದು ಸೊಸೈಟಿ ಸ್ಥಾಪಿಸಲಾಗಿದೆ. ಮತ್ತೊಂದು ಚಾರಿಟೇಬಲ್ ಟ್ರಸ್ಟ್ ಸ್ಥಾಪಿಸಿರುವ ಇವರು ಇದರಡಿ ಪ್ರತಿದಿನ ವೈದ್ಯರು ಹಳ್ಳಿಗಳ 10 ಮನೆಗಳನ್ನು ಸಂದರ್ಶಿಸಿ ಆಸ್ಪತ್ರೆವರೆಗೆ ಬಂದು ಔಷಧೋಪಚಾರ ಪಡೆಯಲಾಗದ ಅಶಕ್ತರಿಗೆ ನೀಡುವ ಯೋಜನೆ ತಂದಿದ್ದಾರೆ. ಈ ಭಾಗದ ದುಡಿದು ತಿನ್ನುವ ಸಾಮಾನ್ಯ ಜನರಿಗೆ ಇದು ವರದಾನವಾಗಿದೆ.

ಮುದ್ರಣ ಮತ್ತು ಪ್ರಕಾಶನ ಸಹಕಾರಿ ಸೇವೆ

1996 ರಲ್ಲಿ ಸ್ಥಾಪಿಸಲ್ಪಟ್ಟ ಎನ್.ಜಿ. ಕಾಮತ (ನೀಲೇಶ್ವರ ಗಣಪತಿ ಕಾಮತ ಇವರನ್ನು ಸಾಹಿತಿ ನಿರಂಜನರು ಚಿರಸ್ಮರಣೆ ಕಾದಂಬರಿ ಬರೆದಾಗ ನೆನಪಿಸಿ ಗೌರವಿಸಿದ್ದರು.) ಮೆಮೋರಿಯಲ್ ಕೋ-ಆಪರೇಟಿವ್ ಪ್ರೆಸ್ ಸ್ಥಾಪನೆಯಾಗಿ 2003 ರಲ್ಲಿ ಸಾರ್ವಜನಿಕ ಕೆಲಸ ಪ್ರಾರಂಭಿಸಿತು. ಸುಮಾರು 340 ಸದಸ್ಯರನ್ನು ಒಳಗೊಂಡ ಈ ಸೊಸೈಟಿಯ ಅಧ್ಯಕ್ಷರಾಗಿ ಈಗ ಕಾಂ. ಟಿ.ಕೆ. ರಾಜನ್. 18 ಜನ ಖಾಯಂ ನೌಕರರನ್ನು ಹೊಂದಿದ ಈ ಸಂಸ್ಥೆ ಕಳೆದ ವರ್ಷ 1 ಕೋಟಿ 40 ಲಕ್ಷ ರೂಪಾಯಿಗಳ ವ್ಯವಹಾರ ನಡೆಸಿದೆ. ಪ್ರಾರಂಭದಲ್ಲಿ ಕೇವಲ 30 ರೂಪಾಯಿ ಸಂಬಳಕ್ಕೆ ಕೆಲಸ ಪ್ರಾರಂಭಿಸಿದೆವು, ಈಗ 15-20 ಸಾವಿರ ರೂಪಾಯಿ ಸಂಬಳ ಪಡೆಯುತ್ತಿದ್ದೇವೆ. 5 ಗಂಟೆಯ ನಂತರ ಕೆಲಸ ನಿರ್ವಹಿಸಿದರೆ ಪ್ರತ್ಯೇಕ ಸಂಬಳ ಇದೆ ಎಂದು ಇಲ್ಲಿಯ ನೌಕರರು ಖುಷಿಯಿಂದಲೇ ಹೇಳುತ್ತಾರೆ. ಕಡಿಮೆ ದರದಲ್ಲಿ ಮುದ್ರಣವಾಗುತ್ತಿರುವುದರಿಂದ ವಿವಿಧ ಸಂಘಸಂಸ್ಥೆಗಳು, ಶಿಕ್ಷಣ ಇಲಾಖೆ, ಸರ್ಕಾರಿ ಇನ್ನಿತರೇ ಇಲಾಖೆಗಳ ಮುದ್ರಣ ಕೆಲಸ ಕೂಡ ಇವರು ನಿರ್ವಹಿಸುತ್ತಾರೆ. ಸಹೋದರ ಸೊಸೈಟಿಯ ಬಾಡಿಗೆ ಕಟ್ಟಡದಲ್ಲಿರುವ ನಮ್ಮ ಪ್ರೆಸ್ ಇನ್ನೂ ಕೆಲವೇ ತಿಂಗಳಲ್ಲಿ ಅಂದಾಜು 96 ಲಕ್ಷ ರೂಪಾಯಿಗಳ ವೆಚ್ಚದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಳ್ಳುತ್ತಿದೆ. ಆಗ ನಮ್ಮ ಕಾರ್ಯವ್ಯಾಪ್ತಿ ಇನ್ನಷ್ಟು ಹೆಚ್ಚಲಿದೆ. ನಮ್ಮ ನೌಕರರ ದುಡಿಮೆಯ ಫಲವಾಗಿ ಇಂತಹ ಒಂದು ಸಾಧನೆ ಮಾಡಿದ ಸಂತೋಷ ನಮ್ಮೆಲ್ಲರದು ಎಂದು ಅಧ್ಯಕ್ಷರು ಅಭಿಮಾನದಿಂದ ಹೇಳುತ್ತಾರೆ. ಹೊಸ ಕಟ್ಟಡದಲ್ಲಿ ಮಹಿಳಾ ನೌಕರರಿಗಾಗಿ ಪ್ರತ್ಯೇಕ ವಿಶ್ರಾಂತಿ ಕೊಠಡಿಯನ್ನು ಕಟ್ಟಿರುವುದು, ಕೆಲಸಗಾರರಿಗೆ ಮೂಲ ಸೌಕರ್ಯ ಹಾಗೂ ಸರ್ಕಾರದ ಸಾಮಾಜಿಕ ಭದ್ರತೆಯನ್ನೂ ಒದಗಿಸಿರುವುದು ಅನುಕರಣೀಯ.

ಬಸ್ ಮತ್ತು ಹೊಟೇಲ್

22ನೇ ವರ್ಷಕ್ಕೆ (12 ಜುಲೈ 1968 ರಲ್ಲಿ) ಹುತಾತ್ಮರಾದ ಯು. ವರದರಾಜ್ ಪೈ ಅವರ ನೆನಪಿನಲ್ಲಿ ದಿ. ಕಾಸರಗೋಡ ಡಿಸ್ಟ್ರಿಕ್ಟ್ ಟ್ರಾನ್ಸ್‌ಪೋರ್ಟ್ ಕೋ-ಆಪರೇಟಿವ್ ಸೊಸೈಟಿ ಅಡಿಯಲ್ಲಿ ಬಸ್ ಓಡಿಸಲಾಗುತ್ತಿದೆ. ಇದರೊಂದಿಗೆ ಇನ್ನೊಂದು ಪ್ರತ್ಯೇಕ ಸೊಸೈಟಿಯ ಅಡಿಯಲ್ಲಿ ಗ್ರೀನ್ ಲೀಫ್ ಹೊಟೇಲ್ ನಡೆಸಲಾಗುತ್ತಿದೆ. ಇವೆಲ್ಲವೂ ಲಾಭದಾಯಕವಾಗಿಯೇ ನಡೆಯುತ್ತಿದೆ. ಇಂತಹ 30 ಕ್ಕೂ ಹೆಚ್ಚು ಸೊಸೈಟಿಗಳನ್ನು ಕಾಸರಗೋಡ ಜಿಲ್ಲೆಯೊಂದರಲ್ಲಿಯೇ ನಡೆಸಲಾಗುತ್ತಿದೆ.

ನಮ್ಮ ಕರ್ನಾಟಕದಲ್ಲಿ, ಉತ್ತರ ಕನ್ನಡದಲ್ಲಿ ಸಹಕಾರಿ ಮಿತ್ರ, ಸಹಕಾರಿ ರತ್ನ ಎಲ್ಲ ರೀತಿಯ ಬಹುಮಾನ ಬರುತ್ತದೆ. ಕೇವಲ ಒಂದು ಊರಿನಲ್ಲಿ ಒಂದು ಎರಡು ಸಹಕಾರಿ ಬ್ಯಾಂಕ್ ಮಾಡಿದ ಕೂಡಲೇ ಆ ಸೊಸೈಟಿಗೆ ಗೆದ್ದು ಬಂದರೆ ಹೀರೋಗಳಂತೆ ಬಿಂಬಿಸುತ್ತಾರೆ. ಆದರೆ ಕೇರಳದಲ್ಲಿ ನೋಡಿ ತನ್ನ ಚಳುವಳಿಯ ಜವಾಬ್ದಾರಿಯ ಜೊತೆಗೆ ನೂರಾರು ಊರುಗಳಲ್ಲಿ, ನೂರಾರು ವಿಭಿನ್ನ ವಿಭಾಗಗಳಲ್ಲಿ ಜನತೆಯನ್ನು ಸಾಲಬಾಧೆಯ ಗುಲಾಮಗಿರಿಯಿಂದ ಬಿಡುಗಡೆಯ ದಾರಿ ತೋರಿಸಿದ್ದು ಇವರೆಲ್ಲರ ಘನತೆ ಹೆಚ್ಚಿಸಿದೆ. ಜನಪರ-ಜನಪ್ರಿಯ ಎಂದರೆ ಇದೇ ಇರಬೇಕು.

ಇಲ್ಲಿ ಮುಖ್ಯವಾಗಿ ದುಡಿದವರು ಎನ್. ರಾಮಣ್ಣ ರೈ, ಕೆ.ಎಂ. ಕುನ್ಹಿಕಣ್ಣನ್, ಟಿ.ಕೆ. ಚಂದನ್, ಎನ್. ಕೆ. ಬಾಲಕೃಷ್ಣನ್, ಮೇಲೋಟ್ಟ್ ನಾರಾಯಣನ್ ನಂಬಿಯಾರ್, ಹೀಗೆ ಅನೇಕರು. ಆದರೆ ಒಂದು ಜೀವಂತ ಉದಾಹರಣೆಗೆ, ಕಾಸರಗೋಡು ಜಿಲ್ಲೆಯ ಗುಡ್ಡಗಾಡು ಪ್ರದೇಶ ಮುನ್ನಾಡಿನ 74 ವರ್ಷ ಪ್ರಾಯದ ಶ್ರೀ ಪಿ.ರಾಘವನ್ ಮಾಜಿ ಎಂ.ಎಲ್.ಎ. ಇವರು ಸಹಕಾರಿ ರಂಗದಲ್ಲಿ ಹೆಸರು ಮಾಡಿದವರು. ಕೇರಳ ರಾಜ್ಯ ಸಹಕಾರಿ ಬ್ಯಾಂಕ್ ಲಿ. ಮಾಜಿ ಅಧ್ಯಕ್ಷರು, ಕೇರಳ ರಾಜ್ಯ ಸಹಕಾರಿ ಸಂಘಗಳ ಅಧ್ಯಕ್ಷರು, ಕಾಸರಗೋಡ ಸರ್ವಿಸಸ್ ಕೊ.ಅಪ್ ಬ್ಯಾಂಕ್,ಲಿ ಸಂಸ್ಥಾಪಕ ಅಧ್ಯಕ್ಷರು, ಎನ್.ಜಿ.ಕಾಮತ್ ನೆನಪಿನ ಸಹಕಾರಿ ಮುದ್ರಣಾಲಯ, ಕಾಸಗೋಡ ಜಿಲ್ಲಾ ಬಸ್ ಟ್ರಾನ್ಸ್‌ಪೋರ್ಟ ಸಹಕಾರಿ, ಲಿ., ಕಾಸರಗೋಡು ಜಿಲ್ಲಾ ತರಕಾರಿ ಮತ್ತು ಹಣ್ಣು ಸಂಸ್ಕರಣ ಸೊಸೈಟಿ, ಇ.ಕೆ.ನಾಯನಾರ್ ನೆನಪಿನ ಸಹಕಾರಿ ಆಸ್ಪತ್ರೆ, ಪೀಪಲ್ ವೆಲ್ ಫೇರ್ ಸಹಕಾರಿ ಸೊಸೈಟಿ ಮುಂತಾದವುಗಳ ಸಂಸ್ಥಾಪಕ ಮುಂದಾಳು. ಅಲ್ಲದೇ ದಿ. ಕಾಸರಗೋಡು ಸಹಕಾರಿ ಶಿಕ್ಷಣ ಸೊಸೈಟಿಯನ್ನು, ಮುನ್ನಾಡ ಎಂಬಲ್ಲಿ 35.5 ಎಕರೆ ಪ್ರದೇಶದಲ್ಲಿ ಸ್ಥಾಪಿಸಿದ್ದಾರೆ. ಇಎಂಎಸ್ ನೆನಪಿನ ಅಕ್ಷರ ಗ್ರಾಮ ಸ್ಥಾಪಿಸಿ ಆ ಮೂಲಕ ಕಣ್ಣೂರು ವಿಶ್ವವಿದ್ಯಾಲಯಕ್ಕೆ ಸಂಲಗ್ನಗೊಂಡ, ದೆಹಲಿ ಎಐಸಿಟಿಈದಿಂದ ಮಾನ್ಯತೆ ಪಡೆದ ಪೀಪಲ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಸ್ಥಾಪನೆ, ಜನತಾ ಅಂತಾರಾಷ್ಟ್ರೀಯ ಕಿಂಡರ್ಗಾರ್ಟನ್, ಜನತಾ ಸಹಕಾರಿ ಕಲೆ ಮತ್ತು ವಿಜ್ಞಾನ ಕಾಲೇಜು, ಹೊಟೇಲ್ ಮ್ಯಾನೇಜ್ ಮೆಂಟ್, ಕಂಪ್ಯೂಟರ್ ವಿಷಯಗಳ ಉನ್ನತ ವ್ಯಾಸಂಗಕ್ಕೂ ಕಾಲೇಜಿನಲ್ಲಿ ಅವಕಾಶ ಕಲ್ಪಿಸಿದ್ದಾರೆ. ಇಲ್ಲಿ 3000 ಕ್ಕೂ ಅಧಿಕ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಯಾವ ಯುನಿವರ್ಸಿಟಿಗೂ ಕಮ್ಮಿ ಇಲ್ಲದಂತೆ ಸೌಲಭ್ಯ ಒದಗಿಸಿದ್ದಾರೆ ಸಹಕಾರಿ ತತ್ವದ ಮೂಲಕ. ಇವರು ಯಾವುದೇ ಬಿರುದು ಬಾವಲಿಗಳ ಬೆನ್ನಹಿಂದೆ ಬಿದ್ದಿಲ್ಲ. ಪ್ರಾಮಾಣಿಕತೆಯೊಂದಿಗೆ ಬೇರೆಯವರನ್ನು ಬೆಳೆಸಿರುವುದೇ ಇವರ ಪ್ರಶಸ್ತಿ.

ಇನ್ನೊಂದು ವಿಶೇಷ ಹೇಳಲೇ ಬೇಕು. ನಿಮಗೆ ಗೊತ್ತಿರಬಹುದು 1969ರಲ್ಲಿ ಕೇರಳದ ಕನಿಷ್ಠ ಕೂಲಿ ಕಾಯ್ದೆ ಜಾರಿಗೆ ಬಂತು. ಅದಕ್ಕೂ ಮೊದಲು ಇದ್ದ ಗಣೇಶ ಬೀಡಿ ಕಂಪನಿ ಈ ಕಾಯ್ದೆಯಿಂದ ನುಣುಚಿಕೊಂಡು ಕಾರ್ಮಿಕರನ್ನು ಬೀದಿ ಪಾಲು ಮಾಡಿ ಮಂಗಳೂರಿಗೆ ಪಲಾಯನ ಮಾಡಿತು. ಅದಾಗಲೇ ಕರ್ನಾಟಕದಲ್ಲಿ ಅಗ್ಗದ ಕೂಲಿಗೆ ಕಾರ್ಮಿಕರು ಸಿಗುವುದು ಮತ್ತು ಕಾನೂನು ರಕ್ಷಣೆ ಇಲ್ಲದ್ದರಿಂದ ಈ ಮಾಲಿಕರಿಗೆ ಕರ್ನಾಟಕ ಒಂದು ಸ್ವರ್ಗವಾಯಿತು. ಆದರೆ ಇದು ವಿಶೇಷವಲ್ಲ. ಗಣೇಶ ಬೀಡಿ ಮಾಲಿಕ ನಿರ್ಗತಿಕರನ್ನಾಗಿಸಿದ 12500 ಜನ ಕಾರ್ಮಿಕರನ್ನು ಬದುಕಿಸುವುದು ಕೆಲಸ ಕೊಡುವುದು ಅಂದು ಮುಖ್ಯ ಪ್ರಶ್ನೆಯಾಯಿತು. ಹಾಗಾಗಿ ಈ ಕಾರ್ಮಿಕರನ್ನು ಉಳಿಸುವ ನಿಟ್ಟಿನಲ್ಲಿ ಅಂದು ಈ ಭಾಗದ ಗಣೇಶ ಬೀಡಿ ಕೆಲಸಗಾರರ ಸಹಕಾರ ಸಂಘ ಸ್ಥಾಪಿಸಿದರು. ಮತ್ತು ಆ ಕೆಲಸಗಾರರ ಜೊತೆಗೆ ಮತ್ತಷ್ಟೂ ಜನ ಸೇರಿ 45 ಸಾವಿರ ಜನ ಬೀಡಿಯಿಂದ ಬದುಕು ಕಂಡುಕೊಂಡರು. ಆದರೆ ಈಗ ಬೀಡಿ ಉದ್ಯಮವೇ ಸಂಕಷ್ಟದಲ್ಲಿದೆ. ಮತ್ತೆ ಕಾರ್ಮಿಕರನ್ನು ಉಳಿಸಲು ಏನು ಮಾಡುವುದು? ಕೇರಳದ ➚



ಸಂಘ ಪರಿವಾರದ ಸವಾಲು–ಪ್ರತಿಸವಾಲಿಗೆ ಒಂದು ವರ್ಷ.........

ಪುಟ 9 ರಿಂದ

ಮೊದಲು ಬಿಜೆಪಿ ನಾಶಪಡಿಸಿದ ಸ್ಥಳಗಳಲ್ಲೇ ಮರುಪ್ರದರ್ಶಿಸಿದರು.

ಸಂಘಿ ಮುಖಭಂಗ

ಕೊನೆಯ ಹತಾಶೆಯ ಘಟ್ಟದ ಭಾಗವಾಗಿ ಬಿಜೆಪಿ ಮತ್ತು ಸಂಘಪರಿವಾರವು ಪಿಣರಾಯಿರವರ ಕಾರ್ಯಕ್ರಮದ ದಿನದಂದು ಜಿಲ್ಲಾ ಬಂದ್‌ಗೆ ಕರೆ ನೀಡಿತು. ಸಿಪಿಐ(ಎಂ)ನ ಸೌಹಾರ್ದತಾ ರ‍್ಯಾಲಿಯಲ್ಲಿ ಭಾಗವಹಿಸುವ ಕಾರ್ಯಕರ್ತರ ವಾಹನಗಳನ್ನು ತಡೆಹಿಡಿಯಲು ಬಿಜೆಪಿಯು ವಿವಿಧ ಪ್ರಮುಖ ಸಂಪರ್ಕ ಮಾರ್ಗಗಳಲ್ಲಿ ಕಾರ್ಯಕರ್ತರ ತಂಡವನ್ನು ರಚಿಸಿರುವುದಾಗಿ ಘೋಷಿಸಿದರು. ಪಿಣರಾಯಿ ವಿಜಯನ್‌ರವರು ಪೊಲೀಸ್ ರಕ್ಷಣೆಯಲ್ಲಿ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿದರೂ ಜನಸಾಮಾನ್ಯರು ಅದರಲ್ಲಿ ಭಾಗವಹಿಸಲು ಸಾಧ್ಯವಾಗದಂತೆ ಮಾಡಿ ಕಾರ್ಯಕ್ರಮವನ್ನು ವಿಫಲಗೊಳಿಸುವುದಾಗಿ ಘೋಷಿಸಿದರು. ಇದಕ್ಕೆ ಪ್ರತಿಯಾಗಿ ಸಿಪಿಐ(ಎಂ) ಪಕ್ಷವು ಖಾಸಗಿ ಬಸ್ ಬಂದ್ ಜರುಗಿದ್ದಲ್ಲಿ ಇತರೆ ಪರ್ಯಾಯ ವಾಹನಗಳ ಮೂಲಕ ರ‍್ಯಾಲಿಗೆ ಬರಬೇಕೆಂದು ಕರೆ ನೀಡಿತ್ತು. ಒಂದು ವೇಳೆ ವಾಹನಗಳನ್ನು ಬಿಜೆಪಿ, ಸಂಘಪರಿವಾರದ ಕಾರ್ಯಕರ್ತರುಗಳು ತಡೆಹಿಡಿದರೆ ಅಥವಾ ಇತರೆ ಯಾವುದೇ ಅಹಿತಕರ ಘಟನೆ ನಡೆಸಿದರೂ ಕಾರ್ಯಕರ್ತರುಗಳು ಕಾಲ್ನಡಿಗೆಯಲ್ಲೇ ಬಂದು ರ‍್ಯಾಲಿಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿತ್ತು. ಈ ರೀತಿ ಸವಾಲಿಗೆ ಪ್ರತಿಸವಾಲುಗಳು ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಸಮರದ ದಿನಚರಿಯಾಯಿತು. ಹಂತಹಂತವಾಗಿ ನಡೆದ ಕೋಮುವಾದಿಗಳ ಮತ್ತು ಜಾತ್ಯಾತೀತವಾದಿಗಳ ಮಧ್ಯದ ಈ ಸಂಘರ್ಷದ ಅಂತಿಮ ಕ್ಷಣಗಳನ್ನು ಜಿಲ್ಲೆಯ ಜನತೆ ಆತಂಕದಿಂದ ಗಮನಿಸುತ್ತಿದ್ದರು. ಕೊನೆಗೂ ಫೆಬ್ರವರಿ 26, 2017ರಂದು ಜಿಲ್ಲೆಯಲ್ಲಿ ಆತಂಕದ ಸೂರ್ಯೋದಯವನ್ನು ಎದುರು ನೋಡುವಂತಹ ಸನ್ನಿವೇಶ ನಿರ್ಮಾಣವಾಯಿತು. ಹೆಚ್ಚು ಕಡಿಮೆ ಅಘೋಷಿತ ಯುದ್ಧವಲಯವೇ ನಿರ್ಮಾಣವಾಗಿತ್ತು.

ಅಂದು ಬೆಳಿಗ್ಗೆಯಿಂದಲೇ ವಾಹನ ಸಂಚಾರಗಳನ್ನು ಇಲ್ಲದಂತೆ ಮಾಡಲು ರಸ್ತೆಗೆ ಮರ ಕಡಿದು ತಡೆಯೊಡ್ಡಲಾಯಿತು. ವಿವಿಧ ಪ್ರಮುಖ ಮಂಗಳೂರು ನಗರ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಟಯರ್‌ಗೆ ಬೆಂಕಿ ಹಚ್ಚಲಾಗಿತ್ತು. ಅಂದು ಸಂಚಾರ ನಡೆಸುತ್ತಿದ್ದ ಸರಕಾರಿ ಬಸ್ಸುಗಳ ಮೇಲೆ ಕಲ್ಲು ಎಸೆದು ವಾಹನಗಳಿಗೆ, ಪ್ರಯಾಣಿಕರಿಗೆ ಮತ್ತು ಚಾಲಕ ನಿರ್ವಾಹಕರಿಗೆ ಹಲ್ಲೆ ನಡೆಸಲಾಗಿತ್ತು. ಇಂತಹ ಘಟನೆಗಳ ಮೂಲಕ ಸ್ವಯಂಪ್ರೇರಿತ ಬಂದ್ ಎಂಬ ಕರೆಯನ್ನು ಹಿಂಸಾತ್ಮಕವಾಗಿ ಭಯದ ವಾತಾವರಣ ನಿರ್ಮಿಸಿ ಜಾರಿ ಮಾಡಲಾಯಿತು. ಮಾತ್ರವಲ್ಲದೆ ಸಂಘಪರಿವಾರವು ಪಿಣರಾಯಿ ವಿಜಯನ್‌ರವರು ರಸ್ತೆಯ ಮೂಲಕ ಬಂದರೂ, ವಿಮಾನದ ಮೂಲಕ ಬಂದರೂ, ರೈಲ್ವೆಯ ಮೂಲಕ ಬಂದರೂ ಒಂದು ಹೆಜ್ಜೆ ಮುಂದುವರಿಯಲು ಬಿಡುವುದಿಲ್ಲವೆಂದು ಪ್ರತಿಜ್ಞೆ ಕೈಗೊಂಡರು. ಈ ರೀತಿ ಹಂತ ಹಂತವಾಗಿ ಪಿಣರಾಯಿ ವಿಜಯನ್‌ರವರನ್ನು ಕೇಂದ್ರೀಕರಿಸಿ ನಡೆಸಿದ ಎಲ್ಲಾ ಕಾರ್ಯಕ್ರಮಗಳು ವಿಫಲಗೊಂಡವು. ಇಂತಹ ಆಂದೋಲನ ಕೈಗೊಂಡ ಸಂಘಪರಿವಾರಕ್ಕೆ ತೀವ್ರ ಮುಖಭಂಗದ ನಿರ್ಣಾಯಕ ಘಟ್ಟ ಸರಿಸುಮಾರು ಬೆಳಿಗ್ಗೆ 10 ಗಂಟೆಗೆ ಸಂಭವಿಸಿತ್ತು. ಆ ಸಮಯದಲ್ಲಿ ಪಿಣರಾಯಿ ವಿಜಯನ್‌ರವರು ಎಲ್ಲಾ ಟೀಕೆ, ಪ್ರತಿಭಟನೆ, ಭಯದ ವಾತಾವರಣಗಳೆಲ್ಲವನ್ನು ಧಿಕ್ಕರಿಸಿ ಸಮರ ನಾಯಕನಾಗಿ ಮಂಗಳೂರು ರೈಲ್ವೇ ನಿಲ್ದಾಣದಲ್ಲಿ ಬಂದು ಇಳಿದರು. ಆ ಸಮಯದಲ್ಲಿ ಕರ್ನಾಟಕದ ಪೊಲೀಸರು, ಕೇರಳದ ಪೊಲೀಸರು ಹಾಗೂ ಸಾವಿರಾರು ಸಂಖ್ಯೆಯ ಪಕ್ಷದ ಕಾರ್ಯಕರ್ತರೂ ಮತ್ತು ಸಾರ್ವಜನಿಕರ ಮಧ್ಯೆ ನಿರ್ಭಯರಾಗಿ ಸಂಚರಿಸಿ ವಾರ್ತಾಭಾರತಿ ಪತ್ರಿಕೆಯ ಪ್ರಥಮ ಕಾರ್ಯಕ್ರಮಕ್ಕೆ ಹಾಜರಾಗಿದ್ದಾರೆ ಎಂಬ ಸುದ್ಧಿಯನ್ನು ಟಿವಿ ಮಾಧ್ಯಮಗಳು ಬಿತ್ತರಿಸಿದವು. ಇದೇ ರೀತಿ ಸಾವಿರಾರು ಸಂಖ್ಯೆಯಲ್ಲಿ ಈ ಕಾರ್ಯಕ್ರಮದ ಪರವಾಗಿದ್ದ ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶಗಳು ಪಸರಿಸಿದಾಗ ಆತಂಕದಲ್ಲಿದ್ದ ಸಹಸ್ರ ಸಹಸ್ರ ಕಾರ್ಯಕರ್ತರುಗಳಿಗೆ ಜಾತ್ಯಾತೀತ ವ್ಯಕ್ತಿಗಳಿಗೆ, ಶಕ್ತಿಗಳಿಗೆ ಎಲ್ಲಿಲ್ಲದ ಸಂತೋಷ ಉಕ್ಕಿ ಹರಿದವು. ಪ್ರತಿಯಾಗಿ ಸಂಘಪರಿವಾರ ಎಸೆದ ಸವಾಲು ಸಂಪೂರ್ಣವಾಗಿ ವಿಫಲಗೊಂಡು ತೀವ್ರ ಮುಖಭಂಗಕ್ಕೆ ಒಳಗಾಯಿತು.

ಪಿಣರಾಯಿ ಬಂದೇ ಬಂದರು

ವಾರ್ತಾಭಾರತಿ ಪತ್ರಿಕೆಯ ಕಾರ್ಯಕ್ರಮ ಯಾವುದೇ ಅಡೆತಡೆಯಿಲ್ಲದೆ ಕಿಕ್ಕಿರಿದ ಸಾವಿರಾರು ಜನಸಮೂಹದ ಭಾಗವಹಿಸುವಿಕೆಯೊಂದಿಗೆ ಯಶಸ್ವಿಯಾಗಿ ನಡೆಯಿತು. ಪಿಣರಾಯಿ ವಿಜಯನ್‌ರವರ ಕಾರ್ಯಕ್ರಮದ ಮುಂದಿನ ಘಟ್ಟ ಮಂಗಳೂರು ನೆಹರೂ ಮೈದಾನಿನಲ್ಲಿ ಆಯೋಜಿಸಿದ್ದ ಕರಾವಳಿ ಸೌಹಾರ್ದ ರ‍್ಯಾಲಿ ಮತ್ತು ಬಹಿರಂಗ ಸಭೆಯಲ್ಲಿ ಭಾಗವಹಿಸಿ ಭಾಷಣದ ಮಾಡುವುದಾಗಿತ್ತು. ಅಂದು ಪೂರ್ವ ನಿಗಧಿತ ಕಾರ್ಯಕ್ರಮದ ಪ್ರಕಾರ ಮೂರು ಗಂಟೆಗೆ ಜ್ಯೋತಿ ಸರ್ಕಲ್‌ನಿಂದ ಸಹಸ್ರಾರು ಜನರ ಮೆರವಣಿಗೆ ಜರುಗಿ ನಾಲ್ಕು ಗಂಟೆಗೆ ನೆಹರೂ ಮೈದಾನಿನಲ್ಲಿ ಬಹಿರಂಗ ಸಭೆ ನಡೆಯುವುದಾಗಿತ್ತು. ಆದರೆ ಸಂಘಪರಿವಾರ ಕರೆಕೊಟ್ಟ ಬಂದ್ ಕಾರ್ಯಕ್ರಮ ಮತ್ತು ನಿರಂತರವಾಗಿ ನಡೆಸಿದ ಭಯದ ವಾತಾವರಣದಿಂದ ರ‍್ಯಾಲಿ ಹಾಗು ಬಹಿರಂಗ ಸಭೆಗೆ ಜನ ಭಾಗವಹಿಸದೇ ಸೌಹಾರ್ದತಾ ರ‍್ಯಾಲಿ ಕಾರ್ಯಕ್ರಮ ವಿಫಲವಾಗಬಹುದೆಂಬ ಆತಂಕ ಮನೆ ಮಾಡಿತ್ತು. ಆದರೆ ಈ ಕಾರ್ಯಕ್ರಮಕ್ಕೆ ಕೂಡಾ ಜ್ಯೋತಿ ವೃತ್ತದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಕಾರ್ಯಕರ್ತರು, ಸಾರ್ವಜನಿಕರು ಅಣಿನೆರೆಯುವ ಮುಖಾಂತರ ರೋಮಾಂಚನಕಾರಿ ಸನ್ನಿವೇಶ ನಿರ್ಮಾಣವಾಯಿತು. ಸಂಘಪರಿವಾರದ ವಿರುದ್ಧ ಮುಗಿಲು ಮುಟ್ಟುವ ಘೋಷಣೆಗಳು, ಶಾಂತಿ ಸೌಹಾರ್ದತೆ ಪರವಾದ ಹಾಡುಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಕೇಳಿ ಬಂತು. ಈ ರ‍್ಯಾಲಿಗೆ ಪಕ್ಷದ ಕಾರ್ಯಕರ್ತರುಗಳು, ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರುಗಳು ಹತ್ತಾರು ಕಿ.ಮೀ ದೂರದ ಮೆರವಣಿಗೆಯ ಮುಖಾಂತರ ಮಾತ್ರವಲ್ಲದೆ ಇತರೆ ಸಂಪರ್ಕ ವಾಹನಗಳ ಮೂಲಕ ಬಂದು ಸೇರಿದರು.

ಸರಿಸುಮಾರು ನಾಲ್ಕು ಗಂಟೆಗೆ ಪಿಣರಾಯಿ ವಿಜಯನ್‌ರವರು ಬಹಿರಂಗ ಸಭೆಯ ವೇದಿಕೆಗೆ ಆಗಮಿಸಿದರು. ಆ ಕ್ಷಣದಲ್ಲಿ ಇಡೀ ಸಭೆ ರೋಮಾಂಚನಗೊಂಡಿತ್ತು. ಸಂಘಪರಿವಾರದ ಸವಾಲಿಗೆ ಎಂದೂ ಹೆದರದ ಪಿಣರಾಯಿ ವಿಜಯನ್‌ರವರು ಸುಮಾರು ಒಂದು ಗಂಟೆಗಳ ಕಾಲ ಸ್ಫೂರ್ತಿಯುತವಾಗಿ ವಿಚಾರ ಪ್ರಚೋದಕ ಉಪನ್ಯಾಸದ ರೀತಿಯಲ್ಲಿ ಭಾಷಣವನ್ನು ಮಾಡಿ ಸಂಘಪರಿವಾರವನ್ನು ತೀವ್ರವಾಗಿ ಟೀಕಿಸಿದರು. ಈ ಸಂದರ್ಭದಲ್ಲಿ ತನ್ನ ಭಾಷಣವನ್ನು ಕೊನೆಗೊಳಿಸುವಾಗ ತನ್ನ ವಿದ್ಯಾರ್ಥಿ ಜೀವನದಲ್ಲಿ ಎದುರಿಸಿದ ಘಟನೆಯನ್ನು ನೆನಪಿಸಿದರು. ಅವರು "ಸಂಘಪರಿವಾರದ ಹಿಂಸೆ, ಭಯೋತ್ಪಾದನೆಗಳಿಗೆ ಪಿಣರಾಯಿ ವಿಜಯನ್ ಎಂಬ ವ್ಯಕ್ತಿ ಎಂದೂ ಹೆದರುವವನಲ್ಲ; ತಲಚೇರಿಯ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿರುವಾಗ ಆರ್‌ಎಸ್‌ಎಸ್‌ನ ತಲವಾರು ಬೀಸುತ್ತಿರುವವರ ಮಧ್ಯದಿಂದಲೇ ಅವರನ್ನು ಎದುರಿಸಿ ಬೆಳೆದು ಬಂದಿದ್ದೇನೆ" ಎಂದು ಘೋಷಿಸಿದಾಗ ಇಡೀ ಸಭಾಂಗಣವೇ ಪಿಣರಾಯಿ ವಿಜಯನ್ ಜಿಂದಾಬಾದ್ ಎಂಬ ಘೋಷಣೆಯನ್ನು ಮೊಳಗಿಸಿದರು. ಈ ರೀತಿ ಸುಮಾರು ಒಂದು ತಿಂಗಳುಗಳ ಕಾಲ ಜಿಲ್ಲೆಯಲ್ಲಿ ನಡೆದ ಸವಾಲಿಗೆ ಪ್ರತಿಸವಾಲು ಕಾರ್ಯಕ್ರಮದಲ್ಲಿ ಜಾತ್ಯಾತೀತತೆ, ಸೌಹಾರ್ದತೆ ವಿಜಯ ಪತಾಕೆಯನ್ನು ಹಾರಿಸಿತು.

ಕೋಮುವಾದದ ವಿರುದ್ಧ ಹೋರಾಟ ದಿನನಿತ್ಯದ್ದು

ಸಾಮಾನ್ಯವಾಗಿ ಸಂಘಪರಿವಾರವು ಹೊಂದಿರುವ ತನ್ನ ಸಂಘಟನಾ ಜಾಲಗಳ ಮೂಲಕ ಸತ್ಯ, ನ್ಯಾಯ, ಸಂವಿಧಾನ, ಪ್ರಜಾಪ್ರಭುತ್ವಗಳೆಲ್ಲವನ್ನೂ ಗಾಳಿಗೆ ತೂರಿ ತನ್ನ ಮೂಗಿನ ನೇರಕ್ಕೆ ಅನುಗುಣವಾಗಿ ಚಟುವಟಿಕೆ ನಡೆಸುತ್ತದೆ. ತನಗೆ ಬೇಕಾದಾಗ ಸರಕಾರಿ ವ್ಯವಸ್ಥೆಯನ್ನು ಹೆದರಿಸಿ, ಬೆದರಿಸಿ ತನ್ನ ಕಾರ್ಯವನ್ನು ಸಾಧಿಸುತ್ತದೆ. ಕರಾವಳಿ ಕರ್ನಾಟಕವನ್ನು ಸಂಘಪರಿವಾರದ ಹೊಸಹೊಸ ಪ್ರಯೋಗಗಳ ತಾಣವನ್ನಾಗಿ ಮಾಡಿದೆ. ಸಾಮಾನ್ಯವಾಗಿ ಸಂಘಪರಿವಾರ ಹೇಳಿದ್ದೇ ವೇದ ವಾಕ್ಯ ಎಂಬ ರೀತಿ ವರ್ತಿಸುತ್ತಿದೆ. ಆನೆ ನಡೆದದ್ದೇ ದಾರಿ ಎಂಬ ರೀತಿಯಲ್ಲಿ ಜಿಲ್ಲೆಯಲ್ಲಿ ಸಂಘಪರಿವಾರವು ವಿವಿಧ ಘಟನೆಗಳನ್ನು, ಸಂದರ್ಭಗಳನ್ನು ಮತ್ತು ಬೆಳವಣಿಗೆಗಳನ್ನು ನಿರ್ವಹಿಸುತ್ತಾ ಬಂದಿದೆ. ಇಂತಹ ಸಂಘಪರಿವಾರದ ಜಾಯಮಾನಕ್ಕೆ ಪ್ರಬಲ ಪ್ರತ್ಯುತ್ತರ ನೀಡಿದ ಚಾರಿತ್ರಿಕ ಘಟನೆ ಪಿಣರಾಯಿ ವಿಜಯನ್‌ರವರು ಮಂಗಳೂರಿನಲ್ಲಿ ಕಳೆದ ವರ್ಷ ನಡೆಸಿದ ಯಶಸ್ವಿ ಕಾರ್ಯಕ್ರಮವಾಗಿದೆ. ಹಂತ ಹಂತದಲ್ಲೂ ಸಂಘಪರಿವಾರಕ್ಕೆ ಪ್ರತಿತಂತ್ರವನ್ನೂ ಹೆಣೆಯಲಾಯಿತು. ಈ ಪ್ರತಿತಂತ್ರಕ್ಕೆ ಕೇವಲ ಸಿಪಿಐ(ಎಂ) ಮತ್ತು ಅದರ ಸಾಮೂಹಿಕ ಸಂಘಟನೆಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರತಿಸ್ಪಂದಿಸಿರುವುದು ಮಾತ್ರವಲ್ಲದೆ ಎಲ್ಲಾ ಶಾಂತಿಪ್ರಿಯ ಜಾತ್ಯಾತೀತ ವ್ಯಕ್ತಿಗಳು, ಶಕ್ತಿಗಳು ಕ್ರಿಯಾಶೀಲವಾಗಿ ಭಾಗವಹಿಸುವ ಮುಖಾಂತರ ಒಂದು ಹೊಸ ಅಧ್ಯಾಯ ನಿರ್ಮಾಣವಾಯಿತು. ರ‍್ಯಾಲಿಯಲ್ಲಿ ಭಾಗವಹಿಸಿರುವ ಜನಸಮುದಾಯವನ್ನು ಗಮನಿಸುವಾಗ ಜಿಲ್ಲೆಯ ಜನ ಸ್ವಯಂ ಸ್ಫೂರ್ತಿಯಿಂದ ಎಲ್ಲಾ ಅಡೆತಡೆ, ಬೆದರಿಕೆ, ಹಿಂಸಾತ್ಮಕ ಸನ್ನಿವೇಶಗಳನ್ನು ಎದುರಿಸಿ ಭಾಗವಹಿಸಿದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಲಕ್ಷಾಂತರ ಸಂಖ್ಯೆಯಲ್ಲಿ ದೇಶ ವಿದೇಶಗಳಲ್ಲಿ ಸಾಮಾಜಿಕ ಜಾಲತಾಣಗಳ ಮುಖಾಂತರ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಆದುದರಿಂದ ಕೋಮುವಾದಿ ಶಕ್ತಿಗಳನ್ನು ಎದುರಿಸುವಲ್ಲಿ ಈ ವಿಧಾನವು ಹೊಸ ಸ್ಫೂರ್ತಿಯನ್ನು ನೀಡಿ ಚರಿತ್ರೆಯ ಪುಟಗಳಿಗೆ ಸೇರಿದ ಸ್ಮರಣಾರ್ಹ ಘಟನೆಯಾಗಿದೆ.

ಈ ಚಳವಳಿಯ ಘಟನೆಗಳಿಂದ ಮತ್ತು ಅದು ಬೆಳೆದು ಬಂದ ಹಂತ ಹಂತದ ಪ್ರತಿ ಹೋರಾಟಗಳಿಂದ ನಾವು ಪಾಠವನ್ನು ಕಲಿತು ಸಂಘಪರಿವಾರದ ವಿರುದ್ಧ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಕಾರ್ಯಕ್ರಮಗಳನ್ನು ದಿನನಿತ್ಯದ ಭಾಗವನ್ನಾಗಿ ಮಾಡಬೇಕಾಗಿದೆ. ಸಾಮಾನ್ಯವಾಗಿ ಕೋಮುವಾದದ ವಿರುದ್ಧದ ಹೋರಾಟವನ್ನು ಐದು ವರ್ಷಕ್ಕೊಮ್ಮೆ ಬರುವ ಚುನಾವಣೆಗೆ ಮಾತ್ರ ಸೀಮಿತಗೊಳಿಸುವ ವಿಧಾನ ಹಾಗೂ ಮೃದು ಹಿಂದುತ್ವದ ಮಾದರಿಯ ಕಾರ್ಯಕ್ರಮಗಳಿಂದ ಸೋಲಿಸಬಹುದೆಂಬುದನ್ನು ಪುನರ್ ವಿಶ್ಲೇಷಣೆಗೆ ಒಳಪಡಿಸಿದ ಕಾರ್ಯಕ್ರಮವಾಗಿದೆ.

ಈ ಚಳುವಳಿ ಜಾತ್ಯತೀತ ಶಕ್ತಿಗಳಲ್ಲಿ ಮೂಡಿಸಿದ ಆತ್ಮವಿಶ್ವಾಸ "ಸೌಹಾರ್ದತೆಗಾಗಿ ಕರ್ನಾಟಕ" ವೇದಿಕೆ ರಚನೆ ಮತ್ತು ಜನವರಿ 30, 2018ರಂದು 2 ಲಕ್ಷ ಜನ 160ಕ್ಕೂ ಹೆಚ್ಚು ಸ್ಥಳಗಳಲ್ಲಿ ಭಾಗವಹಿಸಿದ "ಮಾನವ ಸರಪಣಿ"ಯ ಇನ್ನೊಂದು ಯಶಸ್ವಿ ಚಾರಿತ್ರಿಕ ಕಾರ್ಯಕ್ರಮವನ್ನು ಸಾಧ್ಯ ಮಾಡಿತು. ●

ಸಹಕಾರಿ ಆಂದೋಲನ ಇನ್ನೊಂದು ಚಿಂತನೆ ಮಾಡಿ ಅನುಷ್ಟಾನಗೊಳಿಸುತ್ತಿದೆ. ಅದು ಏನೆಂದರೆ ಈ ಸಹಕಾರಿ ಸಂಘಗಳ ಮೂಲಕ ಹೊಸ ಹೊಸ ಉತ್ಪನ್ನಗಳ ತಯಾರಿಕೆ ಮತ್ತು ಮನೆಮನೆಗೆ ಮಾರಾಟದ ಕ್ರಿಯೆಯ ಮೂಲಕ ಕಾರ್ಮಿಕರನ್ನು ಉಳಿಸಲು ಮುಂದಾಗಿದೆ. ಆಹಾರ ಪೊಟ್ಟಣಗಳು, ಉಡುಪು, ಹೈನೋದ್ಯಮ, ಛತ್ರಿ ತಯಾರಿ ಇತ್ಯಾದಿ ಮೂಲಕ ಉದ್ಯೋಗ ಕೊಡಲು ಮುಂದಾಗಿದ್ದಾರೆ ಸೊಸೈಟಿಯ ಮೂಲಕ. ಆದಾಗ್ಯೂ ಇದನ್ನು ಹೊಸದಾಗಿ ಪ್ರಾರಂಭಿಸುವುದು ಅಷ್ಟೇನೂ ಸುಲಭವಲ್ಲ ಎನ್ನುವುದು ಸತ್ಯ ಎಂದು ಗಂಭೀರವಾಗಿ ಹೇಳುತ್ತಾರೆ.

ನಮ್ಮ ಮಂಗಳೂರಿನಲ್ಲಿ ಕರ್ನಾಟಕದಲ್ಲಿ ಬೇರೆ ಪ್ರದೇಶಗಳಲ್ಲೂ ಈಗ ಬೀಡಿಯ ಮುಕ್ತಾಯ ಸಮಾರಂಭವಾಗುತ್ತಿದೆಯಲ್ಲ ಎಂದರೆ, ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸಹಕಾರಿ ರಂಗದಿಂದ ಸಾಧ್ಯ ಇದೆ ಎನ್ನುತ್ತಾರೆ ಕೇರಳದ ಸಂಗಾತಿಗಳು.

ನಾನು ಕೇರಳದ ವಿವಿಧೆಡೆ ಮತ್ತು ವಿಶೇಷವಾಗಿ ಕಾಸರಗೋಡಿನ ವಿವಿಧ ಸಹಕಾರಿ ಬ್ಯಾಂಕ್, ಸಹಕಾರಿ ಮುದ್ರಣಾಲಯ, ಸಾರಿಗೆ ಸಹಕಾರಿ ಸಂಸ್ಥೆ, ರೈತರ ಹಾಗೂ ತರಕಾರಿ ಬೆಳೆಗಾರರ ಸಹಕಾರಿ ಸಂಸ್ಥೆಗಳು ಹಾಗೂ ಉದ್ಯೋಗಿಗಳ ಸಹಕಾರಿ ಸಂಸ್ಥೆಗಳ ಕೆಲಸ ಕಾರ್ಯಗಳ ಕುರಿತು ಸ್ವತಃ ಹೋಗಿ ಅಧ್ಯಯನ ನಡೆಸಿ, ಸಂದರ್ಶನ ಮಾಡಿ ಕೇಳಿ ತಿಳಿದೆ. ಇದು ಒಂದೆರಡು ದಿನಗಳಲ್ಲಿ ಮುಗಿಯುವ ಕೆಲಸವಲ್ಲ. ತಿಂಗಳುಗಟ್ಟಲೆ ಬೇಕು. ಕೇವಲ ಅಧ್ಯಯನ ಮಾಡಿದರೆ ಸಾಲದು, ನಮ್ಮ ಪ್ರದೇಶದಲ್ಲಿ ವಾಸ್ತವಕ್ಕಿಳಿಸಬೇಕಿದೆ.

ಸಹಕಾರಿ ರಂಗ ಪ್ರಜಾಸತ್ತಾತ್ಮಕ ನೆಲೆಯ ಕೇಂದ್ರ

ಇಂದು ಕೇರಳದಲ್ಲಿ ಸಹಕಾರಿ ರಂಗ ಇಲ್ಲದ ಉದ್ಯಮವೂ ಇಲ್ಲ, ಕ್ಷೇತ್ರವೂ ಇಲ್ಲ. ಇದು ಬದುಕಿನ ಭಾಗವಾಗಿದೆ. ಕೇರಳದ ಒಟ್ಟು ಸಹಕಾರಿ ರಂಗದ ಮೊತ್ತ ಮೂರು ವರ್ಷಗಳ ಹಿಂದೆ 1.5 ಲಕ್ಷ ಕೋಟಿ ರೂಪಾಯಿಗಳು. ಇದನ್ನು ಅತ್ಯಂತ ದಕ್ಷತೆಯಿಂದ ನಡೆಸುತ್ತಿದ್ದಾರೆ. ಭ್ರಷ್ಟಾಚಾರದ ಲೇಪವಿಲ್ಲದಂತೆ, ಸ್ವಜನ ಪಕ್ಷಪಾತವಿಲ್ಲದಂತೆ ನೋಡಿಕೊಂಡಿದ್ದಾರೆ.

ಇಷ್ಟೆಲ್ಲ ಶ್ರಮದ ಹಿಂದೆ ಸಹಕಾರಿ ರಂಗದ ಧೀಮಂತ ನಾಯಕರ ಬದ್ಧತೆಯೂ ಇದೆ. ಅವರಲ್ಲಿ ಕೆಲವರನ್ನಾದರೂ ಸ್ಮರಿಸಲೇ ಬೇಕು. ಭಾರತದ ಸ್ವಾತಂತ್ರ್ಯ ಹೋರಾಟ ಹಾಗೂ ಭೂಮಿ ಚಳುವಳಿಯ ಅವಿಸ್ಮರಣೀಯ ಹೆಸರುಗಳಲ್ಲೊಂದಾದ ಎಕೆ ಗೋಪಾಲನ್ (ಇಂಡಿಯನ್ ಕಾಫಿ ಹೌಸ್) ತ್ರಿವೇಂದ್ರಂ ನ ಸುರೇಂದ್ರನ್ ಪಿಳ್ಳೈ, ತಲಶೇರಿಯ ಇ. ನಾರಾಯಣನ್, ಕೊಯಿಕ್ಕೋಡಿನ ಕುಮಾರನ್, ಕೇರಳ ದಿನೇಶ್ ಬೀಡಿ ಕಾರ್ಮಿಕರ ಸಹಕಾರಿ ಧುರೀಣ ಜಿ.ಕೆ. ಪಣಿಕ್ಕರ್, ಕೇರಳ ರಾಜ್ಯ ಕೃಷಿ ಸಹಕಾರಿ ಧುರೀಣರಾದ ಕಾಸರಗೋಡಿನ ಮೇಲೋಟ್ಟ್ ನಾರಾಯಣನ್ ನಂಬಿಯಾರ್, ಜಿಲ್ಲಾ ಕೊ.ಅಪ್ ಬ್ಯಾಂಕ್ ಮುನ್ನಡೆಸಿದ ಎನ್.ಕೆ. ಬಾಲಕೃಣ್ಣನ್, ಟಿ.ಕೆ. ಚಂದನ್, ಕೆ.ಎಂ. ಕುನ್ಹಿಕಣ್ಣನ್ ಹಾಗೂ ಈಗಲೂ ಕೇರಳದಲ್ಲಿ ನಾಯಕತ್ವ ವಹಿಸಿ ಮುನ್ನಡೆಸುತ್ತಿರುವ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ತ್ರಿವೆಂದ್ರಂನ ಎನ್. ಕೃಷ್ಣನ್ ನಾಯರ್, ಸಹಕಾರ ಮಂತ್ರಿ ಕಡಗಂಪಳ್ಳಿ ಸುರೇಂದ್ರನ್, ಕಾಸರಗೋಡಿನ ಉದುಮಾ ಕ್ಷೇತ್ರದ ಮಾಜಿ ಶಾಸಕ ಪಿ. ರಾಘವನ್, ಮುನ್ನಾಡ್, ಸಂಸದ ಪಿ. ಕರುಣಾಕರನ್, ಕೆ.ಪಿ ಸಹದೇವನ್, ಕೆ. ಬಾಲಕೃಷ್ಣನ್, ಅರನ್ ನಾರಾ, ಐ.ಸಿ. ಕೃಷ್ಣನ್ ನಾಯರ್, ಎ.ಕೆ. ನಾರಾಯಣನ್, ಕೆ. ಕುನ್ಹಿರಾಮನ್, ಬಿ.ಎಂ. ರಾಮಯ್ಯ ಶೆಟ್ಟಿ, ಎಂ. ವಿ. ಕೋಮ ನಂಬಿಯಾರ್, ಸಿ.ಎಚ್. ಕುನ್ಹಂಬು, ಕೆ.ವಿ. ಕುನ್ಹಿರಾಮನ್, ಪಿ. ಅಪ್ಪುಕುಟ್ಟನ್ ಇನ್ನೂ ಸಾವಿರಾರು ನಾಯಕರ ದಣಿವರಿಯದ ಶ್ರಮ ಈ ಯಶಸ್ಸಿನಲ್ಲಿ ಅಡಗಿದೆ. ಇವರೆಲ್ಲ ಸಹಕಾರಿ ರಂಗದ ರತ್ನಗಳು.

ಹಾಗಾಗಿಯೇ ದೇಶ ಮಟ್ಟದಲ್ಲಿ ಕೇರಳ ಸಹಕಾರಿ ರಂಗದ ರಕ್ಷಕನಾಗಿ, ಸಹಕಾರಿ ಕೆಂಪು ರತ್ನವಾಗಿ ನಿಂತಿದೆ. ●

ಮೂರು ತಿಂಗಳಲ್ಲಿ ತಯಾರಿಕಾ ವಲಯದಲ್ಲಿ 87,000 ಉದ್ಯೋಗ ನಷ್ಟ

ಚುನಾವಣಾ ಪ್ರಣಾಳಿಕೆಯ 2 ಕೋಟಿ, 'ಸ್ವತಂತ್ರ' ಅಧ್ಯಯನದ 70ಲಕ್ಷ– ಈಗ ಕೇವಲ 5 ಲಕ್ಷ!

ಭಾರತ ಸರಕಾರದ ಲೇಬರ್ ಬ್ಯುರೋದ ಆರನೇ ಸುತ್ತಿನ ತ್ರೈಮಾಸಿಕ ಸರ್ವೇಯ ಫಲಿತಾಂಶಗಳು ಈ ವಾರ ಪ್ರಕಟವಾಗಿವೆ. ಇದರ ಪ್ರಕಾರ ಎಪ್ರಿಲ್–ಅಕ್ಟೋಬರ್2017ರ ಅವಧಿಯಲ್ಲಿ ತಯಾರಿಕಾ ವಲಯದಲ್ಲಿ ಹೊಸ ಉದ್ಯೋಗಾವಕಾಶಗಳು ನಿರ್ಮಾಣವಾಗುವ ಬದಲು ನಿವ್ವಳ 87000 ಉದ್ಯೋಗಗಳು ಕಡಿತಗೊಂಡಿವೆ. ಇದೇ ಅವಧಿಯಲ್ಲಿ 2016ರಲ್ಲಿ 12,000 ಉದ್ಯೋಗಗಳು ಕಡಿತಗೊಂಡಿದ್ದವು. ಅಂದರೆ 'ಮೇಕ್ ಇನ್ ಇಂಡಿಯಾ' ಎಂಬುದು ಹೆಚ್ಚೆಚ್ಚು ಪ್ರಮಾಣದಲ್ಲಿ ಹುಸಿ ಘೋಷಣೆಯಾಗುತ್ತಿದೆ.

ಈ ಅವಧಿಯಲ್ಲಿ ತಯಾರಿಕಾ ವಲಯದಲ್ಲಿ 54000 ಕಾಂಟ್ರಾಕ್ಟ್ ಉದ್ಯೋಗಗಳು, 23,00 ಕ್ಯಾಶುವಲ್ ಉದ್ಯೋಗಳು ಕಡಿತಗೊಂಡವು.

ಈ ಸರ್ವೆಯನ್ನು ಆರ್ಥಿಕದ ಎಂಟು ಪ್ರಮುಖ ವಲಯಗಳಲ್ಲಿ ಎಪ್ರಿಲ್ 2016ರಿಂದ ಮಾಡಲಾಗುತ್ತಿದೆ. ಕಳೆದ 15 ತಿಂಗಳಲ್ಲಿ ಈ ತಯಾರಿಕಾ ವಲಯವೂ ಸೇರಿದಂತೆ ಈ ಎಂಟು ವಲಯಗಳಲ್ಲಿ ನಿರ್ಮಾಣವಾದ ಉದ್ಯೋಗಗಳು ಕೇವಲ 4.8ಲಕ್ಷ. ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಶಿಕ್ಷಣ (1.7 ಲಕ್ಷ) ಮತ್ತು ಆರೋಗ್ಯ (1ಲಕ್ಷ). ಅಂದರೆ ವಾರ್ಷಿಕ ಉದ್ಯೋಗ ನಿರ್ಮಾಣ ದರ ಕೇವಲ 1.8% ವಾಗುತ್ತದೆ, ಪ್ರತಿವರ್ಷ ಹೊಸ ಉದ್ಯೋಗಾಕಾಂಕ್ಷಿಗಳ ಪ್ರಮಾಣಕ್ಕಿಂತ ಕಡಿಮೆ. ಅಂದರೆ , ವರ್ಷಕ್ಕೆ 2 ಕೋಟಿ ಉದ್ಯೋಗ ನಿರ್ಮಾಣ ಎಂಬುದು ಕೇವಲ ಚುನಾವಣಾ ಬೊಗಳೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಹಾಗಿದ್ದರೆ ಇತ್ತೀಚೆಗಷ್ಟೇ ಪ್ರಧಾನ ಮಂತ್ರಿಗಳು ಟೆಲಿವಿಶನ್ ಸಂದರ್ಶನದಲ್ಲಿ 2017–18ರಲ್ಲಿ 70ಲಕ್ಷ ಉದ್ಯೋಗಗಳನ್ನು ನಿರ್ಮಿಸಲಾಗುತ್ತದೆ ಎಂದದ್ದು ಯಾವ ಆಧಾರದಲ್ಲಿ? ಅದರ ನಂತರ ಹಣಕಾಸು ಮಂತ್ರಿಗಳ ಬಜೆಟ್ ಭಾಷಣದಲ್ಲೂ ಈ 70ಲಕ್ಷ ಉದ್ಯೋಗಗಳ ನಿರ್ಮಾಣದ ಮಾತು ಪ್ರಸ್ತಾಪಗೊಂಡಿತು. 2 ಕೋಟಿ 70 ಲಕ್ಷಕ್ಕಿಳಿಯಿತು. ಆದರೆ ಈಗ 5ಲಕ್ಷವೂ ಇಲ್ಲ ಎಂದು ಸರಕಾರದ ಮೇಲೆ ಹೇಳಿದ ಸರ್ವೆಯೇ ಹೇಳುತ್ತಿದೆ!


'ಸ್ವತಂತ್ರ' ಅಧ್ಯಯನವಲ್ಲ ಪ್ರಾಯೋಜಿತ ಅಧ್ಯಯನ

ಪ್ರಧಾನ ಮಂತ್ರಿಗಳು ಈ 'ಸ್ವತಂತ್ರ' ಅಧ್ಯಯನದ ಪ್ರಸ್ತಾಪ ಮಾಡಿದರು. ಇದು ಐಐಎಂ, ಬೆಂಗಳೂರಿನ ಪ್ರೊ. ಪುಲಕ್ ಘೋಷ್ ಮತ್ತು ಭಾರತ ಸ್ಟೇಟ್ ಬ್ಯಾಂಕ್‌ನ ಮುಖ್ಯ ಆರ್ಥಿಕ ತಜ್ಞ ಸೌಮ್ಯಕಾಂತಿ ಘೋಷ್ ಜಂಟಿಯಾಗಿ ಮಾಡಿದ ಹೊಸದೊಂದು ಅಧ್ಯಯನದಲ್ಲಿ ಕಂಡು ಹಿಡಿದ ಹೊಸ 'ಸತ್ಯ.'! ಇದು ನೌಕರರ ಭವಿಷ್ಯನಿಧಿ ಚಂದಾದದಾರ ಮಾಹಿತಿಯ ಆಧಾರದಲ್ಲಿ ಕಂಡು ಬಂದ 'ಸತ್ಯ' ಎನ್ನಲಾಗಿದೆ. ಆದರೆ ಈ ಮಾಹಿತಿ ಸಾರ್ವಜನಿಕವಾಗಿ ಲಭ್ಯವಿಲ್ಲ. ಆದ್ದರಿಂದ ಈ ಅಧ್ಯಯನದ ಪ್ರಾಮಾಣಿಕತೆಯ ಬಗ್ಗೆ ಏನೂ ಹೇಳಲು ಸಾಧ್ಯವಿಲ್ಲ ಎಂದು ಹಲವು ಆರ್ಥಿಕ ತಜ್ಞರು ಹೇಳಿರುವುದಾಗಿ ವರದಿಯಾಗಿದೆ. ಹಾಗಿದ್ದರೆ ಯಾರಿಗೂ ಸಿಗದ ಈ ಮಾಹಿತಿ ಈ 'ಸ್ವತಂತ್ರ' ಅಧ್ಯಯನಕ್ಕೆ ಲಭ್ಯವಾದದ್ದು ಹೇಗೆ?

ವಾಸ್ತವವಾಗಿ ಇದು ಸ್ವತಂತ್ರ ಅಧ್ಯಯನವೇ ಅಲ್ಲ, ಸರಕಾರೀ ಪ್ರಾಯೋಜಿತ 'ಅಧ್ಯಯನ' ಎಂಬುದೀಗ ಬೆಳಕಿಗೆ ಬಂದಿದೆ.

ಕಳೆದ ಅಕ್ಟೋಬರಿನಲ್ಲಿ ಪ್ರಧಾನ ಮಂತ್ರಿಗಳ ಕಚೇರಿ ಉದ್ಯೋಗ ಮಾಹಿತಿಯ ಬಗ್ಗೆ ನೇರ ಮತ್ತು ಪರೋಕ್ಷ ಚಿಂತನೆಗೆ ತ್ವರಿತ ಸೂಚಕಗಳನ್ನು ಕೊಡುವಂತೆ ನೀತಿ ಆಯೋಗವನ್ನು ಕೇಳಿತಂತೆ. 'ನೀತಿ ಆಯೋಗ' ಈ 'ಸಂಶೋಧಕ'ರಿಗೆ ನೌಕರರ ಭವಿಷ್ಯ ನಿಧಿ ಸಂಘಟನೆಯ ಬಳಿಯಿದ್ದ ಖಾಸಗಿಯವರಿಗೆ ಕೊಡದಿರುವ ಈ ಮಾಹಿತಿಯನ್ನು ಲಭ್ಯಗೊಳಿಸಿತು. ಇದನ್ನು ಖಾಸಗಿಯವರಿಗೆ ಸ್ವತಃ ನೀತಿ ಆಯೋಗವೇ ಒದಗಿಸಿತು ಎಂಬುದು ನೌಕರರ ಭವಿಷ್ಯ ನಿಧಿ ಸಂಘಟನೆಗೆ ಇದುವರೆಗೂ ತಿಳಿದಿರಲಿಲ್ಲವಂತೆ. ಈಗಲೇ ಅವರಿಗೂ ತಿಳಿದಿರುವುದು.

ಏಕೆ ಇಷ್ಟೆಲ್ಲ ಕಸರತ್ತು? ಚುನಾವಣಾ ಬೊಗಳೆ ಸ್ವಲ್ಪ ಮಟ್ಟಿಗಾದರೂ ಕೇವಲ ಬೊಗಳ ಅಲ್ಲ್ ಎಂದು ತೋರಿಸಲಿಕ್ಕಾಗಿ?



"ಮೇಕ್ ಇನ್ ಇಂಡಿಯಾ' ಮಂದಿಯ ಉದ್ಯೋಗ ಕೊಲ್ಲುವ ನಿರ್ಧಾರ"

21 ದೊಡ್ಡ ಸರಕಾರೀ ಮುದ್ರಣಾಲಯಗಳು ಬಂದ್!

ಕೇಂದ್ರ ಸರಕಾರ ಪ ರೈಲ್ವೆ ಪ್ರಿಂಟಿಂಗ್ ಪ್ರೆಸ್‌ಗಳನ್ನು ಮತ್ತು 12 ಕೇಂದ್ರ ಸರಕಾರೀ ಪ್ರೆಸ್‌ಗಳನ್ನು ಮುಚ್ಚಲು ನಿರ್ಧರಿಸಿದೆಯಂತೆ.

ರೈಲ್ವೆ ಇಲಾಖೆ 3 ಟಿಕೆಟ್ ಮುದ್ರಿಸುವ ಮತ್ತು 6 ಸಾಮಾನ್ಯ ಮುದ್ರಣಾಲಯಗಳನ್ನು ಮುಮದಿನ 6 ತಿಂಗಳೊಳಗೆ ಮುಚ್ಚಲಾಗುವುದು ಎಂದು ಅಧಿಸೂಚನೆ ಹೊರಡಿಸಿದೆ. ಅಂದರೆ ಇನ್ನು ಮುಂದೆ ಟಿಕೆಟ್‌ಗಳು ಇರುವುದಿಲ್ಲ ಎಂದಲ್ಲ, ಅವನ್ನು 'ಆರಿಸಿದ' ಖಾಸಗಿಯವರಿಗೆ ಕೊಡಲಾಗುವುದು.

ನಗರಾಭಿವೃದ್ಧಿ ಇಲಾಖೆ ಈಗ ಕಾರ್ಯನಿರ್ವಹಿಸುತ್ತಿರುವ 12 ಮುದ್ರಣಾಲಯಗಳನ್ನು ಮುಚ್ಚು ಪ್ರಕ್ರಿಯೆ ಆರಂಭವಾಗಿದೆ ಎಂದಿದೆ.

ಅಂದರೆ ಈ 'ಮೇಕ್ ಇನ್ ಇಂಡಿಯಾ ಮಂದಿ ಸರಕಾರೀ ವಯದಲ್ಲಿರುವ ಗಣಮಟ್ಟದ ತಯಾರಿಕಾ ಸಾಮರ್ಥ್ಯಗಳನ್ನು ಕೇವಲ ದೊಡ್ಡ ಖಾಸಗಿ ಕುಳಗಳು ಸರಕಾರೀ ವೆಚ್ಚದಲ್ಲಿ ಲಾಭ ಮಾಡಿಕೊಳ್ಳು ಕ್ರಮೇಣ ನಾಶಮಾಡುತ್ತಿದೆ, ಇದು ಉದ್ಯೋಗಗಳನ್ನು ಕೊಲ್ಲುವ ಧೋರಣೆ ಎಂದು ಸಿಐಟಿಯು ಬಲವಾಗಿ ಖಂಡಿಸಿದೆ.

.....ಖಾಸಗೀಕರಣವಾಲಾಗಳಿಗೆ ಪ್ರಶ್ನೆ: ಪಂಜಾಬ್ ನ್ಯಾಶನಲ್ ಬ್ಯಾಂಕನ್ನು ನೀರವ್ ಮೋದಿಗೆ ವಹಿಸಿ ಕೊಡಬೇಕೋ ಅಥವ ಅಂಬಾನಿಗೋ?

ಪುಟ 7 ರಿಂದ

ನೀರವ್ ಮೋದಿಗೇ ಕೊಡಬೇಕೆಂದೆ?

*** ಸಾರ್ವಜನಿಕ ವಲಯದ ಕೆಟ್ಟ ಸಾಲಗಳ 84% ಕಾರ್ಪೊರೇಟ್‌ಗಳದ್ದು .ಪ್ರತಿ ವರ್ಷ ಬ್ಯಾಂಕುಗಳು ಈ ಕುಳಗಳ ಸುಸ್ತಿ ಸಾಲಗಳನ್ನು ರೈಟ್‌ಆಫ್ ಮಾಡುತ್ತಿದ್ದಾರೆ. ಈ ಫಿಕಿ, ಅಸೊಚಾಂ ಮಂದಿ ತಮ್ಮ ಸದಸ್ಯರಿಗೆ ಪ್ರಾಮಾಣಿಕರಾಗಿರಿ, ಪಡೆದ ಸಾಲಗಳನ್ನು ತೀರಿಸಿರಿ ಎಂದೇಕೆ ಹೇಳುವುದಿಲ್ಲ? ವಾಸ್ತವವಾಗಿ ಇದೇ ಒಂದು ಅತಿ ದೊಡ್ಡ ಹಗರಣ.**

* ಆರ್‌ಬಿಐ ಬ್ಯಾಂಕುಗಳಿಗೆ ಹಲವಾರು ಕ್ರಮಗಳನ್ನು ಹಾಕಿವೆ. ಆದರೆ ಅವು ಯಾವವೂ ಬ್ಯಾಂಕುಗಳಿಗೆ ನೆರವಾಗಿಲ್ಲ, ಬದಲಿಗೆ ಕಾರ್ಪೊರೇಟ್‌ಗಳಿಗೆ ಮತ್ತಷ್ಟು ಲೂಟಿಗೆ ನೆರವಾಗಿವೆಯೇಕೆ?


*** ಈ ಸಾಲ ಹಿಂದಿರುಗಿಸದ ಕಾರ್ಪೊರೇಟ್‌ಗಳ ಹೆಸರುಗಳನ್ನು ಆರ್‌ಬಿಐ ಪ್ರಕಟಿಸಲು ಹಿಂಜರಿಯುವದೇಕೆ ಮತ್ತು ಅವರು ದೇಶ ಬಿಟ್ಟು ಹೋಗಲು ಬಿಡುವುದೇಕೆ?**

* ಈ ಹಿಂದೆ ಪ್ರಧಾನಿಗಳ ವಿದೇಶಿ ಪ್ರವಾಸಗಳಲ್ಲಿ ಜೊತೆ ಹೋಗುವ ಉದ್ಯಮಿಗಳನ್ನು ಉದ್ಯಮಿಗಳ ಸಂಘಗಳು ಆಯ್ಕೆ ಮಾಡುತ್ತಿದ್ದವು, ಈಗ ಪ್ರಧಾನಿಗಳ ಕಚೇರಿಯೇ ಆಯ್ಕೆ ಮಾಡುತ್ತಿರುವುದೇಕೆ?

* ದೇಶದ ಆರ್ಥಿಕ ವ್ಯವಸ್ಥೆಯ ದುರುಪಯೋಗ ಮಾಡಿಕೊಳ್ಳುವ ಉದ್ಯಮಿಗಳನ್ನು ಆಯ್ಕೆ ಮಾಡುವುದೇಕೆ? ಅವೇ ಉದ್ಯಮಿಗಳು ವಿದೇಶಗಳಲ್ಲಿ ಕಾಂಟ್ರಾಕ್ಟುಗಳನ್ನು ಪಡೆಯುತ್ತಿರುವುದು ಹೇಗೆ?

ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ(ಎಐಬಿಒಸಿ) ಬ್ಯಾಂಕಿಂಗ್ ವಲಯ ಮತ್ತು ನಮ್ಮ ಆರ್ಥಿಕ ವ್ಯವಸ್ಥೆಯನ್ನು ಉಳಿಸಲು ತಕ್ಷಣವೇ ಮೂರು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಭಿಪ್ರಾಯ ಪಟ್ಟಿದೆ:

1. ಸಾಲ ಮರುಪಾವತಿ ಮಾಡದ ದೊಡ್ಡ ಕಾರ್ಪೊರೇಟ್‌ಗಳ



ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು

ಹೆಸರುಗಳನ್ನು ಪ್ರಕಟಿಸಬೇಕು. ಗೃಹ ಮಂತ್ರಾಲಯ ಆ ಕಂಪನಿಗಳ ಡೈರೆಕ್ಟರುಗಳ ಪಾಸ್‌ಪೋರ್ಟ್‌ಗಳಲ್ಲಿ 'ಎಮಿಗ್ರೇಶನ್ ಕ್ಲಿಯರೆನ್ಸ್ ರಿಕ್ವಾಯರ್ಡ್' (ಹೊರ ಹೋಗಲು ಮಂಜೂರಾತಿ ಬೇಕು) ಎಂದು ನಮೂದಿಸಬೇಕು.

2. ಎನ್‌ಪಿಎ ನಿಯಮಗಳ ಮರು ಪರಿಶೀಲನೆ ಮಾಡಬೇಕು.

3. ಬ್ಯಾಂಕ್ ನೌಕರರ, ಅಧಿಕಾರಿಗಳ ಮತ್ತು ನಾಮಿನಿಗಳ ಪ್ರತಿನಿಧಿಗಳನ್ನು ನಿರ್ದೇಶಕರ ಮಂಡಳಿಗಳಲ್ಲಿ ಸದಸ್ಯರಾಗಿ ನೇಮಿಸಬೇಕು. ಆರ್‌ಬಿಐ ಎಕ್ಸಿಕ್ಯೂಟಿವ್‌ಗಳು ಮತ್ತು ಹಣಕಾಸು ಇಲಾಖೆಯ ಅಧಿಕಾರಿಗಳನ್ನು ಬ್ಯಾಂಕ್ ನಿರ್ದೇಶಕ ಮಂಡಳಿಯಿಂದ ತೆಗೆಯಬೇಕು. ಏಕೆಂದರೆ ಅವರ ಕೆಲಸ ಮೇಲುಸ್ತುವಾರಿ. ಆ ಕೆಲಸವನ್ನು ಅವರು ಮಾಡುತ್ತಿಲ್ಲ.

ನಮಗೆ ಉತ್ತಮ ಬ್ಯಾಂಕಿಂಗ್ ವ್ಯವಸ್ಥೆ, ಉತ್ತಮ ರಿಪೋರ್ಟಿಂಗ್, ಉತ್ತಮ ಉಸ್ತುವಾರಿ ಮತ್ತು ಇವಕ್ಕೆಲ್ಲ ನೆರವಾಗುವ ಉತ್ತಮ ತಂತ್ರಜ್ಞಾನ ಬೇಕು, ಖಾಸಗೀಕರಣವಲ್ಲ. ಈ ಖಾಸಗೀಕರಣದ ಕೂಗನ್ನು ಉಪೇಕ್ಷಿಸಿರಿ ಎಂದು ಎಐಬಿಒಸಿ ಹೇಳಿದೆ.

ಭಾರತ ಸರಕಾರ ಎನ್‌ಪಿಎ ಸಮಸ್ಯೆ ಎದುರಿಸಲು 2.11 ಲಕ್ಷ ಕೋಟಿ ರೂ.ಗಳನ್ನು ಕೊಡುವುದಕ್ಕೆ ಫಿಕಿ ಅಸೊಚಾಂಗಳ ವಿರೋಧವಿದೆ. ಅಷ್ಟೊಂದು ದೊಡ್ಡ ಮೊತ್ತ ಏಕೆ, ಬದಲು ಖಾಸಗೀಕರಿಸಿ ಎಂಬುದು ಅವರ ಸಲಹೆ. ತಮ್ಮ ಸುಸ್ತಿದಾರ ಗೆಳೆಯರಿಂದ ವಸೂಲಿ ಮಾಡಿ ಎಂದೇನೂ ಅವರು ಹೇಳುತ್ತಿಲ್ಲ.

ಇರಲಿ. ಭಾರತದಲ್ಲಿ ಬ್ಯಾಂಕ್‌ಗಳನ್ನು ಇಕ್ಕಟ್ಟಿನಿಂದ ಪಾರು ಮಡಲು ಮಾಡಿರುವ ನೇರ–ಪರೋಕ್ಷ ಖರ್ಚುಗಳ ಪ್ರಮಾಣ ಜಗತ್ತಿನ ವಿವಿಧ ದೇಶಗಳಲ್ಲಿ ಅದರಲ್ಲೂ ಖಾಸಗಿ ಬ್ಯಾಂಕುಗಳ ಪ್ರಾಬಲ್ಯ ವಿರುದ ದೇಶಗಳಲ್ಲಿ ಮಾಡಿದ ಖರ್ಚುಗಳಿಗೆ ಹೋಲಿಸಿದರೆ ಬಹಳ ಕಡಿಮೆ ಎನ್ನುವ ಸಂಗತಿಯತ್ತ ಎಐಬಿಒಸಿ ಗಮನ ಸೆಳೆದಿದೆ. 1970 ರಿಂದ 2011 ರ ನಡುವೆ ಜಗತ್ತಿನ ವಿವಿಧ ದೇಶಗಳಲ್ಲಿ ಬಿಕ್ಕಟ್ಟಿಗೊಳಗಾದ ಬ್ಯಾಂಕುಗಳನ್ನು ಪಾರು ಮಡಲು ಸಂಬಂಧಪಟ್ಟ ಸರಕಾರಗಳು ಎಷ್ಟು ಖರ್ಚು ಮಾಡಿವೆ ಎಂಬುದರ ಅಧ್ಯಯನ ಒಂದನ್ನು ಐಎಂಎಫ್ ಪ್ರಕಟಿಸಿದೆ. ಅದರ ಪ್ರಕಾರ ಈ ಖರ್ಚುಗಳ ಜಾಗತಿಕ ಸರಾಸರಿ ಜಿಡಿಪಿಯ 6.8%. ಹೊಸದಾಗಿ ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆಗಳಲ್ಲಿ 10% ದ ವರೆಗೂ ಹೋಗಿದೆ. ಆದರೆ ಭಾರತದಲ್ಲಿ ಇದು 1% ಕ್ಕಿಂತಲೂ ಕಡಿಮೆ. ಈಗ ಮೋದಿ ಸರಕಾರ ಎರಡು ವರ್ಷಗಳಲ್ಲಿ ಕೊಡುತ್ತೇನೆಂದಿರುವ ಹಣ ಜಿಡಿಪಿಯ 0.5% ಕ್ಕಿಂತಲೂ ಕಡಿಮೆ. ಇದಕ್ಕೆ ಒಂದು ಮುಖ್ಯ ಕಾರಣ ಸಾರ್ವಜನಿಕ ಒಡೆತನ.

ಆದರೂ ಫಿಕಿ ಮತ್ತು ಅಸೊಚಾಂ ತಮ್ಮ ಸದಸ್ಯರಿಂದ ಬಾಕಿಗಳನ್ನು ವಸೂಲಿ ಮಾಡಿಸಿಕೊಡುವುದೇ ಉತ್ತಮ ದಾರಿ, ನಿಜವಾಗಿಯೂ ದೇಶಪ್ರೇಮದ ಕೆಲಸ ಎಂಬುದರಲ್ಲಿ ಸಂದೇಹವೇನೂ ಇಲ್ಲ.

ಐಎಲ್‌ಸಿ ಸಮ್ಮೇಳನ ಮುಂದಕ್ಕೆ –ಕಾರ್ಮಿಕ ಸಂಘಗಳಿಂದ ಪ್ರಧಾನಿ ಭಾಷಣ ಬಹಿಷ್ಕಾರದ ಭಯ?

ಫೆಬ್ರುವರಿ 26 ಮತ್ತು 27ರಂದು ನಡೆಯಬೇಕಾಗಿದ್ದ 47ನೇ ಭಾರತೀಯ ಶ್ರಮ ಸಮ್ಮೇಳನ(ಇಂಡಿಯನ್ ಲೇಬರ್ ಕಾನ್ಫರೆನ್–ಐಎಲ್‌ಸಿ)ವನ್ನು ಮುಂದೂಡಲಾಗಿದೆ ಎಂದು ವರದಿಯಾಗಿದೆ. ಇದನ್ನು ಉದ್ಘಾಟಿಸಬೇಕಾಗಿದ್ದ ಪ್ರಧಾನಿಗಳ ಭಾಷಣವನ್ನು ಬೊಗಳೆಗಳು ಸಾಕು ಎಂದು ಕಾರ್ಮಿಕ ಸಂಘಟನೆಗಳು ಬಹಿಷ್ಕರಿಸಬಹುದೆಂಬ ಭಯದಿಂದ ಹೀಗೆ ಮಾಡಲಾಗಿದೆಯೇ? ಕೆಲವು ವರದಿಗಳ ಪ್ರಕಾರ ಹೌದು. (ಸೋಮೇಶ್ ಝಾ, ಬಿಸಿನೆಸ್ ಸ್ಟಾಂಡರ್ಡ್, ಫೆ.21)

ಐಎಲ್‌ಸಿ ದೇಶದಲ್ಲಿ ಕಾರ್ಮಿಕ ವಿಷಯಗಳನ್ನು ಚರ್ಚಿಸಲೆಂದು ಇರುವ ಅತ್ಯುನ್ನತ ತ್ರಿಪಕ್ಷೀಯ ಸಮಿತಿ– ಅಂದರೆ ಸರಕಾರ , ಕಾರ್ಮಿಕ ಸಂಘಟನೆಗಳು ಮತ್ತು ಮಾಲಕರ ಪ್ರತಿನಿಧಿಗಳಿರುವ ಈ ವ್ಯವಸ್ಥೆ. ಯ 47ನೇ ಸಮ್ಮೇಳನ ಉದ್ಯೋಗ ಮತ್ತು ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಯೋಜನೆಗಳ ಕುರಿತು ಚರ್ಚೆ ಮಾಡಬೇಕಿತ್ತು.

ಕಳೆದ ಮೂರು ವರ್ಷಗಳಿಂದ ಐಕ್ಯ ಕಾಮಿಕ ಕಾರ್ಯಾಚರಣೆಗಳಿಂದ ದೂರ ಉಳಿದಿದ್ದ ಸಂಘ ಪರಿವಾರಕ್ಕೆ ಸೇರಿದ ಬಿಎಂಎಸ್‌ನ ಮುಖಂಡರಿಗೆ ನವಂಬರ್ ತಿಂಗಳ ಕಾರ್ಮಿಕರ ಮಹಾಪಡಾವ್ ನಂತರ ಭಾರೀ ಮುಜುಗರವಾದಂತಿದೆ. 'ತಮ್ಮ ' ಸರಕಾರದ ಕಾರ್ಮಿಕ–ವಿರೋಧಿ ನಿರ್ಲಕ್ಷ್ಯವನ್ನು ಸಮರ್ಥಿಸಿಕೊಳ್ಳುವುದು ಈಗ ಅಸಾಧ್ಯವಾದ್ದರಿಂದ ಈ ಐಎಲ್‌ಸಿ ಯನ್ನು ಬಹಿಷ್ಕರಿಸುವುದಾಗಿ ಅದು ಹೇಳಿತ್ತು.

ಇತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಐಎನ್‌ಟಿಯುಸಿ ಯನ್ನು ಈ ಸಮ್ಮೇಳನ್ನಕ್ಕೆ ಆಹ್ವಾನಿಸದಿರುವುದನ್ನು ಪ್ರತಿಭಟಿಸಿ ಮತ್ತು ಹಿಂದಿನ ಐಎಲ್‌ಸಿಗಳಲ್ಲಿ ಕೈಗೊಂಡ ನಿರ್ಧಾರಗಳನ್ನು ಸರಕಾರ ಸಂಪೂರ್ಣವಾಗಿ ಉಪೇಕ್ಷಿಸುವುದನ್ನು ಪ್ರತಿಭಟಿಸಿ ಫೆ.12ರಂದು ಕಾರ್ಮಿಕ ಮಂತ್ರಿಗಳಿಗೆ ಪತ್ರ ಬರೆದಿದ್ದವು.

"ಭಾರತೀಯ ಶ್ರಮ ಸಮ್ಮೇಳನ ದ ಪ್ರಯತ್ನವನ್ನೇ ಒಂದು ತಮಾಷೆಯ ಮಟ್ಟಕ್ಕೆ ಇಳಿಸಲಾಗಿದೆ, ಈ ಮೂಲಕ ಸರಕಾರ ತನ್ನ ವರ್ತನೆಯನ್ನು ಸರಿಪಡಿಸಿಕೊಳ್ಳುವ ವರೆಗೆ ಮತ್ತು ಭಾಗವಹಿಸುವಲ್ಲಿ ಪಕ್ಷಪಾತದ ವಿಷಯದಲ್ಲಾಗಲೀ ಹಾಗೂ ಸತತವಾಗಿ ಹಿಂದಿನ ಐಎಲ್‌ಸಿಗಳ ಒಮ್ಮತದ ಶಿಫಾರಸುಗಳ ಜಾರಿ ಮಾಡದಿರುವ ವಿಷಯದಲ್ಲಾಗಲೀ ಸರಿಪಡಿಕೆ ಕ್ರಮಗಳನ್ನು ತೆಗೆದುಕೊಳ್ಳುವ ವರೆಗೆ ಈ ಸರಕಾರದೊಂದಿಗೆ ಭಾಗಿಯಾಗಬೇಕೇ ಎಂಬ ಪ್ರಶ್ನೆ ಎದ್ದಿದೆ " ಎಂದು ಸಿಐಟಿಯು ಸೇರಿದಂತೆ ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳು ಈ ಪತ್ರದಲ್ಲಿ ತಿಳಿಸಿವೆ.

ಒಟ್ಟಿನಲ್ಲಿ ಇವು ದೇಶದ ಕೋಟ್ಯಂತರ ಕಾರ್ಮಿಕರಿಗಂತೂ ಒಳ್ಳೆಯ ದಿನಗಳಲ್ಲ ಎಂಬುದಕ್ಕೆ ಸ್ವತಃ ಸಂಘ ಪರಿವಾರದ ಒಂದು ಸಂಘಟನೆಯೂ ಸರ್ಟಿಫಿಕೆಟ್ ನೀಡಿದಂತಾಗಿದೆ.

ಷೇರು ಮಾರುಕಟ್ಟೆಗಳ ಹುಚ್ಚು ಸವಾರಿ



ಫೆಬ್ರವರಿ 2, 2018 ರ ಶುಕ್ರವಾರ ಬೆಳಗ್ಗೆ ಬಿಡುಗಡೆಯಾದ ಅಮೇರಿಕಾದ ಉದ್ಯೋಗ ಮಾರುಕಟ್ಟೆಗೆ ಸಂಬಂಧಿಸಿದ ಅಂಕಿ ಅಂಶಗಳ ವರದಿಯೇ ಮುಂಬೈ ಸೇರಿದಂತೆ ಜಗತ್ತಿನಾದ್ಯಂತ ಷೇರು ಪೇಟೆಯಲ್ಲಾದ ಮಾರಣಾಂತಿಕ ಹಲ್ಲೆಯ ಹಿಂದಿರುವ ಅಂಶವೆಂದು ಹೇಳಲಾಗಿದೆ. ಇಲ್ಲಿ ಬಹಳ ಸ್ವಾರಸ್ಯಕರವಾಗಿ ಕಾಣುವ ಅಂಶವೆಂದರೆ, ಸಾಮಾನ್ಯ ವೇತನದಾರರಿಗೆ ಸಿಕ್ಕಿರುವ ಹೆಚ್ಚಳವು ಬಹಳ ಸಣ್ಣ ಪ್ರಮಾಣದ್ದು. ಜೀವನ ನಿರ್ವಹಣೆಗಾಗಿ ದುಡಿಮೆಗಾರರು ಪಡೆದ ಸಣ್ಣ ಪ್ರಮಾಣದ ವೇತನ ಹೆಚ್ಚಳದ ಒಂದು ವರದಿಗೆ ಹಣಕಾಸು ಬಂಡವಾಳವು ತೋರಿಸುವ ಈ ರೀತಿಯ ಪ್ರತಿಕ್ರಿಯೆಯು ಬಂಡವಾಳಶಾಹಿಯ ಸ್ವಭಾವವನ್ನೇ ತೆರೆದಿಡುತ್ತದೆ – ಬಂಡವಾಳಶಾಹಿಯು ತಾನು ಸ್ಥಿರವಾಗಿ ಉಳಿಯಲು, ಜನಸಂಖ್ಯೆಯ ಒಂದು ದೊಡ್ಡ ವಿಭಾಗವು ನಿರುದ್ಯೋಗಿಗಳಾಗಿಯೇ ಉಳಿಯುವಂತೆಯೂ ಮತ್ತು ದುಡಿಯುವವರಿಗೆ ಸಾಧ್ಯವಾದಷ್ಟು ಕಡಿಮೆ ವೇತನ ಸಿಗುವಂತೆಯೂ ನೋಡಿಕೊಳ್ಳುತ್ತದೆ.

ಸುಬಿನ್ ಡೆನಿಸ್ ಭಾವಾನುವಾದ: ಕೆ.ಎಂ.ನಾಗರಾಜ್ ಕೃಪೆ: ನ್ಯೂಸ್‌ಕ್ಲಿಕ್, ಫೆ. 7, 2018

ಈ ತಿಂಗಳ ಮೊದಲ ವಾರದಲ್ಲಿ ಹೆಚ್ಚು ಕಮ್ಮಿ ಎಲ್ಲಾ ದೇಶಗಳ ಷೇರು ಮಾರುಕಟ್ಟೆಗಳು ಇದ್ದಕ್ಕಿಂದ್ದಂತೆಯೆ ಧೊಪ್ಪನೆ ಕುಸಿದು ಬಿದ್ದವು. ದುಂಡನೆಯ ವಸ್ತು ಇಳಿಜಾರಿನಲ್ಲಿ ಉರುಳುವ ಹಾಗೆ ಷೇರು ಮಾರುಕಟ್ಟೆಗಳ ಎಲ್ಲಾ ಸೂಚ್ಯಂಕಗಳೂ ಇಳಿದವು. ಷೇರು ಮಾರುಕಟ್ಟೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಸೂಚ್ಯಂಕಗಳಿಗೆ ಅಮೆರಿಕಾದ ಡೊ ಜೋನ್ಸ್ ಇಂಡಸ್ಟ್ರಿಯಲ್ ಅವರೇಜ್ ಸೂಚ್ಯಂಕವೇ ಹಿರಿಯಣ್ಣ. ಅಮೆರಿಕಾದ ಮೂವತ್ತು ಅತಿ ದೊಡ್ಡ ಉದ್ದಿಮೆಗಳ ಷೇರುಗಳ ವಹಿವಾಟುಗಳು ಯಾವ ಮಟ್ಟದಲ್ಲಿ ನಡೆದವು ಎಂಬುದನ್ನು ಸೂಚಿಸುವ ಮತ್ತು ಹೋಲಿಕೆಯ ಉದ್ದೇಶಕ್ಕಾಗಿ ವಿಶ್ವದ ಎಲ್ಲ ಷೇರು ಮಾರುಕಟ್ಟೆಗಳೂ ವ್ಯಾಪಕವಾಗಿ ಬಳಸುವ ಈ ಸೂಚ್ಯಂಕವೇ ಒಂದು ಮಾನ ದಂಡ. ಫೆಬ್ರವರಿ 2, 2018 ರ ಶುಕ್ರವಾರ ಈ ಸೂಚ್ಯಂಕವು 666 ಅಂಕಗಳಷ್ಟು ಕೆಳಗೆ ಇಳಿಯಿತು. ನಂತರ, ಸೋಮವಾರ (04.02.2018) ಈ ಸೂಚ್ಯಂಕದಲ್ಲಿ 1175 ಅಂಕಗಳಷ್ಟು ಮತ್ತೊಮ್ಮೆ ಇಳಿಕೆಯಾಯಿತು. ಈ ಇಳಿಕೆಯು, ಷೇರು ಪೇಟೆಯ ಇತಿಹಾಸದಲ್ಲಿ ಒಂದೇ ದಿನದಲ್ಲಿ ಆದ ಅತಿ ಹೆಚ್ಚಿನ ಇಳಿಕೆಯ ದಾಖಲೆ.

ಇಂತಹ ಒಂದು ಸಂಜ್ಞೆಗಾಗಿಯೇ ಕಾಯುತ್ತಿದ್ದವೋ ಎಂಬಂತೆ, ಕೆಲವೇ ಗಂಟೆಗಳಲ್ಲಿ, ಜಪಾನಿನ ಸೂಚ್ಯಂಕ ನಿಕ್ಕಿ ಶೇ. 4.7ರಷ್ಟು ಕುಸಿಯಿತು; ಹಾಂಗ್‌ಕಾಂಗ್‌ನ ಸೂಚ್ಯಂಕ ಹ್ಯಾಂಗ್‌ಸೆಂಗ್ ಶೇ. 5.1ರಷ್ಟು ಕುಸಿಯಿತು; ದಕ್ಷಿಣ ಕೊರಿಯಾದ ಸೂಚ್ಯಂಕ ಕೋಪ್ಸಿ ಶೇ. 3.85ರಷ್ಟು ಕುಸಿಯಿತು. ಜರ್ಮನಿ, ಇಂಗ್ಲೆಂಡ್ ಮುಂತಾದ ಹಲವಾರು ದೇಶಗಳ ಷೇರು ಸೂಚ್ಯಂಕಗಳು ದೊಡ್ಡ ಪ್ರಮಾಣದ ಇಳಿಕೆ ಕಂಡವು. ಮರು ದಿನ ಮಂಗಳವಾರ (06.02.2018) ಭಾರತದಲ್ಲಿ, ಮುಂಬೈ ಷೇರು ಸೂಚ್ಯಂಕ ಬಿಎಸ್‌ಇ 561 ಅಂಕಗಳಷ್ಟು ಕೆಳಗಿಳಿಯಿತು. ನಂತರದ ಕೆಲವು ದಿನಗಳಲ್ಲಿ ಅಮೇರಿಕಾ ಮತ್ತು ಇತರ ದೇಶಗಳ ಷೇರು ಮಾರುಕಟ್ಟೆಯಲ್ಲಿ ಷೇರುಗಳ ಬೆಲೆ ಏರಿಕೆಯಾಗಿ ಆಯಾ ದೇಶಗಳ ಸೂಚ್ಯಂಕಗಳು ಏರಿಕೆ ಕಂಡಿವೆ.

ಫೆಬ್ರವರಿ 2, 2018 ರ ಶುಕ್ರವಾರ ಬೆಳಗ್ಗೆ ಬಿಡುಗಡೆಯಾದ ಅಮೇರಿಕಾದ ಉದ್ಯೋಗ ಮಾರುಕಟ್ಟೆಗೆ ಸಂಬಂಧಿಸಿದ ಅಂಕಿ ಅಂಶಗಳ ವರದಿಯೇ ಷೇರು ಪೇಟೆಯಲ್ಲಾದ ಈ ಮಾರಣಾಂತಿಕ ಹಲ್ಲೆಯ ಹಿಂದಿರುವ ಅಂಶವೆಂದು ಹೇಳಲಾಗಿದೆ. ಅಷ್ಟಕ್ಕೂ, ಈ ವರದಿಯ ಪ್ರಕಾರ, ಜನವರಿ 2018ರವರೆಗೆ ಶೇ. 4.1ರಷ್ಟಿರುವ ಅಮೇರಿಕಾದ ನಿರುದ್ಯೋಗದ ಮಟ್ಟದಲ್ಲಿ ಬದಲಾವಣೆ ಏನೂ ಆಗಿಲ್ಲ. ಆದರೆ, ಗಂಟೆಯ ಲೆಕ್ಕದಲ್ಲಿ ಅಲ್ಲಿನ ಕೂಲಿಯ ಸರಾಸರಿ ಗಳಿಕೆಯಲ್ಲಿ 75 ಸೆಂಟ್ಸ್ (0.75 ಡಾಲರ್) ಹೆಚ್ಚಳವಾಗಿದೆ. ಹಿಂದಿನ ವರ್ಷದ ಇದೇ ಪರಿಸ್ಥಿತಿಗೆ ಹೋಲಿಸಿದರೆ, ಶೇ. 2.9ರಷ್ಟು ಹೆಚ್ಚಳವಾಗಿದೆ, ಅಷ್ಟೇ. ಇಷ್ಟು ಅಲ್ಪ ಪ್ರಮಾಣದ ಹೆಚ್ಚಳವನ್ನೇ 2009ರ ನಂತರದ ಅವಧಿಯಲ್ಲಿ ಆಗಿರುವ ಅತಿ ವೇಗದ ಹೆಚ್ಚಳ ಎಂದು ಗುರುತಿಸಲಾಗಿದೆ.

ದುಡಿಯುವ ಮಂದಿಗೆ ಅವರ ವೇತನದಲ್ಲಿ ಸಿಕ್ಕಿರುವ ಈ ಒಂದು ಸಣ್ಣ ಹೆಚ್ಚಳವೇ ಅಮೇರಿಕಾದ ಹಣಕಾಸು ಮಾರುಕಟ್ಟೆಗಳಿಗೆ ಕಿರಿ ಕಿರಿ ಉಂಟುಮಾಡಿದೆ. ಅವರು ದೆವ್ವದ ಕಾಟಕ್ಕೆ ಒಳಗಾದವರಂತೆ ಭಯ ಭೀತರಾಗಿದ್ದಾರೆ. ಅವರಿಗಿರುವ ಭಯ ಏನೆಂದರೆ, ವೇತನದಲ್ಲಿ ಹೆಚ್ಚಳವಾದರೆ ಹಣದುಬ್ಬರ ಉಂಟಾಗುತ್ತದೆ. ಹಣದುಬ್ಬರವೆಂದರೆ ಬೆಲೆ ಏರಿಕೆ. ಹಣಕಾಸು ಪ್ರಪಂಚದಲ್ಲಿ, ಹೂಡಿಕೆದಾರರಿಗೆ ಹಣದುಬ್ಬರ ಅಂದರೆ ಎಲ್ಲಿಲ್ಲದ ಭಯ. ಏಕೆಂದರೆ, ಹಣದುಬ್ಬರ ಏರಿದಂತೆಯೇ ಅವರು ಹಣಕಾಸು ಮಾರುಕಟ್ಟೆಯಲ್ಲಿ ಮಾಡಿರುವ ಹೂಡಿಕೆ–ಆಸ್ತಿಗಳ ಮೌಲ್ಯವು ಕುಗ್ಗುತ್ತದೆ. ಆದರೆ, ಇಲ್ಲಿ ಬಹಳ ಸ್ವಾರಸ್ಯಕರವಾಗಿ ಕಾಣುವ ಅಂಶವೆಂದರೆ, ಸಾಮಾನ್ಯ ವೇತನದಾರರಿಗೆ ಸಿಕ್ಕಿರುವ ಹೆಚ್ಚಳವು ಬಹಳ ಸಣ್ಣ ಪ್ರಮಾಣದ್ದು. ಹೇಳಿಕೊಳ್ಳುವಷ್ಟು ಅಲ್ಲವೇ ಅಲ್ಲ. ಅದನ್ನೇ ಬೆಟ್ಟದಂತೆ ಬಿಂಬಿಸುತ್ತಿದ್ದಾರೆ!

ದುಡಿಯುವವರ ವೇತನದಲ್ಲಿ ಆಗಿರುವ ಹೆಚ್ಚಳದ ಸಿಂಹ ಪಾಲು ಉನ್ನತ ಹುದ್ದೆಗಳಲ್ಲಿರುವ ಶೇ. 18ರಷ್ಟು ಮಂದಿಗೆ ಲಭಿಸಿದೆ. ಉಳಿದ ಶೇ. 82ರಷ್ಟು ಮಂದಿಗೆ



ಸಿಕ್ಕಿರುವ ಪಾಲು ಗುರುತಿಸಲಾರದಷ್ಟು ಕಡಿಮೆ ಇದೆ. ಇವರ ಹೆಚ್ಚಳದ ಪರಿಸ್ಥಿತಿ ಕಳೆದ ನಾಲ್ಕು ವರ್ಷಗಳಿಂದಲೂ ಹೀಗೆಯೇಇದೆ. ವಿಶೇಷವಾಗಿ, ಹಣಕಾಸು ವಲಯದ ಸೇವೆಯಲ್ಲಿರುವ ಇನ್ವೆಸ್ಟ್‌ಮೆಂಟ್ ಬ್ಯಾಂಕರ್ಸ್, ಷೆರ್ ಟ್ರೇಡರ್ಸ್ ಮುಂತಾದ ಉನ್ನತ ಹುದ್ದೆಗಳಲ್ಲಿರುವವರ ವೇತನವು ಕಳೆದ ಕೆಲವು ತಿಂಗಳುಗಳ ಅವಧಿಯಲ್ಲಿ ಗಣನೀಯವಾಗಿ ಹೆಚ್ಚಿದೆ. ವೇತನಗಳಲ್ಲಾಗಿರುವ ಈ ಬದಲಾವಣೆಯ ಕಾರಣವೇ ಷೇರು ಮಾರುಕಟ್ಟೆಗಳು ಈ ಪರಿಯಲ್ಲಿ ಕುಸಿಯಲು ಸಾಕಾಯಿತು. ಜೀವನ ನಿರ್ವಹಣೆಗಾಗಿ ದುಡಿಮೆಗಾರರು ಪಡೆದ ಸಣ್ಣ ಪ್ರಮಾಣದ ವೇತನ ಹೆಚ್ಚಳದ ಒಂದು ವರದಿಗೆ ಹಣಕಾಸು ಬಂಡವಾಳವು ತೋರಿಸುವ ಈ ರೀತಿಯ ಪ್ರತಿಕ್ರಿಯೆಯು ಬಂಡವಾಳಶಾಹಿಯ ಸ್ವಭಾವವನ್ನೇ ತೆರೆದಿಡುತ್ತದೆ – ಬಂಡವಾಳಶಾಹಿಯು ತಾನು ಸ್ಥಿರವಾಗಿ ಉಳಿಯಲು, ಜನಸಂಖ್ಯೆಯ ಒಂದು ದೊಡ್ಡ ವಿಭಾಗವು ನಿರುದ್ಯೋಗಿಗಳಾಗಿಯೇ ಉಳಿಯುವಂತೆಯೂ ಮತ್ತು ದುಡಿಯುವವರಿಗೆ ಸಾಧ್ಯವಾದಷ್ಟು ಕಡಿಮೆ ವೇತನ ಸಿಗುವಂತೆಯೂ ನೋಡಿಕೊಳ್ಳುತ್ತದೆ.

ಜೂಜುಗಾರಿಕೆಯ ಹಾವಳಿ

ಷೇರು ಮಾರುಕಟ್ಟೆಗಳು ಏರಿಳಿತಗಳಿಗೆ (ಚಂಚಲತೆ) ಒಳಗಾಗುವುದು ಸಾಮಾನ್ಯ. ಈ ಚಂಚಲತೆಯ ಮೇಲೆಯೇ (ಅಂದರೆ, ಮಾರುಕಟ್ಟೆಯ ಬೇರೆ ಬೇರೆ ಸೂಚ್ಯಂಕಗಳ ಏರಿಳಿತಗಳಿಗೆ ಸಂಬಂಧಿಸಿ) ಪಣ ಕಟ್ಟಿ ಹಣ ಮಾಡುವಂತಹ ಕೆಲವು ಜನಪ್ರಿಯ ಹಣಕಾಸು ಉತ್ಪನ್ನಗಳು(ಸಾಧನಗಳು/ಕಾಗದ ಪತ್ರಗಳು) ಬಳಕೆಯಲ್ಲಿವೆ. ಬೇರೆ ಬೇರೆ ಸೂಚ್ಯಂಕಗಳ ಏರಿಳಿತಗಳ (ಚಂಚಲತೆ) ಅಳತೆಗೇ ಮೀಸಲಾದ ಇನ್ನೊಂದು ಸೂಚ್ಯಂಕವಿದೆ. ಇದು ಮಾರುಕಟ್ಟೆಗಳ ಪ್ರಕ್ಷುಬ್ಧತೆಯನ್ನು (ಟರ್ಬುಲನ್ಸ್) ಅಳೆಯುತ್ತದೆ. ಈ ಸೂಚ್ಯಂಕದ ಮೆ?ಲೆ ಪಣ ಹೂಡುವ ಸಲುವಾಗಿಯೇ ಒಂದು ವಿಶೇಷವಾದ ಉತ್ಪನ್ನವನ್ನು ವಿನ್ಯಾಸಗೊಳಿಸಲಾಗಿದೆ. ಈ ಉತ್ಪನ್ನದ ಮೇಲೆ ಹೂಡಿಕೆ/ಬಾಜಿ ಮಾಡಿದಾಗ, ಪ್ರಕ್ಷುಬ್ಧತೆ ಕಡಿಮೆ ಇದ್ದಾಗ ಲಾಭವೂ ಮತ್ತು ಅದು ಏರಿದಾಗ ನಷ್ಟವೂ ಆಗುತ್ತದೆ. ಉದಾಹರಣೆಗೆ, ಕ್ರೆಡಿಟ್ ಸ್ಯೂಸೆ (ಸ್ವಿಸ್ ಬ್ಯಾಂಕ್) ನೀಡಿಕೆ ಮಾಡಿದ್ದ ಇಂತಹ ಒಂದು ಉತ್ಪನ್ನವು ಜನವರಿ 11, 2018 ರಂದು (ಗುರುವಾರ) ಅದರ ಉತ್ತುಂಗ ಮಟ್ಟದ ಬೆಲೆ 99 ಡಾಲರ್ ಇತ್ತು. ಮುಂದಿನ ಸೋಮವಾರ, ವಾಲ್ ಸ್ಟ್ರೀಟ್ ರಕ್ತದೋಕುಳಿಯ ನಂತರ, ಅದರ ಬೆಲೆ 10 ಡಾಲರ್‌ಗೆ ಕುಸಿಯಿತು. 2.2 ಬಿಲಿಯನ್ ಡಾಲರ್ ಒಟ್ಟು ಮೌಲ್ಯದ ಈ ಉತ್ಪನ್ನವು 2.1 ಬಿಲಿಯನ್ ಡಾಲರ್ (96%) ನಷ್ಟ ಅನುಭವಿಸಿತು. ಇದೇ ವರ್ಗಕ್ಕೆ ಸೇರಿದ ಜಪಾನಿನ ಒಂದು ಉತ್ಪನ್ನವೂ ಇದೇ ಪ್ರಮಾಣದ ನಷ್ಟ ಅನುಭವಿಸಿತು. ಜಪಾನಿನ ಅತಿ ದೊಡ್ಡ ದಲ್ಲಾಳಿ ಸಂಸ್ಥೆ ನೊಮೂರಾ ಹೋಲ್ಡಿಂಗ್ಸ್ ನೀಡಿಕೆ ಮಾಡಿದ್ದ ಉತ್ಪನ್ನವೂ, ವಾಲ್ ಸ್ಟ್ರೀಟ್ ರಕ್ತದೋಕುಳಿಯ ನಂತರ, ತನ್ನ 32 ಬಿಲಿಯನ್ ಯೆನ್‌ಗಳಷ್ಟು ಒಟ್ಟು ಮೌಲ್ಯದಿಂದ 1.3 ಬಿಲಿಯನ್ ಯೆನ್‌ಗಳಿಗೆ ಇಳಿಯಿತು. ನಂತರ, ಕ್ರೆಡಿಟ್ ಸ್ಯೂಸೆ ಮತ್ತು ನೊಮೂರಾ ಹೋಲ್ಡಿಂಗ್ಸ್ ಸಂಸ್ಥೆಗಳು ಈ ಉತ್ಪನ್ನವನ್ನು ರದ್ದು ಮಾಡಿವೆ.

ಹಣಕಾಸು ಮಾರುಕಟ್ಟೆಗಳು ವೇಗವಾಗಿ ಬೆಳೆಯುತ್ತಿವೆ. ಜೊತೆಯಲ್ಲಿ, ಏನಂದರೆ ಏನೂ ಚಟುವಟಿಕೆಗಳ ಮೇಲೂ ಬಾಜಿ ಉತ್ಪನ್ನಗಳು ಮಾರುಕಟ್ಟೆಗೆ ಬರುತ್ತಿವೆ. ಅವುಗಳ ಮೇಲೆ ಆಕರ್ಷಣೆ ಹುಟ್ಟುವಂತಹ ವಿಧಾನಗಳ ಮೂಲಕ ಹೂಡಿಕೆದಾರರನ್ನು ಬಾಜಿಗೆ ಎಳೆಯಲಾಗುತ್ತಿದೆ. ದೊಡ್ಡ ಪ್ರಮಾಣದಲ್ಲಿ ಸಟ್ಟಾ–ಬಾಜಿ ವ್ಯವಹಾರಗಳಿಗೆ ಅವಕಾಶ ಕಲ್ಪಿಸಿಕೊಡುವ ಅಂಶವು ಹಣಕಾಸು ಮಾರುಕಟ್ಟೆಗಳ ರಕ್ತದಲ್ಲಿ ಅಂತರ್ಗತವಾಗಿದೆ.

ಹಣಕಾಸು ಮಾರುಕಟ್ಟೆಯ ವ್ಯವಹಾರಗಳಲ್ಲಿ, ಸಟ್ಟಾದಾರರ ಜೂಜುಕೋರ ಚಟುವಟಿಕೆಗಳೇ ಮೇಲುಗೈ ಪಡೆದಿವೆ. ಇಲ್ಲಿ, ಮಂದೆಯಲ್ಲಿರುವ ಎಲ್ಲ ಹೂಡಿಕೆದಾರರನ್ನು ಹಿಂದೆ ಹಾಕಿ, ಮಾರುಕಟ್ಟೆಯ ಚಲನವಲನಗಳನ್ನು ಗಮನಿಸಿ, 'ಸರಿಯಾದ' ಸಮಯದಲ್ಲಿ, ಎಲ್ಲರಿಗಿಂತ ಮೊದಲೇ ಸರಿಯಾದ ಕಾರ್ಯಾಚರಣೆಗೆ ಇಳಿಯುವುದೇ "ನಿಪುಣ ಹೂಡಿಕೆ"ಯ ಉದ್ದೇಶ. ಈ ವಿದ್ಯಮಾನವನ್ನು ಜಾನ್ ಮೆನಾರ್ಡ್ ಕೀನ್ಸ್, 'ಜನರಲ್ ಥಿಯರಿ ಆಫ್ ಎಂಪ್ಲಾಯ್‌ಮೆಂಟ್,ಇಂಟರೆಸ್ಟ್ ಅಂಡ್ ಮನಿ'(ಉದ್ಯೋಗ, ಬಡ್ಡಿ ಮತ್ತು ಹಣದ ಸಾಮಾನ್ಯ ಸಿದ್ಧಾಂತ) ಎಂಬ ತಮ್ಮ ಮೇರು ಕೃತಿಯಲ್ಲಿ ಹೀಗೆ ಬಣ್ಣಿಸಿದ್ದಾರೆ:

"ಕಸುಬುಗಾರ ಹೂಡಿಕೆಯನ್ನು ಒಂದು ಪತ್ರಿಕೆಯು ನಡೆಸುವ ಕಾಲ್ಪನಿಕ ಸೌಂದರ್ಯ ಸ್ಪರ್ಧೆಗೆ ಹೋಲಿಸಬಹುದು. ಈ ಸ್ಪರ್ಧೆಯ ನಿಯಮದಂತೆ, ಭಾಗವಹಿಸುವ ಸ್ಪರ್ಧಾಳು ಒಬ್ಬನು ತನ್ನ ಮುಂದಿರುವ ನೂರು ಛಾಯಾಚಿತ್ರಗಳಲ್ಲಿ ಅತಿ ಮುದ್ದು ಮುಖ ಉಳ್ಳ ಆರು ಛಾಯಾಚಿತ್ರಗಳನ್ನು ಆರಿಸಬೇಕು. ಬಹುಮಾನ ಯಾರಿಗೆ? ಯಾವ ಸ್ಪರ್ಧಾಳುವಿನ ಆಯ್ಕೆಯು ಭಾಗವಹಿಸಿದ ಎಲ್ಲಾ ಸ್ಪರ್ಧಾಳುಗಳ ಒಲವಿನ ಸರಾಸರಿಗೆ ಹತ್ತಿರವಾಗಿದೆಯೋ ಅವನಿಗೆ! ಹಾಗಾಗಿ, ಪ್ರತಿ ಸ್ಪರ್ಧಾಳುವೂ ಆರಿಸಬೇಕಾದ ಮುಖಗಳು ತನಗೆ ಅತಿ ಮುದ್ದಾಗಿ ಕಾಣುವ ಮುಖಗಳಲ್ಲ. ಬದಲಿಗೆ, ಅವನು, ಉಳಿದ ಸ್ಪರ್ಧಾಳುಗಳು ಮೆಚ್ಚಬಹುದಾದ ಮುಖಗಳನ್ನು ಊಹಿಸಿಕೊಂಡು, ಅದರ ಆಧಾರದ ಮೇಲೆ, ಆಯ್ಕೆ ಮಾಡುತ್ತಾನೆ. ಮುದ್ದು ಮುಖದ ಆಯ್ಕೆಯ ಸಮಸ್ಯೆ ಎಲ್ಲಾ ಸ್ಪರ್ಧಾಳುಗಳನ್ನೂ ಇದೇ ರೀತಿಯಲ್ಲಿ ಕಾಡುತ್ತದೆ. ಇದು, ಒಬ್ಬ ಸ್ಪರ್ಧಾಳುವಿನ ಸ್ವ–ನಿರ್ಣಯದ ಪ್ರಕಾರ, ನಿಜಕ್ಕೂ, ಯಾವ ಆರು ಛಾಯಾಚಿತ್ರಗಳು ಮುದ್ದು ಮುಖ ಉಳ್ಳವು ಎಂದು ಆರಿಸುವ ಸಂಗತಿಯಲ್ಲ. ಅಥವಾ, ಯಾವ ಮುಖಗಳು ಅತಿ ಮುದ್ದಾಗಿವೆ ಎಂದು ಪ್ರಾಮಾಣಿಕವಾಗಿ ಯೋಚಿಸುವ ಅಭಿಪ್ರಾಯದ ಸರಾಸರಿಯ ಸಂಗತಿಯೂ ಅಲ್ಲ. ಈ ಎರಡು ಸ್ತರಗಳನ್ನು ಕ್ರಮಿಸಿ, ಮೂರನೆಯ ಸ್ತರದಲ್ಲಿ ನಾವೀಗ ನಮ್ಮೆಲ್ಲ ಬುದ್ಧಿಶಕ್ತಿಯನ್ನು ಬಳಸಿ, ಯಾವುದು ಸರಾಸರಿ ಅಭಿಪ್ರಾಯವಾಗಿರಬೇಕು ಎಂಬುದನ್ನು ಅಭಿಪ್ರಾಯದ ಸರಾಸರಿಯ ಮೂಲಕ ನಿರೀಕ್ಷಿಸಲು ತೊಡಗಿದ್ದೇವೆ. ನನಗನಿಸುತ್ತದೆ, ಇನ್ನೂ ಕೆಲವರು ಅನುಸರಿಸುವ ಕ್ರಮಗಳು, ನಾಲ್ಕು, ಐದು ಮತ್ತು ಇನ್ನೂ ಎತ್ತರದ ಸ್ತರಗಳಲ್ಲಿವೆ ಎಂದು".

ಉದ್ದಿಮೆಯೇ ಗುಳ್ಳೆಯಾಗಿ ಸಟ್ಟಾದಾರಿಕೆಯ ಸುಳಿಯಲ್ಲಿ ಸಿಲುಕಿದಾಗ...

ಹೂಡಿಕೆದಾರ ಮಂದೆಯ ಬುದ್ಧಿವಂತಿಕೆಯನ್ನು ಮೀರಿಸುವಲ್ಲಿ ಕಂಪ್ಯೂಟರ್‌ಗಳು ನೆರವಾಗುತ್ತಿವೆ. ಹಣಕಾಸು ಮಾರುಕಟ್ಟೆಯ ವ್ಯವಹಾರಗಳನ್ನು ಅವು ಲೆಕ್ಕಾಚಾರದ ಮೇಲೆ ನಿರ್ವಹಿಸುತ್ತವೆ. ಕೆಲವು ಘಟನೆಗಳ ಪರಿಣಾಮವಾಗಿ ಭವಿಷ್ಯದಲ್ಲಿ ಉಂಟಾಗಬಹುದಾದ ಬದಲಾವಣೆಗಳನ್ನು ನಿರೀಕ್ಷಿಸಿ, ಪರಿಸ್ಥಿತಿಗೆ ತಕ್ಕಂತೆ, ಯಾವ ನಿಲುಮೆ(ಕೊಳ್ಳುವ, ಮಾರುವ) ತಾಳಬೇಕೆಂದು ಅದು ಸೂಚಿಸುತ್ತದೆ. ಅದರ ಪರಿಣಾಮವಾಗಿ ಮಂದೆಯ ವರ್ತನೆ ರೂಪುಗೊಳ್ಳುತ್ತದೆ. ಮಾರುಕಟ್ಟೆಯಲ್ಲಿ ವ್ಯವಹಾರಗಳು ಜರುಗುತ್ತಿರುವಾಗ, ಕಂಪ್ಯೂಟರ್ ಕೊಡುವ ಸೂಚನೆಗಳು, ಸಾಮಾನ್ಯವಾಗಿ, ಒಂದೇ ದಿಕ್ಕಿನಲ್ಲಿರುತ್ತವೆ. ಹಾಗಾಗಿ, ಬೆಲೆ ಗುಳ್ಳೆಗಳು ಮತ್ತು ಕುಸಿತಗಳು ಉಂಟಾಗುತ್ತವೆ.

ತಮ್ಮ 'ಜನರಲ್ ಥಿಯರಿ' ಗ್ರಂಥದಲ್ಲಿ, ಕೀನ್ಸ್ ಅಧಿಕಾರಯುತವಾಗಿ ಸೂಚಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳುವುದು ಉಚಿತವಾಗಿದೆ:

"ಉದ್ದಿಮೆಗಳು ನದಿಗಳ ಹಾಗೆ ಸ್ಥಿರವಾಗಿ ಪ್ರವಹಿಸುವಾಗ, ಸಟ್ಟಾಕೋರ ಚಟುವಟಿಕೆಗಳಿಂದ ಯಾವ ಹಾನಿಯೂ ತಟ್ಟುವುದಿಲ್ಲ. ಆದರೆ, ಉದ್ದಿಮೆಯೇ ಒಂದು ಗುಳ್ಳೆಯಂತಾಗಿ, ಅದು ಸಟ್ಟಾದಾರಿಕೆಯ ಸುಳಿಯಲ್ಲಿ ಸಿಲುಕಿದಾಗ, ಪರಿಸ್ಥಿತಿ ಕೆಡುತ್ತದೆ. ಒಂದು ದೇಶದಲ್ಲಿ ಯಾವಾಗ ಬಂಡವಾಳವು ಸೃಷ್ಟಿಯಾಗುವ ಪ್ರಕ್ರಿಯೆಯು ಜೂಜುಕೋರ ಅಡ್ಡೆಯ ಚಟುವಟಿಕೆಗಳ ಉಪ ಉತ್ಪನ್ನವಾಗುತ್ತದೆಯೋ, ಆಗ, ಕೆಲಸ ಕೆಡುತ್ತದೆ".



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ತ್ರಿಪುರಾ ಚುನಾವಣೆ: ಪ್ರಧಾನಿಗಳ ಕೋಲ್ಮಿಂಚಿನ ಪ್ರಚಾರ V/S ಮುಖ್ಯಮಂತ್ರಿಗಳ ಸಮಚಿತ್ತದ ಪ್ರಚಾರ ಮತ್ತು 15% ಇಲೆಕ್ಟ್ರಾನಿಕ್ ಮತಯಂತ್ರಗಳ ಅಸಮರ್ಪಕ ಕೆಲಸ

ರಾಜ್ಯಗಳ ಸುತ್ತ



ತ್ರಿಪುರಾದಲ್ಲಿನ ಇದುವರೆಗಿನ ಅತ್ಯಂತ ಬಿರುಸಿನ ವಿಧಾನ ಸಭಾ ಚುನಾವಣೆ ಫೆಬ್ರವರಿ 18ರಂದು ಮತದಾನದೊಂದಿಗೆ ಮುಕ್ತಾಯವಾಗಿದೆ. ಇದಕ್ಕೆ ಈ ಬಾರಿ ಈ ಬಿರುಸನ್ನು ತಂದದ್ದು ಕಳೆದ ಬಾರಿ ಹೆಚ್ಚಿನ ಕಡೆಯಲ್ಲಿ ಠೇವಣಿಯನ್ನೂ ಉಳಿಸಿಕೊಳ್ಳಲಾಗದೆ ಒಂದೂ ಸ್ಥಾನವನ್ನು ಗಳಿಸಿಕೊಳ್ಳಲಾಗದ ಬಿಜೆಪಿ ಈ ಬಾರಿ ಹೇಗಾದರೂ ಮಾಡಿ ಎಡರಂಗವನ್ನು ಅಧಿಕಾರದಿಂದ ಇಳಿಸಬೇಕು ಎಂಬ ಶತಪ್ರಯತ್ನದಲ್ಲಿ ಪಕ್ಷಾಂತರಿಗಳನ್ನು, ಪ್ರತ್ಯೇಕತಾವಾದಿಗಳನ್ನು ಕಟ್ಟಿಕೊಂಡು ಷಾ–ಮೋದಿ ಜೋಡಿ ಕಣಕ್ಕಿಳಿದದ್ದು.

ಪ್ರಚಾರದ ಕೊನೆಯ ದಿನವೂ ಸೇರಿದಂತೆ ಮೂರು ದಿನ ಪ್ರಧಾನಿಗಳ ಕೋಲ್ಮಿಂಚು ಹರಿಸಿದ ಪ್ರಚಾರ ಅದಕ್ಕೆ ಎದುರಾಗಿ ರಾಜ್ಯದ ಉದ್ದಗಲಕ್ಕೂ 50ಕ್ಕೂ ಹೆಚ್ಚು ಚುನಾವಣಾ ಸಭೆಗಳನ್ನುದ್ದೇಶಿಸಿ ಮಾತಾಡಿದ ಮುಖ್ಯಮಂತ್ರಿಗಳ ಸಮಚಿತ್ತದ ಪ್ರಚಾರ–ಇದು ಟೈಮ್ಸ್ ನ್ಯೂಸ್ ಸರ್ವಿಸ್‌ನ ಮೊಹುವ ಚಟರ್ಜಿಯವರ ವರ್ಣನೆ(ಫ.19). ಸಾಮಾನ್ಯವಾಗಿ ಹೆಚ್ಚೇನೂ ಖರ್ಚಿಲ್ಲದ ತ್ರಿಪುರಾದಲಲಿನ ಚುನಾವಣಾ ಪ್ರಚಾರ ಷಾ–ಮೋದಿ ಕೃಪೆಯಿಂದ ಆಡಂಬರಮಯವಾಗಿತ್ತು ಎಂದು ಅವರು ವರದಿ ಮಾಡಿದ್ದಾರೆ. ರಾಜಧಾನಿ ಅಗರ್ತಲಾದಿಂದ ದೂರ ದಕಮಲನಗರದ ವರೆಗೆ ವರೆಗೆ ಬಿಜೆಪಿ ಕೂಟದ ಆಡಿಯೋ–ವಿಡಿಯೋಗಳ,, ದೊಡ್ಡ ದೊಡ್ಡ ಕಟೌಟ್‌ಗಳ (ಪ್ರಧಾನಿಗಳದ್ದು) ಭರಾಟೆ. ಅತ್ತ ಎಡರಂಗದ ಪ್ರಚಾರದಲ್ಲಿ ಎಲ್ಲೂ ಮುಖ್ಯಮಂತ್ರಿಗಳ ಫೋಟೋ ಕೂಡ ಇಲ್ಲ. ಕೇವಲ ತನ್ನ ಕೆಲಸದ ಆಧಾರದಲ್ಲೇ ಜನಾದೇಶವನ್ನು ಮತ್ತೆ ಪಡೆಯುವ ಅಪೂರ್ವ ಆತ್ಮವಿಶ್ವಾಸ ಎಂದು ಈ ವರದಿಗಾರರು ವರ್ಣಿಸಿದ್ದಾರೆ.

ಇದಕ್ಕೆ ತದ್ವಿರುದ್ಧವಾಗಿಯೋ (ಅಥವ ಅನುಗುಣವಾಗಿಯೋ ಎಂಬ ಸಂದೇಹವೂ ಕಾಡದಿರದು) ಚುನಾವಣಾ ಆಯೋಗದ ಕಳಪೆ ಕಾರ್ಯನಿರ್ವಹಣೆ. 3174ರಲ್ಲಿ 519 ಅಂದರೆ 16.35% ಎಲೆಕ್ಟ್ರಾನಿಕ್ ಮತಯಂತ್ರ(ಇವಿಎಂ) ಗಳು ಸಮರ್ಪಕವಾಗಿ ಕೆಲಸ ಮಾಡಲಿಲ್ಲ ಎಂದು ವರದಿಯಾಗಿದೆ. ಇದು ಸಾಮಾನ್ಯ ಸಂಗತಿಯಲ್ಲವೆಂದು ಸಿಪಿಐ(ಎಂ) ತ್ರಿಪುರಾ ರಾಜ್ಯ ಸಮಿತಿ ಚುನಾವಣಾ ಆಯೋಗಕ್ಕೆ ಬರೆದ ಪತ್ರದಲ್ಲಿ ಅಭಿಪ್ರಾಯ ಪಟ್ಟಿದೆ. ಇದರಿಂದ ಹಲವೆಡೆಗಳಲ್ಲಿ ಮತದಾನ ಸಮಯಕ್ಕೆ ಸರಿಯಾಗಿ ನಡೆಯಲಿಲ್ಲ, ನಂತರ ರಾತ್ರಿ 9.30 ರ ವರೆಗೂ ನಡೆಯಿತು. ಇದರಿಂದಾಗಿ ಕಳೆದ ವಿಧಾನಸಭಾ ಚುನಾವಣೆಗಳಿಗಿಂತ ಕಡಿಮೆ ಮತದಾನ ನಡೆದಿದೆ ಎಂದು ಹೇಳಲಾಗಿದೆ.

ಮತದಾನದ ಹಿಂದಿನ ದಿನ ಕೆಲವು ಇಂಜಿನಿಯರುಗಳು, ಚುನಾವಣಾ ಆಯೋಗದ ಪ್ರಕಾರ ಅಧಿಕೃತ ಇಸಿಎಲ್ ಇಂಜಿನಿಯರುಗಳು ಪನಿಸಾಗರ್ ಕ್ಷೇತ್ರದ ಎಲ್ಲ ಮತಯಂತ್ರಗಳನ್ನು, ಧರ್ಮನಗರ್‌ನ 3 ಮತ್ತು ಜುಬರಾಜ್ ನಗರದ 12 ನ್ನು ತೆರೆದರು ಎಂದು ವರದಿಯಾಗಿದೆ. ಆಗ ಯಾವ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೂ ಕರೆದಿಲ್ಲ. ಒಮ್ಮೆ ಅಭ್ಯರ್ಥಿಗಳ ಮಾಹಿತಿ ದಾಖಲಾದ ಮೇಲೆ ಯಾರೂ ಮತಯಂತ್ರಗಳನ್ನು ತೆರಯುವಂತಿಲ್ಲ. ಈ ಇಂಜಿನಿಯರ್‌ಗಳು ಅದನ್ನು ಯಾಕೆ ಮಾಡಿದರು, ಆಗ ಏನು ಮಾಡಿದರು ಎಂಬುದು ಒಂದು ರಹಸ್ಯವಾಗಿದೆ. ಈ ಬಗ್ಗೆ ಸ್ಪಷ್ಟೀಕರಣ ಕೇಳಿದಾಗ ಇಂಜಿನಿಯರುಗಳ ಕೊರತೆಯಿಂದಾಗಿ ಈ ಮತಯಂತ್ರಗಳ ಪರೀಕ್ಷಣೆ ಮತದಾನದ ಹಿಂದಿನ ದಿನವಷ್ಟೇ ಆರಂಭವಾಯಿತು ಎಂಬ ಸಮಜಾಯಿಷಿ ಕೊಡಲಾಗಿದೆ.

ಚುನಾವಣಾ ಆಯೋಗದ ನಿರ್ದೇಶನಗಳ ಪ್ರಕಾರ ಮತದಾನದ ದಿನ ಪ್ರಚಾರಕ್ಕೆ ಬಂದ ಯಾರೂ ರಾಜ್ಯದ ಹೊರಗಿನವರು ಇರಬಾರದು .ಆದರೆ ಅಸ್ಸಾಂ. ಪಶ್ಚಿಮ ಬಂಗಾಲ ಮತ್ತು ಕೆಲವು ಹಿಂದಿ ರಾಜ್ಯಗಳ ಬಿಜೆಪಿ ಮುಖಂಡರು ಮತದಾನದ ದಿನವೂ ಇದ್ದರು. ಅವರನ್ನು ವಿವಿಧ ಹೋಟೇಲುಗಳು, ಗೆಸ್ಟ್‌ಹೌಸ್‌ಗಳು ಮತ್ತು ಮನೆಗಳಲ್ಲಿ ಇರಿಸಲಾಗಿತ್ತಂತೆ. ಅಸ್ಸಾಂನ ಮಂತ್ರಿಯೊಬ್ಬರು ಒಂದು ಭಾರದ ಸೂಟ್‌ಕೇಸಿನೊಂದಿಗೆ ದೂರದ ಒಂದು ಹಳ್ಳಿಯಲ್ಲಿ ಅಡಗಿದ್ದವರು ಸಿಕ್ಕಿ ಬಿದ್ದರು. ಅವರ ಮೇಲೆ ಕ್ರಮ ತಗೊಳ್ಳುವ ಬದಲು, ಅಥವ ಸುಟ್‌ಕೇಸನ್ನು ಪರೀಕ್ಷಿಸುವ ಬದಲು ಅವರನ್ನು ರಾಜ್ಯದ ಹೊರಗೆ ಕಳಿಸಲಾಯಿತು. ಮತದಾನದ ದಿನ ಅಸ್ಸಾಂ ಹಣಕಾಸು ಮಂತ್ರಿ ಹೇಮಂತ ಬಿಸ್ವಸರ್ಮ ತ್ರಿಪುರಾದಲ್ಲೇ ಅಡ್ಡಾಡುತ್ತಿದ್ದರು ಎಂದು ಹೇಳಲಾಗಿದೆ.

ಮತ್ತೊಂದು ಅಕ್ರಮ ಎಂದರೆ ಚುನಾವಣಾ ಪ್ರಚಾರದ ಸಮಯ ಮುಗಿದ ನಂತರವೂ ಬಿಜೆಪಿಯ ಎರಡು ಜಾಹೀರಾತುಗಳಿಗೆ ಅನುಮತಿ ನೀಡಲಾಯಿತು.

ಈ ಬಾರಿ ಮೊದಲ ಬಾರಿಗೆ ಇಲ್ಲಿ ಮತದಾನದ ವೆಬ್ ಪ್ರಸಾರ ನಡೆಸಲಾಯಿತು. ಆದರೆ ಇದರ ಕಾಂಟ್ರಾಕ್ಟನ್ನು ಗುಜರಾತ್‌ನ ಒಬ್ಬರಿಗೆ ಕೊಡಲಾಗಿದೆ. ಆತ ಅದರ ಉಪ ಕಾಂಟ್ರಾಕ್ಟನ್ನು ತ್ರಿಪುರಾದ ಬಿಜೆಪಿ ಮುಖಂಡನೊಬ್ಬನಿಗೆ ಕೊಟ್ಟಿದ್ದಾನೆ!

ಇದಕ್ಕೆ ಮೊದಲು ಮತದಾನಕ್ಕೆ ಒಬ್ಬ ವಿಶೇಷ ವೀಕ್ಷಕರನ್ನು ನೇಮಿಸಿದ್ದು ಕೂಡ ಅಸಾಮಾನ್ಯ ಸಂಗತಿಯಾಗಿತ್ತು. ಐಟಿಬಿಪಿ(ಇಂಡೋ–ಟಿಬೆಟ್ ಗಡಿ ಪೋಲೀಸ್ ಪಡೆ)ಯ ಮಹಾನಿರ್ದೇಶಕರನ್ನು ನೇಮಿಸಲಾಗಿದೆ. ಈತ ರಾಜ್ಯ ಚುನಾವಣಾ ಅಧಿಕಾರಿಯ ಕಚೇರಿಯಲ್ಲಿ ಬಿಜೆಪಿ ಮುಖಂಡರನ್ನು ಮಾತ್ರ ಪ್ರತ್ಯೇಕವಾಗಿ ಭೇಟಿ ಮಾಡಿದ್ದರು. ಈ ಬಗ್ಗೆ ಚುನಾವಣಾ ಆಯೋಗವನ್ನು ಪ್ರಶ್ನಿಸಿದಾಗ ಈ ಬಗ್ಗೆ ಸ್ಪಷ್ಟೀಕರಣವನ್ನು ಕೇಳುವುದಾಗಿ ತಿಳಿಸಲಾಯಿತು. ಮುಂದೇನಾಯಿತು ತಿಳಿದಿಲ್ಲ.

ಒಟ್ಟಿನಲ್ಲಿ ಮತದಾನ ಮೇಲ್ನೋಟಕ್ಕೆ ಸುಮಾರಾಗಿ ಶಾಂತಿಯುತವಾಗಿ ನಡೆದರೂ ಈ ಎಲ್ಲ ಬೆಳವಣಿಗೆಗಳು ಆತಂಕವನ್ನು ಉಂಟು ಮಾಡಿವೆ. ಇದನ್ನು ಚುನಾವಣಾ ಆಯೋಗದ ಗಮನಕ್ಕೂ ತರಲಾಗಿದೆ. ಇದು ಚುನಾವಣಾ ಆಯೋಗದ ಅಸಮರ್ಥತೆಯೋ ಅಥವ ದುರುದ್ದೇಶಪೂರ್ಣ ಪ್ರಯತ್ನಗಳೋ ಕಾದು ನೋಡಬೇಕಾಗಿದೆ.

ಬಾಲಕಿಯ ಮೇಲೆ ಅತ್ಯಾಚಾರ ಮತ್ತು ಭೀಕರ ಕೊಲೆಯ ಸಮರ್ಥನೆಗೆ ಧರ್ಮದ ಹೀನ ಬಳಕೆ– ತ್ವರಿತ ಕ್ರಮ ಕೈಗೊಳ್ಳಲು ಮಹಿಳಾ ಸಂಘಟನೆಗಳ ಆಗ್ರಹ





ಜಮ್ಮುವಿನ ಕಥುವ ಜಿಲ್ಲೆಯ ಹೀರಾನಗರ್‌ನಲ್ಲಿ ಎಂಟು ವರ್ಷದ ಬಾಲಕಿ ಅಸೀಫಾ ಬಾನೊ ಜನವರಿ 12ರಿಂದ ಮನೆಯಿಂದ ಕಾಣೆಯಾಗಿದ್ದಳು. ಕೆಲವು ದಿನಗಳ ನಂತರ ಆಕೆಯ ಜರ್ಝರಿತ ದೇಹ ಪತ್ತೆಯಾಯಿತು. ತನಿಖೆ ಮಾಡಿದಾಗ ಈ ಭೀಕರ ಕೃತ್ಯದಲ್ಲಿ ಇಬ್ಬರು ವಿಶೇಷ ಪೋಲೀಸ್ ಅಧಿಕಾರಿ(ಎಸ್‌ಪಿಒ)ಗಳೂ ಶಾಮೀಲಾಗಿದ್ದರು ಎಂದು ಕಂಡು ಬಂದಿದೆ. ತಮಾಷೆಯೆಂದರೆ ಈ ಕೊಲೆಶಂಕಿತರ ಮೇಲೆ ಕಾನೂನು ಕ್ರಮವನ್ನು ಕೈಗೊಳ್ಳುವುದನ್ನು ಜಮ್ಮುವಿನ ಹಿಂದೂ ಏಕತಾ ಮಂಚ್ ಬಲವಾಗಿ ವಿರೋಧಿಸುತ್ತಿದೆ, ಅವರನ್ನು ಬಿಡುಗಡೆ ಮಾಡಬೇಕೆಂದು ನಡೆದ ಮತಪ್ರದರ್ಶನಕ್ಕೆ ನೇತೃತ್ವ ನೀಡಿರುವುದು ಒಬ್ಬ ಬಿಜೆಪಿ ಮುಖಂಡ ಹಾಗೂ ಭಾರತದ ತ್ರಿವರ್ಣ ಧ್ವಜಗಳು ಈ ಮತಪ್ರದರ್ಶನದಲ್ಲಿ ಕಂಡುಬಂದವು ಎಂದು ವರದಿಯಾಗಿದೆ,

ಇದನ್ನು ಬಲವಾಗಿ ವಿರೋಧಿಸಿ ಐದು ಮಹಿಳಾ ಸಂಘಟನೆಗಳು ದಿಲ್ಲಿಯಲ್ಲಿರುವ ಜಮ್ಮುವಿನ ರೆಸಿಡೆಂಟ್ ಕಮಿಶನರ್‌ಗೆ ಫೆಬ್ರವರಿ 21ರಂದು ಒಂದು ಮನವಿ ಪತ್ರವನ್ನು ಸಲ್ಲಿಸಿವೆ.

ಒಬ್ಬ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ ಆಕೆಯನ್ನು ಭೀಕರವಾಗಿ ಸಾಯಿಸಿರುವುದೇ ಒಂದು ಹೀನ ಕೃತ್ಯ. ಅದರಲ್ಲಿ ಪೋಲೀಸ್ ಅಧಿಕಾರಿಗಳೂ ಶಾಮೀಲಾಗಿದ್ದಾರೆ ಎನ್ನುವುದು ಮತ್ತಷ್ಟು ಕೊಳಕು ಸಂಗತಿ. ಅದನ್ನು ಕೋಮಿನ ಹೆಸರಲ್ಲಿ ಸಮರ್ಥಿಸಿಕೊಳ್ಳುವುದು ಇನ್ನಷ್ಟು ಹೊಲಸು ಕೃತ್ಯ ಎಂದಿರುವ ಈ ಮಹಿಳಾ ಸಂಘಟನೆಗಳ ಮನವಿ ಇಂತಹ ಹೀನ ಅಪರಾಧದ ಕೋಮುವಾದೀಕರಣ ಮತ್ತು ರಾಜಕೀಯಕರಣ ನ್ಯಾಯವನ್ನು ವಿಳಂಬಗೊಳಿಸುತ್ತದಲ್ಲದೆ ಈಗಾಗಲೇ ಸೂಕ್ಷ್ಮವಾಗಿರುವ ಈ ಪ್ರದೇಶದಲ್ಲಿನ ವಾತಾವರಣವನ್ನು ಮತ್ತಷ್ಟು ಕಲುಷಿತಗೊಳಿಸುತ್ತದೆ ಎಂದು ಹೇಳಿದೆ.

ಈ ಕೇಸನ್ನು ಫಾಸ್ಟ್ ಟ್ರಾಕ್ ಕೋರ್ಟ್ ಮೂಲಕ ನಿಭಾಯಿಸಬೇಕು, ಅಪರಾಧಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು, ಯಾವುದೇ ನೆವದಲ್ಲಿ ಅಪರಾಧಿಗಳನ್ನು ರಕ್ಷಿಸ ಬಯಸುವವರ ಮೇಲೆ ಕ್ರಮ ಕೈಗೊಳ್ಳಬೇಕು, ಬಾಲಕಿಯ ಕುಟುಂಬಕ್ಕೆ ಸಾಕಷ್ಟು ರಕ್ಷಣೆ ನೀಡಬೇಕು ಎಂದು ಈ ಮಹಿಳಾ ಸಂಘಟನೆಗಳು ಆಗ್ರಹಿಸಿವೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನ, ಫೆಮಿನಿಸಂ ಇನ್ ಇಂಡಿಯ, ಭಾರತಿಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ ಮತ್ತು ಪುರೋಗಾಮಿ ಮಹಿಳಾ ಸಂಘಟನದ ಮುಖಂಡರು ಈ ಮನವಿಯನ್ನು ಸಲ್ಲಿಸಿದರು.



ರಾಜಸ್ಥಾನದ ರೈತರ ಅನಿರ್ದಿಷ್ಟ ಮಹಾಪಡಾವ್ ವಿಫಲಗೊಳಿಸಲು ರೈತ ಮುಖಂಡರ ಬಂಧನ–ಎಐಕೆಸ್ ಖಂಡನೆ

ಪುಟ 2 ರಿಂದ ಸಂಘಟನೆ, ಇನ್ನಷ್ಟು ಜೋರಾಗಿ ಈ ರೈತ ಚಳುವಳಿ ನಡೆಯುತ್ತದೆ ಎಂದು ಎಚ್ಚರಿಸಿರುವ ಎಐಕೆಸ್ ಬಂಧಿತರನ್ನೆಲ್ಲ ತಕ್ಷಣ ಬಿಡುಗಡೆ ಮಾಡಬೇಕು, ತಾನು ಒಪ್ಪಿಕೊಂಡದ್ದನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿದೆ.

ಬಿಜೆಪಿ ಸರಕಾರದ ಬೆದರಿಕೆಗಳನ್ನು ಬೇಧಿಸಿಯೂ ಸಾವಿರಾರು ರೈತರು ಜಯಪುರ ಪ್ರವೇಶಿಸಿದ್ದಾರೆ, ಅವರನ್ನು ನಗರದ ಗಡಿಗಳಲ್ಲೇ ಬಿಜೆಪಿ ಸರಕಾರದ ಪೋಲೀಸರು ತಡೆದಿಟ್ಟಿದ್ದಾರೆ. ರೈತರು ಅಲ್ಲೇ ಧರಣಿ ನಡೆಸುತ್ತಿದ್ದಾರೆ, ಎಐಕೆಎಸ್ ಕೇಂದ್ರದಿಂದ ಬಂದಿರುವ ಅಧ್ಯಕ್ಷ ಅಶೋಕ ಧವಳೆ ಮತ್ತು ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ಮತ್ತಿತರ ಮುಖಂಡರು ಈ ಧರಣಿಗಳನ್ನು ಉದ್ದೇಶಿಸಿ ಮಾತಾಡುತ್ತಿದ್ದಾರೆ.

ನಿನ್ನ ದಮನದಲ್ಲಿ ಶಕ್ತಿಯೆಷ್ಟಿದೆ
ನೋಡಿದ್ದೇವೆ, ನೋಡುತ್ತೇವೆ
ನಿನ್ನ ಜೈಲುಗಳಲ್ಲಿ ಜಾಗ ಎಷ್ಟಿದೆ
ನೋಡಿದ್ದೇವೆ, ನೋಡುತ್ತೇವೆ

ಎಂಬ ಘೋಷಣೆಗಳು ಮೊಳಗುತ್ತಿವೆ. ರೈತರನ್ನು ವಿಧಾನ ಸೌಧದ ಬಳಿ ಬರಲು ಬಿಡದ ಬಿಜೆಪಿ ಮಂದಿ ಮುಂದಿನ ಚುನಾವಣೆಗಳಲ್ಲಿ ವಿಧಾನಸಭೆಯನ್ನು ಪ್ರವೇಶಿಸಲಾಗದಂತೆ ಮಾಡುತ್ತೇವೆ ಎಂದು ಎಐಕೆಎಸ್ ಮತ್ತು ರಾಜ್ಯದ ರೈತ ಮುಖಂಡರು ಘೋಷಣೆ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಇದು ರಾಜ್ಯದಲ್ಲೆಲ್ಲ ಅನುರಣನಗೊಳ್ಳಲಿದೆ ಎಂದು ಹೋರಾಟದಲ್ಲಿ ಭಾಗವಹಿಸುತ್ತಿರುವ ರೈತ ಕಾರ್ಯಕರ್ತರು ಹೇಳುತ್ತಿದ್ದಾರೆ.

ಗ್ರೀಸ್ : ಸಿರಿಜಾ ಸರಕಾರದ ಮೂರು ವರ್ಷಗಳ ಶರಣಾಗತಿಯ ಕತೆ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಗ್ರೀಕ್ ದೇಶವು ಆರ್ಥಿಕವಾಗಿ ದಿವಾಳಿಯಾಗಿತ್ತು ಎಂಬುದು ಜಗತ್ತಿನ ಹಲವು ಪ್ರಖ್ಯಾತ ಆರ್ಥಿಕ ತಜ್ಞರ ಅಭಿಪ್ರಾಯ. ಹೀಗಾಗಿ ದೇಶದಲ್ಲಿ ಮಿತವ್ಯಯ ಕ್ರಮಗಳನ್ನು ಅನುಸರಿಸಲಾಗಿತ್ತು. ಇದರ ವಿರುದ್ಧ ಬಾರೀ ಪ್ರತಿಭಟನೆ ನಡೆಸಿ, ಜನರ ಮನ್ನಣೆಗೆ ಪಾತ್ರರಾಗಿ 2015 ರಲ್ಲಿ ನಡೆದ ಚುನಾವಣೆಯಲ್ಲಿ 'ರ್‍ಯಾಡಿಕಲ್ ಎಡಪಂಥೀಯ ಒಕ್ಕೂಟ'ವಾಗಿದ್ದ ಸಿರಿಜಾ ಜಯಗಳಿಸಿತು.

ಇದೀಗ ಮೂರು ವರ್ಷಗಳ ತನ್ನ ಆಡಳಿತದಲ್ಲಿ ಚುನಾವಣೆ ಪೂರ್ವದಲ್ಲಿ ಕೊಟ್ಟಿದ್ದ ಭರವಸೆಗಳನ್ನು ಮೂಲೆಗುಂಪು ಮಾಡಿ, ಕಿವುಡರಾಗಿ ವರ್ತಿಸುತ್ತಿದ್ದಾರೆ. ಮಾತ್ರವಲ್ಲದೆ, ತಾವು ಮಿತವ್ಯಯದ ಆರ್ಥಿಕ ಕ್ರಮಗಳನ್ನು ಕೊನೆಗಾಣಿಸುವುದಾಗಿ ಕೊಟ್ಟಿದ್ದ ಎಲ್ಲಾ ಭರವಸೆಗಳನ್ನು ಗಾಳಿಗೆ ತೂರಿ, ಮತ್ತಷ್ಟು ತೀವ್ರ ತರದಲ್ಲಿ ಜಾರಿಗೊಳಿಸುತ್ತಿರುವುದು, ಈಗಾಗಲೇ ಆಕ್ರೋಶದಿಂದಿರುವ ಜನರಿಗೆ ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿದಂತಾಗಿದೆ.

ನಾಟಕೀಯವಾಗಿ ಅಧಿಕಾರಕ್ಕೆ, ಅನಂತರ ದ್ರೋಹ

ಗ್ರೀಸ್ ದೇಶವು 2007 ರಿಂದಲೇ ಆರ್ಥಿಕ ಹಿಂಜರಿತವನ್ನು ಎದುರಿಸುತ್ತಿದೆ. ನವ ಉದಾರಿಕರಣದ ನೀತಿಗಳ ಬಿಕ್ಕಟ್ಟಿನ ಅನಾವರಣ ಆರಂಭಗೊಂಡಿದ್ದೇ ಈ ದೇಶದಿಂದ ಎಂದೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. 2007 ರಿಂದ 2014 ರವರೆಗೆ ಆರ್ಥಿಕತೆಯ ಸುನಾಮಿಗೆ ಸಿಕ್ಕಿ ಧ್ವಂಸಗೊಂಡು ಸೊರಗಿ ಹೋಗಿತ್ತು. ಅದರ ಮೇಲೆ ಮಿತವ್ಯಯ ಕ್ರಮವನ್ನೂ ಹೇರಲಾಗಿತ್ತು. ಇದನ್ನು ಕೊನೆಗಾಣಿಸುವುದಾಗಿ ಭರವಸೆಯೊಂದಿಗೆ ಸಿರಿಜಾ ನಾಟಕೀಯವಾಗಿ ಅಧಿಕಾರಕ್ಕೆ ಏರಿತ್ತು. ಆನಂತರ ಜನರಿಗೆ ಮೋಸವೆಸಗಿದ ಚರಿತ್ರೆ ಇದಾಗಿದೆ. ಆಳವಾದ ಆರ್ಥಿಕ ಸುನಾಮಿಯ ಸುರುಳಿಗೆ ಸಿಕ್ಕಿ ತತ್ತರಿಸಿದ್ದ ಗ್ರೀಕ್ ದೇಶದ 'ಜಿಡಿಪಿ'ಯು 2007 ಮತ್ತು 2014 ರ ಮಧ್ಯ ಶೇಕಡ 26ಕ್ಕೆ ಕುಸಿದಿತ್ತು. 1930ರ ದಶಕದ ಮಹಾ ಕುಸಿತದ ಸಮಯದಲ್ಲಿ ಯು.ಎಸ್. ಆರ್ಥಿಕತೆಯ ಕುಸಿತಕ್ಕಿಂತ ಕೆಟ್ಟದಾದ ಸ್ಥಿತಿ ಇದಾಗಿತ್ತು.

ಗ್ರೀಕ್ ದೇಶವು 'ಯೂರೋ'ವನ್ನು ಕರೆನ್ಸಿಯನ್ನಾಗಿ ಅಳವಡಿಸಿಕೊಂಡದ್ದು 2001 ರಲ್ಲಿ. ಆ ಸಂದರ್ಭದಲ್ಲಿ ಅದರ ನಿರುದ್ಯೋಗದ ದರ ಶೇ. 10.7 ಇತ್ತು. 2014 ರಲ್ಲಿ ನಿರುದ್ಯೋಗದ ಪ್ರಮಾಣ ಶೇ. 26.5ಕ್ಕೆ ಏರಿಕೆಯಾಗಿತ್ತು. ಆ ಸಂದರ್ಭದಲ್ಲಿಯೇ ಅಂದರೆ 2008 ರಲ್ಲಿ ನ ಸಾಲ–ಜಿಡಿಪಿಯ ಅನುಪಾತ ಶೇ. 111 ಇದ್ದದ್ದು, 2014 ರಲ್ಲಿ ಶೇ. 179ಕ್ಕೆ ಏರಿಕೆಯಾಗಿರುವುದ್ನು (ಅಂದರೆ ಜಿಡಿಪಿಗಿಂತ ಸಾಲ ಹೆಚ್ಚುಕಡಿಮೆ ಇಮ್ಮಡಿ) ಇಲ್ಲಿ ಗಮನಿಸಬೇಕು, ಏಕೆಂದರೆ ಆರ್ಥಿಕ ದಿವಾಳಿಗೆ ಇದು ಮೂಲಕಾರಣ.

ಸಾಲದಾತರ ಕಠಿಣ–ಮಿತವ್ಯಯ/ಕ್ರಮಗಳು

ಆರ್ಥಿಕ ಬಿಕ್ಕಟ್ಟಿನಿಂದ ಹೊರಬರಲು ವಿದೇಶಿ ಬ್ಯಾಂಕುಗಳಿಂದ ಪ್ರಮುಖವಾಗಿ, ಜರ್ಮನಿ ಮತ್ತು ಫ್ರೆಂಚ್ ಬ್ಯಾಂಕುಗಳಿಂದ ಗ್ರೀಕ್ ವಿಪರೀತ ಸಾಲ ಮಾಡಿತು. ನಂತರ ಈ ಸಾಲ ಮರುಪಾವತಿಯ ಸಾಧ್ಯತೆ ಕಾಣದಿದ್ದಾಗ, ವಿವಿಧ ಐರೋಪ್ಯ ಸರ್ಕಾರಗಳು, ಇವುಗಳ ನೇತೃತ್ವ ವಹಿಸಿರುವ ಸಂಸ್ಥೆಗಳು ಸಾಲ ಮರು ಪಾವತಿಸಲು ಗ್ರೀಕ್ ದೇಶಕ್ಕೆ ಹಣದ ಸಹಾಯ ಮಾಡಿದವು. ಗ್ರೀಕ್ ಸರ್ಕಾರ ಮತ್ತು ಸಾಲ ನೀಡಿದ ಸಾಲದಾತರ ನಡುವಿನ ಮಾತುಕತೆಗಳಲ್ಲಿ 'ತ್ರಿಮೂರ್ತಿಗಳು"(ಟ್ರೊಯಿಕಾ) – ಅಂದರೆ ಯೂರೋಪಿಯನ್ ಕಮಿಷನ್ (ಇ.ಯು.), ಯುರೋಪಿಯನ್ ಸೆಂಟ್ರಲ್ ಬ್ಯಾಂಕ್ (ಇಸಿಬಿ) ಮತ್ತು ಐ.ಎಂ.ಎಫ್ – ಸಾಲದಾತರನ್ನು ಪ್ರತಿನಿಧಿಸಿದರು.

ಮುಂದುವರಿದ ಈ ಸಾಲಕ್ಕೆ ಪ್ರತಿಯಾಗಿ 'ಟ್ರೊಯಿಕಾ' ಗ್ರೀಕ್ ಮೇಲೆ ಕಠಿಣ ಕ್ರಮಗಳನ್ನು ಹೇರಿತು. ಈ ಅವಧಿಯಲ್ಲಿ ಗ್ರೀಕ್ ದೇಶದ ಎಲ್ಲಾ ಸರ್ಕಾರಗಳು ಈ ಕಠಿಣವಾದ ಆರ್ಥಿಕ ಮಿತವ್ಯಯದ ಶರತ್ತುಗಳನ್ನು ಮುಜುಗರವಿಲ್ಲದೆ ಒಪ್ಪಿಕೊಂಡಿದ್ದರು. ಅವುಗಳಲ್ಲಿ ಪ್ರಮುಖವಾಗಿ ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ಮತ್ತು ಉದ್ಯೋಗಗಳಲ್ಲಿ ಭಾರೀ ಕಡಿತ, ಸಾರ್ವಜನಿಕ ಸೇವೆಗಳು ಮತ್ತು ಸಾಮಾಜಿಕ ಭದ್ರತಾ ಸೌಲಭ್ಯವಾದ ಪಿಂಚಣಿ ಕಡಿತ ಮುಂತಾದವುಗಳು ಸೇರಿದ್ದವು. ಇವುಗಳಿಂದಾಗಿ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಯ ಹೆಚ್ಚಳ ಉಂಟಾಯಿತು. ಇದರ ಪರಿಣಾಮದಿಂದಾಗಿ ವೇತನದಲ್ಲಿ ಸುಮಾರು ಶೇ. 37 ರಷ್ಟು ಪಿಂಚಣಿಯಲ್ಲಿ ಶೇ. 48 ರಷ್ಟು ಕಡಿತ, ಹಾಗೂ ಸರ್ಕಾರಿ ಉದ್ಯೋಗದಲ್ಲಿ ಶೇ. 30 ರಷ್ಟು ಕಡಿತಗೊಳಿಸಲಾಯಿತು. ಬಡವರು, ನಿರುದ್ಯೋಗಿಗಳು ಹಾಗೂ ದುರ್ಬಲ ವರ್ಗದವರ ಮೇಲೆ ಹಾಗೂ ಹಿರಿಯ ನಾಗರೀಕರು ಒಟ್ಟಾರೆಯಾಗಿ ಬಹುಸಂಖ್ಯಾತ ಜನರ ಮೇಲೆ ಈ ಕಠಿಣ ಕ್ರಮಗಳು ಭಾರೀ ದುಷ್ಪರಿಣಾಮ ಬೀರಿದವು. ಗ್ರೀಕ್ ಜನರ ಸರಾಸರಿ ಖರೀದಿ ಶಕ್ತಿಯು 1986 ರಲ್ಲಿ ಇದ್ದ ಮಟ್ಟಕ್ಕಿಂತ ಕೆಳಗೆ ಕುಸಿಯಿತು. ಆದಾಗ್ಯೂ ಟ್ರೊಯಿಕಾ ಮತ್ತಷ್ಟು ಮಿತವ್ಯಯದ ಕ್ರಮಗಳನ್ನು ಬಿಗಿಗೊಳಿಸಲು ಒತ್ತಾಯಿಸಿತು.

ಈ ಎಲ್ಲಾ ನೀತಿಗಳ ವಿರುದ್ಧವಾಗಿ ಪ್ರತಿಭಟಿಸಿದ ಸಿರಿಜಾವನ್ನು 2015 ರಲ್ಲಿ ಗ್ರೀಕ್ ಜನರು ಅಧಿಕಾರಕ್ಕೆ ತಂದರು. ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸುವವರೆಗೆ ಸಾರ್ವಜನಿಕ ಸಾಲದ ಮರುಪಾವತಿ ಮತ್ತು ಮಿತವ್ಯಯ ಕಠಿಣ ಕ್ರಮಗಳನ್ನು ವಾಪಸ್ಸು ಪಡೆಯಲಾಗುವುದು ಎಂದು ಸಿರಿಜಾ ಭರವಸೆ ನೀಡಿತ್ತು.

ಆದರೆ, ಅತಿಶೀಘ್ರದಲ್ಲಿಯೇ ತನ್ನದೇ ಭರವಸೆಗಳನ್ನು ಜಾರಿಗೊಳಿಸುವ ಬದಲಿಗೆ ಸಿರಿಜಾ ಸರ್ಕಾರವು ಜನರ ಮೇಲೆ ಭಾರೀ ಪ್ರಮಾಣದ ಆರ್ಥಿಕ ಹೊರೆಯನ್ನು ಹೇರಿತು. 'ಟ್ರೊಯಿಕಾ' ಮತ್ತು ಹೂಡಿಕೆದಾರರ ಬಂಡವಾಳದ ಹೊರಹರಿವಿನ ಬೆದರಿಕೆಗಳು ಇದಕ್ಕೆ ಕಾರಣವಾಗಿತ್ತು. ಆದಾಗ್ಯೂ, "ಟ್ರೊಯಿಕಾ" ಕ್ಕೆ ಸಮಾಧಾನವಿರಲಿಲ್ಲ. ಮತ್ತಷ್ಟು–ಮಗದಷ್ಟು ಮಿತವ್ಯಯದ ಕ್ರೂರ ಒಪ್ಪಂದವನ್ನೂ ಸಿರಿಜಾ ಸರ್ಕಾರದ ಮುಂದಿಟ್ಟಿತು.

ಜನಾಭಿಪ್ರಾಯ ಸಂಗ್ರಹ – ಐತಿಹಾಸಿಕ ತೀರ್ಪು

'ಟ್ರೊಯಿಕಾ' ದ ಕ್ರೂರ ಕ್ರಮಗಳ ಒಪ್ಪಂದವನ್ನೂ ಪಾರ್ಲಿಮೆಂಟ್‌ನಲ್ಲಿ ಮಂಡಿಸುವ ಮುನ್ನ, ಜನಾಭಿಪ್ರಾಯ ಸಂಗ್ರಹಕ್ಕೆ ಆಗ್ರಹಿಸಲಾಯಿತು. ಜುಲೈ 5, 2015 ರಲ್ಲಿ ನಡೆದ ಜನಾಭಿಪ್ರಾಯದ ಸಂಗ್ರಹದಲ್ಲಿ ಶೇ. 61 ರಷ್ಟು ಜನ ಈ ಮಿತವ್ಯಯ ಕ್ರಮಗಳನ್ನು ತಿರಸ್ಕರಿಸಿ, ಐತಿಹಾಸಿಕ ತೀರ್ಪು ನೀಡಿದರು. ಈ ತೀರ್ಪು ಗ್ರೀಕ್ ಜನರಿಗೆ ಮಾತ್ರವಲ್ಲದೆ, ವಿಶ್ವದಾಂದ್ಯತ ನವ ಉದಾರವಾದದ ವಿರುದ್ಧ ಹೋರಾಡುತ್ತಿರುವ ಪ್ರತಿಯೊಬ್ಬರಿಗೂ ಹಾಗೂ ಪ್ರಗತಿ ಪರ ಚಿಂತನೆಯ ಜನರಿಗೂ ಭಾರೀ ಶಕ್ತಿಯನ್ನೂ ತಂದುಕೊಟ್ಟಿತ್ತು. ಒಟ್ಟಾರೆಯಾಗಿ ಇಡೀ ಯುರೋಪಿಯನ್ ನಾಡಿನಾದ್ಯಂತ ಜನರನ್ನೂ ಹೋರಾಟಗಾರರನ್ನು ಪುಳುಕಿತಗೊಳಿಸಿತ್ತು. ಇದರಿಂದಾಗಿ ಸಿರಿಜಾ ರವರು ಧೈರ್ಯವನ್ನು ತೋರಿ, ಗ್ರೀಕ್ ಜನರ ಜೀವನೋಪಾಯ ಮತ್ತು ಘನತೆಯನ್ನು ಕಾಪಾಡುತ್ತಾರೆ ಎಂಬ ಆಶಾಭಾವನೆ ಮೂಡಿತ್ತು.

ಸಂಸತ್ತಿನಲ್ಲಿ ಬೇಲ್ ಔಟ್ ಪ್ಯಾಕೇಜು – ಅಂಗೀಕಾರ

ಇಸಿ–ಇಸಿಬಿ–ಐಎಂಎಫ್–ತ್ರಿಮೂರ್ತಿಗಳ 'ಟ್ರೊಯಿಕಾ' ವು ಹಾಗೂ ಯುರೋಪಿನ ಆಳುವ ವರ್ಗಗಳು ಜನಾಭಿಪ್ರಾಯ ಸಂಗ್ರಹಕ್ಕೆ ಅಥವಾ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಬೆಲೆ ಕೊಡುವುದಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಯಿತು. ಪ್ರಜಾಪ್ರಭುತ್ವದ ಈ ಆದೇಶವನ್ನೂ ಕುಖ್ಯಾತ ರೀತಿಯಲ್ಲಿ ತಿರಸ್ಕರಿಸಿದರು. ಸಿರಿಜಾ ಸರ್ಕಾರವು ಈ ಸಂಕಷ್ಟಗಳಿಂದ ದೇಶವನ್ನು ಪಾರು ಮಾಡಬೇಕಿದ್ದರೆ 'ಯುರೋ ವಲಯ' ದಿಂದ ಹೊರನಡೆಯಬೇಕಿತ್ತು ಅಷ್ಟೆ. ಬೇರೆ ಯಾವುದೇ ಅನ್ಯಮಾರ್ಗವಿರಲಿಲ್ಲ.

ಆದರೆ, ಜನಾಭಿಪ್ರಾಯದ 5 ದಿನಗಳ ನಂತರ ಸಿರಿಜಾ ಸರ್ಕಾರದ ಬೆರಗುಗೊಳಿಸುವ ಜಾಣಕುರುಡು ಪ್ರದರ್ಶನಗೊಂಡಿತು. ಜನರಿಂದ ತಿರಸ್ಕೃತಗೊಂಡ 'ಟ್ರೊಯಿಕಾ' ಒಪ್ಪಂದವನ್ನು ಮತ್ತೆ ಸಂಸತ್ತಿನಲ್ಲಿ ಮಂಡಿಸಿ ಬೇಲ್ ಔಟ್ ಪ್ಯಾಕೇಜು ಅಂಗೀಕರಿಸಿತು. ಇದಕ್ಕೆ ಗ್ರೀಕ್ ಕಮ್ಯುನಿಸ್ಟ್ ಪಕ್ಷ (ಕೆ.. ಕೆ.ಇ.) ಪ್ರಮುಖವಾಗಿ ವಿರೋಧ ವ್ಯಕ್ತಪಡಿಸಿತು. ಟ್ರೊಯಿಕಾ ದ ನಿರ್ದಯ ನೀತಿಯನ್ನು ಕೆಕೆಇ ಜನರ ಮಧ್ಯೆ ಕೊಂಡೊಯ್ದು ಪ್ರತಿಭಟಿಸಿತು. ಸಿರಿಜಾ ರವರು ದೇಶದ ಜನರಿಗೆ ಎಸಗಿದ ಈ ಬಾರೀ ಮೋಸದಿಂದ ರೊಚ್ಚಿಗೆದ್ದ ಆಡಳಿತರೂಢ ಪಕ್ಷದ 25 ಸಂಸದರು ಆಚೆ ಬಂದು ಹೊಸ ಪಕ್ಷವಾದ 'ಪಾಪ್ಯುಲರ್ ಯುನಿಟಿ' ಯನ್ನು ರಚಿಸಿದರು. ಇದರಿಂದ ಬಹುಮತ ಕಳೆದುಕೊಂಡ ಸಿರಿಜಾ ಸರ್ಕಾರವು ಸಂಸತ್ ವಿಸರ್ಜಿಸಿ ಸೆಪ್ಟಂಬರ್ 2015 ರಲ್ಲಿ ಕ್ಷಿಪ್ರ ಚುನಾವಣೆ ನಡೆಸಿತು. ಈ ಚುನಾವಣೆಯಲ್ಲಿ ಕಡಿಮೆ ಸ್ಥಾನಗಳನ್ನು ಪಡೆದ ಸಿರಿಜಾ ಬಲಪಂಥೀಯ ಪಕ್ಷವಾದ "ಸ್ವತಂತ್ರ ಗ್ರೀಕರು' – ಎ.ಎನ್.ಇ.ಎಲ್. ನೊಂದಿಗೆ ಮೈತ್ರಿ ಮಾಡಿಕೊಂಡು ಮತ್ತೆ ಅಧಿಕಾರ ಹಿಡಿದರು.

ಮತ್ತಷ್ಟು ಕ್ರೂರ ಕ್ರಮಗಳು

ಈ ಮೈತ್ರಿಕೂಟವು ಮತ್ತಷ್ಟು ಕಠಿಣ ಕ್ರಮಗಳನ್ನು ಮುಂದುವರಿಸಲು, ಸಾಮಾಜಿಕ ಭದ್ರತೆ ಯೋಜನೆಗಳ ಮೆಳೆ ಗದಾ ಪ್ರಹಾರ ಮುಂದುವರಿಸಿದರು. ಗ್ರೀಕ್ ನ 12 ಪ್ರಾದೇಶಿಕ ವಿಮಾನ ನಿಲ್ದಾಣಗಳ ನಿಯಂತ್ರಣವನ್ನು ಜರ್ಮನ್ ಏರ್‌ಪೋರ್ಟ್ ಆಯೋಜಕರಿಗೆ ಎಪ್ರಿಲ್ 2017 ರಲ್ಲಿ 1.2 ಶತಕೋಟಿ ಯೂರೋ ಗಳಿಗೆ ಮಾರಿಕೊಳ್ಳಲಾಯಿತು. ದೇಶದ ಅತಿ ದೊಡ್ಡ 'ಪಿರಾಯಸ್' ಹಡಗು ಬಂದರನ್ನು 2016 ರ ಆಗಸ್ಟ್ ನಲ್ಲಿ ಕಾರ್ಮಿಕರ ತೀವ್ರ ವಿರೋಧ ಇದಾಗ್ಯೂ ಸಹ ಖಾಸಗೀಕರಣಗೊಳಿಸಲಾಯಿತು. ಮತ್ತೊಂದು ಬಂದರಾದ 'ಥೆಸ್ಸಲೋನಿಕ' ಯನ್ನು ಖಾಸಗೀಕರಣಗೊಳಿಸುವುದಾಗಿ 2018 ರ ಫೆಬ್ರವರಿಯಲ್ಲಿ ಒಪ್ಪಂದಕ್ಕೆ ಸಹಿ ಮಾಡಲಾಗಿದೆ.

ಅಲ್ಲದೆ, ಈಗಾಗಲೆ 2019 ಕ್ಕೆ ಶೇ. 40 ರಷ್ಟು ಪಿಂಚಣಿಯನ್ನು ಕಡಿತಗೊಳಿಸಲಾಗಿತ್ತು. ಇದೀಗ ಮತ್ತಷ್ಟು ಅಂದರೆ ಶೇ. 19 ರಷ್ಟು ಕಡಿತವನ್ನು ಏರಿಕೆ ಮಾಡಲಾಗಿದೆ. 2016 ರಲ್ಲಿ ಶೇ. 23.6 ರಷ್ಟು ನಿರುದ್ಯೋಗದ ಪ್ರಮಾಣವು ಏರಿಕೆಯಾಗಿದೆ. 2015 ರಲ್ಲಿ ಅರೆಕಾಲಿಕ ಉದ್ಯೋಗಗಳು ಶೇ. 23.1 ರಷ್ಟು ಇದ್ದದ್ದು, 2016 ಕ್ಕೆ 26.4 ಕ್ಕೆ ಏರಿದೆ. ಒಟ್ಟಾರೆಯಾಗಿ ಸರ್ಕಾರದ ಖರ್ಚುಗಳ ಕಡಿತ ಮಾಡಿಕೊಂಡರೂ ಸಹ ಜಿಡಿಪಿಯ ಋಣಾತ್ಮಕ ಬೆಳವಣಿಗೆ ಹಾಗೆಯೇ ಮುಂದುವರಿದಿದೆ.

ಈ ಹಿಂದೆ ಸಿರಿಜಾ ಸರ್ಕಾರವು ಗ್ರೀಕ್ ದೇಶವು ನ್ಯಾಟೋ ದಿಂದ ಹೊರಬರಬೇಕೆಂಬ ನಿರ್ಣಯವನ್ನು ಇದೀಗ ಕೈಬಿಟ್ಟು, ಸಿರಿಜಾ ಮಿಲಿಟರಿ ಮೈತ್ರಿಯನ್ನು ಮುಂದುವರಿಸಲು ತೀರ್ಮಾನಿಸಿದೆ. ಇರಾಕ್, ಲಿಬಿಯಾ ಮತ್ತು ಸಿರಿಯಾ ಮೇಲೆ ನ್ಯಾಟೋ ಯುದ್ಧಗಳನ್ನು ನಡೆಸಲು ಗ್ರೀಕ್ ಸರ್ಕಾರ, ಮಿಲಿಟರಿ ನೆಲೆಗಳನ್ನು ಒದಗಿಸಿದೆ. ಒಮ್ಮೆ ಇಸ್ರೇಲಿನೊಂದಿಗೆ ಮಿಲಿಟರಿ ಸಂಬಂಧಗಳನ್ನು ಕಡಿತಗೊಳಿಸಬೇಕೆಂದು ಬಯಸಿದ್ದ ಸಿರಿಜಾ ಅದರ ಜತೆ ಮಿಲಿಟರಿ ಸಹಯೋಗವನ್ನು ಬಲಪಡಿಸಿದೆ.

ಕಾರ್ಮಿಕರ ಮುಷ್ಕರದ ಹಕ್ಕನ್ನೂ ನಿರ್ಬಂಧಿಸಲು ಮುಂದಾಗಿರುವದು ದೇಶದಲ್ಲಿ ಬಾರೀ ಪ್ರತಿಭಟನೆಗೆ ಕಾರಣವಾಗಿದೆ. ಯುರೋಪಿನಲ್ಲಿ ಯೂನಿಯನ್‌ಗಳ ನಿರ್ಬಂಧಿಸುವ ಕಾನೂನು, ದೇಶಕ್ಕೆ ಬೇಲ್ ಔಟ್ ಪ್ಯಾಕೇಜುಗಳು–ಇದು ಟ್ರೊಯಿಕಾದ ಒತ್ತಾಯದ ಮೇರೆಗೆ ಜಾರಿಗೊಳ್ಳುತ್ತಿವೆ. ಹೊಸ ಕಾನೂನಿನ ವಿರುದ್ಧ ಗ್ರೀಕ್ ನಲ್ಲಿ ದೊಡ್ಡ ಪ್ರಮಾಣದಲ್ಲಿ ಮುಷ್ಕರಗಳು ನಡೆದಿವೆ.

ಗ್ರೀಕ್ ನಲ್ಲಿನ ಸಿರಿಜಾದ ಆಡಳಿತದ ಅನುಭವದಿಂದ ಒಂದ ಪಾಠ ಕಲಿಯಬೇಕಾದ್ದು, ನವ–ಉದಾರವಾದದ ದುಷ್ಪರಿಣಾಮಗಳನ್ನು ಕೊನೆಗಾಣಿಸಲು – ಟ್ರೊಯಿಕಾ ದಂತಹ ಹಣಕಾಸು ಬಂಡವಾಳದೊಂದಿಗೆ ರಾಜಿಮಾಡಿಕೊಂಡರೆ ಪರಿಹಾರ ಸಿಗುವುದಿಲ್ಲ. ಅದರ ವಿರುದ್ಧ ಹೋರಾಡಿ ಜನಬಲದಿಂದ ಅದನ್ನು ಕೊನೆಗಾಣಿಸಬೇಕು ಅಷ್ಟೆ. ●

ಕುಂದಾಪುರ ಗಂಗೊಳ್ಳಿ ಬಂದರು ಕುಸಿತ

ಉಡುಪಿ ಜಿಲ್ಲೆಯ ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಗಂಗೋಳ್ಳಿ ಮೀನುಗಾರಿಕ ಬಂದರು ಕುಸಿತ ಹಿನ್ನೆಲೆಯಲ್ಲಿ ಇಂದು ಸಿಪಿಐ(ಎಂ) ಪಕ್ಷದ ತಂಡವು ಬಂದರಿಗೆ ಭೇಟಿ ನೀಡಿತು. ಬಂದರಿನ ಜೆಟ್ಟಿಯ ಒಂದೊಂದೆ ಪ್ಲ್ಯಾಟ್ ಫಾರ್ಮ ಗಳು ಕುಸಿತವಾಗುತ್ತಿರುವುದು ಮೀನುಗಾರರಿಗೆ ಆತಂಕ ಹುಟ್ಟಿಸುವಂತಾಗಿದೆ. ಇದಕ್ಕೆ ಹೊಂದಿಕೊಂಡಿರುವ ಹಳೆ ಜೆಟ್ಟಿಯೂ ಅಭಿವೃದ್ಧಿ ಕಾಣದಿರುವುದು ಜನಪ್ರತಿನಿಧಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ರೂ. 3 ಕೋಟಿ ವೆಚ್ಚದ ದುರಸ್ತಿಯ ಕಾಮಗಾರಿ ಕಳಪೆಯಾಗಿರುವ ಶಂಕೆಯಿದೆ. ಇಲಾಖೆಯ ಬೇಜವಬ್ದಾರಿಯಿಂದ ಹೂಳೆತ್ತುವ ಕೆಲಸಗಳು ನಡೆಯದಿರುವುದನ್ನು ಸಿಪಿಐ(ಎಂ) ಖಂಡಿಸುತ್ತದೆ. ಸಾವಿರಾರು ಜನರಿಗೆ ಅನ್ನ ನೀಡುತ್ತಿರುವ ಮೀನುಗಾರಿಕೆ ಕೇಂದ್ರವನ್ನು ನಿರ್ಲಕ್ಷ್ಯ ಮಾಡಿದರೆ ಅಲ್ಲಿನ ಕಾರ್ಮಿಕರನ್ನು ಒಗ್ಗೂಡಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಸಿಪಿಐ(ಎಂ) ಪಕ್ಷ ತೀರ್ಮಾನಿಸುತ್ತದೆ. ಅಲ್ಲದೇ ಜೆಟ್ಟಿಯ ಸನಿಹದಲ್ಲಿ ಜನವಸತಿ ಪ್ರದೇಶದಲ್ಲಿ ಡಂಪಿಂಗ್ ಯಾರ್ಡ್ ಮಾಡಲು ಹೊರಟ ಕ್ರಮವನ್ನು ಸಿಪಿಐ(ಎಂ) ವಿರೋಧಿಸುತ್ತದೆ. ಇದರಿಂದ ಮೀನುಗಾರಿಕೆಗೆ ತೊಂದರೆಯಾಗಿ ಗಂಗೊಳ್ಳಿ ಅಭಿವೃದ್ಧಿಗೆ ಕಂಟಕವಾಗಲಿದೆ ಎಂದು ಸಿಪಿಐ(ಎಂ) ಪಕ್ಷ ಎಚ್ಚರಿಸಿದೆ. ಸ್ಥಳಕ್ಕೆ ಭೇಟಿ ನೀಡಿದ ನಿಯೋಗದಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಾಲಕ್ರಷ್ಣ ಶೆಟ್ಟಿ, ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಕಟ್ಟಡ ಕಾರ್ಮಿಕ ಸಂಘದ ಮುಖಂಡರಾದ ಅರುಣ್ ಕುಮಾರ್ ಗಂಗೋಳ್ಳಿ ಇದ್ದರು.

– ಸುರೇಶ್ ಕಲ್ಲಾಗರ

JANASHAKTHI KANNADA VARA PATRIKE FEB 26-MAR 4, 2018 Price : Rs. 10/- Date of Publication : 23 February 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಫೆ. 23 : ರೈತ ಸಂಘ ವಿಧಾನಸೌಧ ಚಲೋ ಬಗರ್ ಹುಕುಂ ಚಳುವಳಿಗೆ ಜಯ

"ರಾಜ್ಯ ವಿಧಾನ ಸಭೆಯು ಭೂ ಕಂದಾಯ ತಿದ್ದುಪಡಿ ವಿದೇಯಕ–2018ನ್ನು ಅಂಗೀಕರಿಸುವ ಮೂಲಕ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ನೀಡುವ ತೀರ್ಮಾನವನ್ನು ಕೈಗೊಂಡಿದೆ. ವಿಧಾನ ಮಂಡಲ ಅಂಗೀಕರಿಸುವ ಮೂಲಕ ರಾಜ್ಯಪಾಲರ ಒಪ್ಪಿಗೆಗೆ ಇದನ್ನು ಕೂಡಲೇ ಕಳುಹಿಸಿಕೊಡಲಾಗುವುದು. ರಾಜ್ಯದ ಬಗರ್ ಹುಕುಂ ಸಾಗುವಳಿದಾರರೆಲ್ಲರೂ ಮುಂದಿನ ಡಿಸೆಂಬರ್ ತಿಂಗಳವರೆಗೆ ಹಕ್ಕು ಪತ್ರಕ್ಕಾಗಿ ಹೊಸದಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ" ಎಂದು ಕಂದಾಯ ಸಚಿವ ಶ್ರೀ ಕಾಗೋಡು ತಿಮ್ಮಪ್ಪನವರು ಪ್ರಕಟಿಸಿದರು. ಕರ್ನಾಟಕ ಪ್ರಾಂತ ರೈತ ಸಂಘ ಫೆ. 23ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನ ಬಳಿ ಇರುವ ಕಾಳಿದಾಸ ಸರ್ಕಲ್ ನಲ್ಲಿ ಹಮ್ಮಿಕೊಂಡಿದ್ದ 2,500ಕ್ಕೂ ಅಧಿಕ ರೈತರ ಪ್ರತಿಭಟನಾ ಪ್ರದರ್ಶನದಲ್ಲಿ ಅವರು ಮಾತನಾಡುತ್ತಿದ್ದರು. ಮುಂದುವರೆದು ರೈತರು ತಮ್ಮ ಬಗರ್ ಹುಕುಂ ಸಾಗುವಳಿ ಹಕ್ಕು ಪಡೆಯಲು ಮತ್ತು ಅವುಗಳನ್ನು ಭೂಗಳ್ಳರ ಪಾಲಾಗದಂತೆ ನೋಡಿಕೊಳ್ಳಲು ಹೋರಾಟವನ್ನು ಮುಂದುವರೆಸಬೇಕೆಂದು ಕರೆ ನೀಡಿದರು.

ಇದು, ಕಳೆದ ಒಂದು ದಶಕದಿಂದ ಲಕ್ಷಾಂತರ ಬಗರ್ ಹುಕುಂ ಸಾಗುವಳಿದಾರರು ಮತ್ತು ಕೂಲಿಕಾರರನ್ನು ರಾಜ್ಯದಾದ್ಯಂತ ಸಂಘಟಿಸಿ, ಕರ್ನಾಟಕ ಪ್ರಾಂತ ರೈತ ಸಂಘ ಸ್ವತಂತ್ರವಾಗಿಯೂ ಮತ್ತು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಹಾಗೂ ಎಡ ಮತ್ತು ಪ್ರಗತಿಪರ ರೈತ ಸಂಘಗಳು ಮತ್ತು ಇತರೇ ಸಾಮೂಹಿಕ ಸಂಘಟನೆಗಳ ಜೊತೆ ಸೇರಿ ನಡೆಸಿದ ನಿರಂತರ ಜಂಟಿ ಹೋರಾಟಕ್ಕೆ ಮತ್ತು ಹೋರಾಟ ನಿರತ ರೈತರಿಗೆ ಸಂದ ಜಯವಿದಾಗಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಘೋಷಿಸಿದೆ. ಇದರಿಂದ ಮಿಲಿಯಾಂತರ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ಉಂಟಾಗಿದೆ. ಈ ಮೂಲಕ ಕಳೆದ ಒಂದು ದಶಕದಿಂದ ಇವರನ್ನು ಭೂಗಳ್ಳರೆಂದು ಜರಿದು, ಅವರನ್ನು ಬೆದರಿಸಿ ಒಕ್ಕಲೆಬ್ಬಿಸುವ ಪ್ರಯತ್ನ ಮತ್ತು ಈ ಎಲ್ಲ ಬಡವರಿಂದ ಅವರ ಸಂಕಷ್ಟದ ನಡುವೆ ಅಭಿವೃದ್ದಿ ಪಡಿಸಲ್ಪಟ್ಟ ರೈತರ ಮಿಲಿಯಾಂತರ ಎಕ್ಕರೆ ಜಮೀನುಗಳನ್ನು ಭೂ ಬ್ಯಾಂಕ್‌ಗೆ ಸೇರ್ಪಡೆ ಮಾಡುವ ಮತ್ತು ಅವುಗಳನ್ನು ಕಂಪೆನಿ ಕೃಷಿಗೆ ನೀಡುವ ಸಂಚನ್ನು ವಿಫಲಗೊಳಿಸಲು ರಾಜ್ಯದ ರೈತರಿಗೆ ಅವರ ನಿರಂತರ ಹೋರಾಟದ ಮೂಲಕ ಸಾದ್ಯವಾಗಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘ ಹರ್ಷ ವ್ಯಕ್ತಪಡಿಸಿದೆ.

ಕಂಪೆನಿ ಹಾಗೂ ಗುತ್ತಿಗೆ ಕೃಷಿಯನ್ನು ವಾಪಾಸು ಪಡೆಯಲು ಮತ್ತು ಬಗರ್ ಹುಕುಂ ಬಡ ಸಾಗುವಳಿದಾರರಿಗೆ ಹಕ್ಕು ಪತ್ರಕ್ಕಾಗಿ ಮತ್ತು ದಲಿತರು ಸೇರಿದಂತೆ ಎಲ್ಲ ಬಡವರಿಗೆ ಮನೆ ನಿವೇಶನ ಹಾಗೂ ತಲಾ ಐದು ಎಕರೆ ಜಮೀನು ಒದಗಿಸಲು ಮತ್ತಿತರೇ ಹಕ್ಕೊತ್ತಾಯಗಳ ಬಗ್ಗೆ ಸರಕಾರವನ್ನು ಒತ್ತಾಯಿಸಲು ಕರ್ನಾಟಕ ಪ್ರಾಂತ ರೈತ ಸಂಘ ಫೆ. 23ರಂದು ವಿಧಾನ ಸೌಧ ಚಲೋ ಸಂಘಟಿಸಿತ್ತು. ಈ ಹಕ್ಕೊತ್ತಾಯಗಳನ್ನು ಒಳಗೊಂಡ ಮನವಿ ಪತ್ರವನ್ನು ಸಚಿವ ಕಾಗೋಡು ತಿಮ್ಮಪ್ಪನವೆರ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು.

ರಾಜ್ಯ ಸರಕಾರದ ಖಾಯಮೇತರರ ನೌಕರರ ಒಕ್ಕೂಟದ ವಿಧಾನಸೌಧ ಚಲೋ



ಫೆ.23ರಂದು ರಾಜ್ಯ ಸರಕಾರದ ಖಾಯಮೇತರ ನೌಕರರ ಒಕ್ಕೂಟ (ಸಿಐಟಿಯು) ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ವಿಧಾನ ಸೌಧ ಚಲೋ ಹಮ್ಮಿಕೊಂಡಿತ್ತು. ರಾಜ್ಯ ಸರಕಾರದಡಿ ಇರುವ ಎನ್.ಎಚ್.ಎಂ., ಎಸ್.ಎಸ್.ಎ., ಮತ್ತಿತರ ಇಲಾಖೆಗಳಲ್ಲಿ ದುಡಿಯುತ್ತಿರುವ ಗುತ್ತಿಗೆ, ಹೊರಗುತ್ತಿಗೆ ನೌಕರರ ಮತ್ತು ಅತಿಥಿ ಉಪನ್ಯಾಸಕರ ಖಾಯಮಾತಿ ಪ್ರಮುಖ ಬೇಡಿಕೆಯಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಜನ ಗುತ್ತಿಗೆ, ಹೊರಗುತ್ತಿಗೆ ನೌಕರರು ನಗರದ ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಹೊರಟರು. ಫ್ರೀಡಂ ಪಾರ್ಕಿನಲ್ಲಿ ಪ್ರತಿಭಟನಾ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿಗಳಾದ ಮೀನಾಕ್ಷಿಸುಂದರಂ ಮತ್ತಿತರರು ಮಾತನಾಡಿದರು.

ಈ ಕೆಳಗಿನವು ಒಕ್ಕೂಟದ ಇತರ ಬೇಡಿಕೆಗಳಾಗಿದ್ದವು:

- ಸುಪ್ರೀಂ ಕೋರ್ಟ ನಿರ್ದೇಶನದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿ ಮಾಡುವುದು
- ಆಯಾ ಇಲಾಖೆ ಹಾಗೂ ನಿಗಮ ಮಂಡಳಿಗಳಲ್ಲಿ ನೇರ ನೇಮಕಾತಿ ಮಾಡುವಾಗ ಗುತ್ತಿಗೆ, ಹೊರಗುತ್ತಿಗೆ ನೌಕರರಿಗೆ ಮೊದಲ ಆದ್ಯತೆ ನೀಡಬೇಕು.
- ಖಾಯಂ ಅಲ್ಲದ ನೌಕರರನ್ನು ಖಾಯಂ ಮಾಡಲು ಸರಕಾರ ವಿಶೇಷ ಸೇವಾ ನಿಯಮಾವಳಿಗಳನ್ನು ರಚಿಸುವುದು.
- ನೇಮಕಾತಿ, ವರ್ಗಾವಣೆ, ಬಡ್ತಿಗಳಾದಾಗ ಈಗಾಗಲೇ ಕೆಲಸ ಮಾಡುತ್ತಿರುವ ನೌಕರರನ್ನು ಕೆಲಸದಿಂದ ತೆಗೆಯುವ ಕ್ರಮವನ್ನು ನಿಲ್ಲಿಸಬೇಕು. ಉದಾ: ಅತಿಥಿ ಉಪನ್ಯಾಸಕರು, ಡಾಟಾ ಆಪರೇಟರ್ಸ್.
- ಮಹಿಳಾ ನೌಕರರಿಗೆ ಕಡ್ಡಾಯವಾಗಿ ವೇತನ ಸಹಿತವಾದ 6 ತಿಂಗಳು ರಜೆ ಹಾಗೂ ಹೆರಿಗೆ ಭತ್ತೆ ಸೌಲಭ್ಯ ನೀಡಬೇಕು.
- ಅತಿಥಿ ಉಪನ್ಯಸಾಕರಿಗೆ ಸೇವೆಯಲ್ಲಿ ವಿಲೀನಗೊಳ್ಳುವವರೆಗೆ 25 ಸಾವಿರ ವೇತನ ಪ್ರತಿ ತಿಂಗಳು ಮೊದಲ ವಾರದಲ್ಲಿ ನೀಡಬೇಕು.





ಅರಣ್ಯ ಭೂಮಿಗೆ ಅನಿರ್ದಿಷ್ಟ ಧರಣಿ

ಉ ಕ ಜಿಲ್ಲಾಧಿಕಾರಿ ಕಛೇರಿ ಎದುರು ಅರಣ್ಯ ಸಾಗುವಳಿ ಭೂಮಿ ಮತ್ತು ವಾಸ್ತವ್ಯ ಭೂಮಿ ಹಕ್ಕುಪತ್ರಕ್ಕೆ ಆಗ್ರಹ, ಕಾರವಾರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಹೋರಾಟ ಫೆ. 22ರಿಂದ ಆರಂಭವಾಗಿದ್ದು ಎರಡನೇ ದಿನ ಪ್ರವೇಶಿಸಿದೆ.



ವಿದ್ಯುತ್ ಗುತ್ತಿಗೆ ನೌಕರರ ಅನಿರ್ದಿಷ್ಟ ಧರಣಿ

ಇಂಧನ ಇಲಾಖೆಯ ಗುತ್ತಿಗೆ ಹೊರಗುತ್ತಿಗೆ ನೌಕರರ ಅನಿರ್ದಿಷ್ಟ ಹೋರಾಟ ಫೆ. 21ರಂದು ಮೆರವಣಿಗೆಯ ಮೂಲಕ ಆರಂಭವಾಯಿತು. ಅಂದಿನಿಂದಲೆ ಕೆಪಿಸಿಟಿಎಲ್ ಕಚೇರಿ ಮುಂದೆ ಅನಿರ್ದಿಷ್ಟ ಧರಣಿ ಆರಂಭವಾಗಿದ್ದು ಈಗಾಗಲೇ 3ನೇ ದಿನ (ಪತ್ರಿಕೆ ಪ್ರಿಂಟಿಗೆ ಹೋಗುವ ಫೆ.23ರಂದು) ಪ್ರವೇಶಿಸಿದೆ.





JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**